ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly Special Issue

ಸಂಪುಟ – 3 : ವಿಶೇಷ ಸಂಚಿಕೆ – 1 ಮೇ -ಜೂನ್-ಜುಲೈ 2021 ಪುಟ – 52 ₹ 50/-







ಹೋರಾಟದ ಪಯಣ ಮುಗಿಸಿದ ಸ್ವಾತಂತ್ರ್ಯ ಸೇನಾನಿ, ಹಿರಿಯ ಗಾಂಧಿವಾದಿ

ಡಾ. ಎಚ್.ಎಸ್. ದೊರೆಸ್ವಾಮಿ



ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022 ವಿಶೇಷ ಸಂಚಿಕೆ

ಡಾ. ದೊರೆ ಅವರು ಹೀಗಿದ್ದರು ಸ್ವಾಮಿ

(10.04.1918 – 26.05.2021)

– ಇಂದಿರಾ ಕೃಷ್ಣಪ್ಪ

ಈ ಶತಮಾನದ ಸಾಕ್ಷಿಪ್ರಜ್ಞೆಯಾಗಿದ್ದ ಡಾ. ಎಚ್.ಎಸ್. ದೊರೆಸ್ವಾಮಿ ಅವರು ಕನ್ನಡನಾಡಿನಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸಕಾರರಾಗಿದ್ದರೆಂದೇ ಹೇಳಬಹುದು. ಇವರು ಬ್ರಿಟಿಷರ ಭಾರತದಲ್ಲಿ ಸ್ವತಂತ್ರ ಭಾರತಕ್ಕಾಗಿ ಹೋರಾಟ ಮತ್ತು ಸ್ವತಂತ್ರ ಭಾರತದಲ್ಲಿ, ಪ್ರಬುದ್ಧ ಭಾರತ ಕಟ್ಟುವ ಹೋರಾಟಗಾರರಾಗಿದ್ದರು. ನೂರಾ ನಾಲ್ಕು ವರ್ಷದ ಹಿರಿಯ ವ್ಯಕ್ತಿ, ಜನರು, ಭಾರತದ ಪ್ರಜೆಯಾಗಿ ಹೇಗೆ ಬದುಕಬೇಕೆಂಬುದನ್ನು ಬದುಕಿ ತೋರಿಸಿದ ಅನನ್ಯ ಚೇತನವಾಗಿದ್ದರು. ಅಂತಿಮ ಕ್ಷಣದವರೆಗೂ ದೇಶ, ನಾಡು, ಜನರ ಸ್ವಾತಂತ್ರ್ಯ, ಹಕ್ಕುಗಳ ಬಗ್ಗೆಯೇ ಚಿಂತಿಸುತ್ತಾ, ಮಾತನಾಡುತ್ತಾ, ಸಮಾಜ ಮತ್ತು ಜನಪ್ರತಿನಿಧಿಗಳನ್ನು ಜಾಗೃತಿಗೊಳಿಸುತ್ತಾ ಸಾಗಿದರು.

ಅಪ್ಪಟ ದೇಶಪ್ರೇಮಿಯೊಬ್ಬ ಮಹಾತ್ಮ ಗಾಂಧೀಜಿ ಅವರ ಸತ್ಯ, ಅಹಿಂಸೆ, ಸರಳತೆ, ಸಮಾನತೆ ಹಾಗೂ ಜಾತ್ಯಾತೀತತೆಯ ಮಾರ್ಗದಿಂದ ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ ಸಾರ್ವಜನಿಕ ವಾತಾವರಣವನ್ನು ನಿರ್ಮಿಸ ಬಹುದೆಂಬುದರ ಮಾದರಿಯಾದವರು ಎಚ್.ಎಸ್.ಡಿ. ಅವರು. ಜೀವಮಾನದುದ್ದಕ್ಕೂ ಬಡವರು, ನಿರಾಶ್ರಿತರು, ಶೋಷಿತರ ಪರವಾಗಿ ಹೋರಾಡುತ್ತಾ, ಸರ್ಕಾರ ಸಮಾಜದ ಯೋಜನೆಗಳು, ಕಾರ್ಯಗಳು ಜನಪರವಾಗಿದ್ದಾಗ ಮಾತ್ರ ಅದು ದೇಶವನ್ನೂ, ಆಳುವ ಸರ್ಕಾರವನ್ನೂ ರಕ್ಷಿಸುತ್ತದೆ ಎಂದೂ ಸದಾ ಎಚ್ಚರಿಸುತ್ತಿದ್ದರು. ಅವರ ತುಂಬು ಜೀವನವನ್ನು ನಾವು ಮೂರು ಆಯಾಮಗಳಲ್ಲಿ ವಿಶ್ಲೇಷಿಸಿಕೊಳ್ಳಬಹುದು. ಅವುಗಳೆಂದರೆ :–

- ವಿದ್ಯಾರ್ಥಿಯಾಗಿದ್ದ ದೊರೆಸ್ವಾಮಿಯ ಆಶಯಗಳು ಮತ್ತು ಸ್ವಾತಂತ್ರ್ಯ ಹೋರಾಟದ ಸೇನಾನಿಯಾದದ್ದು
- ಮೈಸೂರು ರಾಜ್ಯ ಹಾಗೂ ಕರ್ನಾಟಕ ಏಕೀಕರಣದ ಹೋರಾಟಗಾರ
- ಪ್ರಬುದ್ಧ ಭಾರತ ನಿರ್ಮಾಣದ ಚಳುವಳಿಗಾರ.

ಮಹಾತ್ಮಾಜೀ ಅವರ ಅನುಯಾಯಿಯಾಗಿ, ಗಾಂಧಿ ಮಾರ್ಗದಿಂದ ಜಾಗತಿಕವಾಗಿ ಚಿಂತಿಸುತ್ತಾ ನಾಡನ್ನು ಕಟ್ಟಿದ ಸರಳತೆಯ ಸಾಕಾರ ಸ್ವರೂಪರಾಗಿದ್ದಾರೆ. ಅವರ ಹೋರಾಟಗಳು ನಾಲ್ಕು ಪ್ರಮುಖ ವಿಭಾಗಗಳಲ್ಲಿ ಅವಲೋಕಿಸಬಹುದು. ಅವುಗಳೆಂದರೆ :–

- ಬಡವರ ಹಕ್ಕಿನ ಚಳುವಳಿ
- ಪರಿಸರ ಸತ್ಯಾಗ್ರಹಗಳು
- ಸಾಮಾಜಿಕ ಆಂದೋಲನ
- ಪತ್ರಿಕಾ ಮಾಧ್ಯಮದ ಹೋರಾಟ.

ಎಚ್.ಎಸ್.ಡಿ. ಅವರು ಗಾಂಧೀಜಿ ಅವರ ಸತ್ಯಾಗ್ರಹದ ಮಾರ್ಗಗಳಾದ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ಧರಣಿ ಸತ್ಯಾಗ್ರಹ, ಸರಣಿಸತ್ಯಾಗ್ರಹ, ನಿರಂತರ ಸತ್ಯಾಗ್ರಹದ ಮೂಲಕ, ಹೋರಾಟದ ಆಶಯ ಸಿದ್ಧಿಸುವವರೆಗೂ ಅವಿರತವಾಗಿ ಆಂದೋಲನದಲ್ಲಿ ತೊಡಗುತ್ತಿದ್ದರು. ಸಾಂಕೇತಿಕ ಪ್ರತಿಭಟನೆಗಳು, ನಾಮಕಾವಸ್ತೆ ಧರಣಿಗಳು, ಕುರಿತಾಗಿ ಅವರು



"ನೀವು ಈ ರೀತಿಯ ಪ್ರತಿಭಟನೆಯಿಂದ ಸಾಧಿಸುವುದೇನು? ಇದರಿಂದ ಶ್ರಮ ಮತ್ತು ಹಣ ವ್ಯಯವಾಗುವುದಿಲ್ಲವೇ? ಹೀಗೆ ಮಾಡುವುದರಿಂದ, ಜನರ ಸಂಕಷ್ಟಗಳು ನಿವಾರಣೆ ಯಾಗುವುದೇ?" ಎಂದು ಪ್ರಶ್ನಿಸುತ್ತಿದ್ದರು. ಚಳುವಳಿಗಳು, ಜನರ ಕಷ್ಟ, ನೋವು, ತೊಂದರೆಗಳನ್ನು ಪರಿಹಾರವಾಗುವವರೆಗೂ ನಿರಂತರವಾಗಿರಬೇಕು. ತೋರಿಕೆಯ ಮತ್ತು ಸರ್ಕಾರವನ್ನು ಹೆದರಿಸುವ, ಜನಪ್ರತಿನಿಧಿಗಳನ್ನು ಬೆದರಿಸುವ ತಂತ್ರಗಾರಿಕೆಯ ಚಳುವಳಿಗಳನ್ನು ಅವರು ವಿರೋಧಿಸುತ್ತಿದ್ದರು. ಮತ್ತು ಹೋರಾಟಗಾರರಿಗೆ ತಿಳುವಳಿಕೆ ಹೇಳಿ ಬೇಡಿಕೆಗಳು ಈಡೇರುವವರೆಗೂ ಹೋರಾಟ ಮಾಡಲು ಪ್ರೇರೇಪಿಸುತ್ತಾ, ತಾವೇ ಸ್ವತಹ ಸತ್ಯಾಗ್ರಹದಲ್ಲಿ ಕುಳಿತು ಬಿಡುತ್ತಿದ್ದರು. ಹೀಗೆ ಅವರೇ ಭಾಗಿಯಾದ ಯೋಜಿತ ಆಶಯಗಳುಳ್ಳ ಜನಪರ ಹೋರಾಟಗಳೆಂದರೆ :–

- ಭೂಮಿ ಮತ್ತು ವಸತಿ ಹಕ್ಕು ಹೋರಾಟಗಳು,
  ಭೂದಾನ ಚಳುವಳಿ
  ಭೂ ಕಬಳಿಕೆ ವಿರೋಧಿ ಹೋರಾಟ
  ದಿಡ್ಡಳ್ಳಿ ಆದಿವಾಸಿಗಳ ಹೋರಾಟ
- ಪರಿಸರ ಹೋರಾಟಗಳು
  ಕೈಗಾ ಅಣುಸ್ಥಾವರ ವಿರೋಧಿ ಹೋರಾಟ, ಹರಿಹರ ಪಾಲಿಫೈಬರ್ಸ್ ವಿರುದ್ಧ ಹೋರಾಟ, ನೈಸ್ ಮತ್ತು ಕಾರ್ಗಿಲ್ ಕಂಪನಿ ವಿರುದ್ಧ ಹೋರಾಟ
  ಮಂಡೂರು ಕಸ ವಿಲೇವಾರಿ ವಿರುದ್ಧ ಹೋರಾಟ
  ಕೆ.ಜಿ.ಎಫ್. ಚಿನ್ನದ ಗಣಿ ಹೋರಾಟ
- ಸಾಮಾಜಿಕ ಹೋರಾಟಗಳು
  ತುರ್ತು ಪರಿಸ್ಥಿತಿ ವಿರುದ್ಧ ಜೆ.ಪಿ. ಚಳುವಳಿ
  ಖಾದಿ, ಕೈಮಗ್ಗ ಮತ್ತು ಗ್ರಾಮೋದ್ಯೋಗದ ಹೋರಾಟ
  ಕಾವೇರಿ ನದಿ ನೀರು ಹಂಚಿಕೆ ಹೋರಾಟ
  ಮದ್ಯ ನಿಷೇಧ ಹೋರಾಟ
  ಎನ್ನಾರ್‌ಸಿ ವಿರುದ್ಧ ಹೋರಾಟ
- ಪತ್ರಿಕಾ ಮಾಧ್ಯಮದ ಹೋರಾಟ
  ಪತ್ರಕರ್ತ, ಸಂಪಾದಕರ, ಲೇಖಕ, ಪ್ರಕಾಶಕ, ವಿತರಕ, ಸಾಹಿತಿಯಾಗಿ ಹೋರಾಟಗಳು
  ಪತ್ರಕರ್ತರ ಸಂಘಟನೆ
  ಸಹಕಾರ ಸಂಘಗಳು, ಶಿಕ್ಷಣ ಮತ್ತು ಸಾಹಿತ್ಯ ಸಂಸ್ಥೆಗಳು ಸ್ಥಾಪಕರಾಗಿದ್ದು

ಮುಂದುವರಿಯುವುದು...





ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA
(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು

ಕೋವಿಡ್ ಸುನಾಮಿ ಅಲೆ ನಿಧಾನಗತಿಯಲ್ಲಿ ಇಳಿಕೆಯಾಗುತ್ತಿರುವ ಅಂಕಿ ಅಂಶಗಳನ್ನೂ ಜನಜೀವನವನ್ನು ಕಾಣುತ್ತಿರುವ ಈ ಸಂದರ್ಭದಲ್ಲಿಯೇ ಡೆಲ್ಟಾ ವೈರಸ್, ಝೀಕಾ ವೈರಸ್, ಬ್ಲಾಕ್ ಫಂಗಸ್ ಎಂಬ ರೂಪಾಂತರಿ ವೈರಸ್‌ಗಳು ಹಬ್ಬುವ ಎಚ್ಚರಿಕೆಯನ್ನು ತಜ್ಞರು, ವಿಜ್ಞಾನಿಗಳು ಕೊಡುತ್ತಿದ್ದಾರೆ. ಅತಿ ವಿಳಂಬವಾಗಿ ಕೇಂದ್ರ ಸರ್ಕಾರ ಲಸಿಕೆ ಹಾಕುವ ಕಾರ್ಯವನ್ನು ಆರಂಭಿಸಿ, ಮುಂದಿನ ದುರಂತಮಯ ಚಿತ್ರಣವನ್ನು ತಗ್ಗಿಸುವ ಪ್ರಯತ್ನವೇನೋ ಮಾಡುತ್ತಿದೆ. ಆದರೆ ಈಗಿರುವ ಕೋವಿಶೀಲ್ಡ್, ಕೋವಾಕ್ಸಿನ್‌ಗಳು ರೂಪಾಂತರಿ ವೈರಸ್‌ಗಳನ್ನು ಹಬ್ಬದಂತೆ ಮಾಡಲು ಶಕ್ತವಾಗಿವೇ? ಎಂಬ ಪ್ರಶ್ನೆ ಇದೆ. ಕರೋನಾ – 19 ಆರಂಭವಾಗಿ 2 ವರ್ಷಗಳಿಗೆ ಸಮೀಸುತ್ತಿದ್ದೇವೆ. ಸರ್ಕಾರ, ತಜ್ಞರು, ವಿಜ್ಞಾನಿಗಳು, ವೈದ್ಯರು, ವಿಶ್ವ ಆರೋಗ್ಯ ಸಂಸ್ಥೆಗಳು, ಯೋಜನಾ ವ್ಯವಸ್ಥೆ, ಜನಪ್ರತಿನಿಧಿಗಳು ಎರಡು ವರ್ಷಗಳಲ್ಲಿ ಅತಿ ಭಯಂಕರ, ತೀವ್ರ ಸೋಂಕಿನ ಈ ಪಿಡುಗಿನಿಂದ ವಿಶ್ವವನ್ನು, ದೇಶವನ್ನು ಮತ್ತು ಜನರನ್ನು ರಕ್ಷಿಸಲು ಕ್ರಮಗಳನ್ನು ಕೈಗೊಂಡ ಬಗ್ಗೆ ವಿಶ್ಲೇಷಿಸಿಕೊಂಡಾಗ ಮತ್ತು ಪುನರಾವಲೋಕನಾ ಮಾಡಿದಲ್ಲಿ ಅತಿದಾರುಣ ಪರಿಸ್ಥಿತಿಗಳು, ಅಮಾನುಷತೆ, ಬಂಡವಾಳಶಾಹಿ ಕಪಿಮುಷ್ಠಿ, ಕಾರ್ಪೋರೇಟ್ ಮಾಯಾಜಾಲ, ವೈದ್ಯವಿಜ್ಞಾನದ ಔಷಧೋದ್ಯಮದ ಕಪಿಮುಷ್ಠಿಗಳ ಆಳ ಆಂತರ್ಯಗಳು ಬಹಿರಂಗಗೊಳ್ಳುತ್ತವೆ.

ಕಾಣದ ಕ್ರಿಮಿಯ ಸಾಂಕ್ರಾಮಿಕತೆಯ ಹಿಡಿತಕ್ಕೆ ಇಡೀ ವಿಶ್ವದ ಸಾಮಾಜಿಕ, ಆರ್ಥಿಕ, ರಾಜಕೀಯದ ನಿಯಂತ್ರಣದ ದುರ್ಬರ ಸ್ಥಿತಿಗೆ ಭಾರತವೂ ಒಳಗಾದಾಗ, ಸರ್ಕಾರ ದಿವ್ಯ ನಿರ್ಲಕ್ಷ ವಹಿಸಿದ ದಿನಗಳನ್ನು ಜನರು ಇನ್ನೂ ಮರೆಯಲಾಗಿಲ್ಲ. ಅಮೇರಿಕಾ ಅಧ್ಯಕ್ಷರ ಭೇಟಿ, ದೇಶ–ವಿದೇಶಗಳ ಗಣ್ಯರ ಪ್ರವೇಶ, ಅನೇಕ ರಾಜ್ಯಗಳಲ್ಲಿ ನಡೆಸಿದ ಚುನಾವಣೆಗಳು, ರ್‍ಯಾಲಿಗಳು, ಲಕ್ಷಾಂತರ ಜನರ ಕುಂಭಮೇಳಗಳು, ಧಾರ್ಮಿಕ ಜಾತ್ರೆ, ರಥೋತ್ಸವಗಳು ಇಂಥಹ ನೂರಾರು ಘಟನೆಗಳು, ಕರೋನಾ ವೈರಸ್ ವ್ಯಾಪಕವಾಗಿ ಹಬ್ಬಲು ಕಾರಣಗಳಾದವು. ಜೊತೆಗೆ ಕರೋನಾ ನಿಯಂತ್ರಣದ ತಡೆಗಾಗಿ ವಾರಾಂತ್ಯದ ಐದು ನಿಮಿಷಗಳ ಕಾಲ ವಿದ್ಯುತ್ ದೀಪಗಳನ್ನು ಆರಿಸಿ, ಕಾರ್ಗತ್ತಲು ನಿರ್ಮಿಸಿ, ಹಣತೆ ಹಚ್ಚಿ ಸಾರ್ವಜನಿಕ ಪ್ರದರ್ಶನ, ಗಂಟೆ ಜಾಗಟೆ ಬಾರಿಸುವುದು ಇಂಥಹ ಮೂರ್ಖತನದ, ಮೂಢನಂಬಿಕೆಯಾಚರಣೆಯನ್ನು ಕೇಂದ್ರ ಸರ್ಕಾರ ಕರೆ ನೀಡಿದ್ದು, ಭಾರತದ ಅವೈಜ್ಞಾನಿಕ, ಅಪ್ರಬುದ್ಧ ನಡೆಯೆಂಬುದು ಸಾಬೀತಾಗಿದೆ. ನಂತರದ ದಿನಗಳಲ್ಲಿ ಕರೋನಾದ ಉಲ್ಬಣಾವಸ್ಥೆಯ ದಿನಗಳಲ್ಲಿ ಪೂರ್ವ ತಯಾರಿ ಇಲ್ಲದೆ, ವಾರದ ಲಾಕ್‌ಡೌನ್, ಕರ್ಫ್ಯೂಗಳನ್ನು ವಿಧಿಸಿದ್ದು, ತಿಂಗಳಾನುಗಟ್ಟಲೆ ಹೆಚ್ಚಿಸಿದ್ದು ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು, ಗೃಹೋದ್ಯಮಿಗಳು, ಸಣ್ಣಪುಟ್ಟ ಉದ್ದಿಮೆದಾರರು, ಕುಶಲಕರ್ಮಿಗಳು "ಹಸಿವಿನಿಂದ ಇಲ್ಲಿ ಸಾಯುವುದಕ್ಕಿಂತ ನಮ್ಮ ಹಳ್ಳಿಗಳಲ್ಲೇ ಸಾಯೋಣ" ಎಂದು ವಲಸೆಯ ಮಹಾನ್ ಯಾತ್ರೆಯೇ ನಡೆಯಿತು. ಗರ್ಭಿಣಿಯರು, ಬಾಣಂತಿಯರು, ಅಸಹಾಯಕ ಮಹಿಳೆಯರು, ಬಂಧು–ಬಳಗ ಕಟ್ಟಿಕೊಂಡು ಬರಿಗಾಲಲ್ಲಿ, ಮಳೆಬಿಸಿಲು ಬೆಂಕಿಯಲ್ಲಿ ಸಾಗಿದ ಪರಿ ಆಳುವ ಸರ್ಕಾರಗಳ ಅವಿವೇಕತೆ ಮತ್ತು ನಿರುತ್ತರದಾಯಿತ್ವಕ್ಕೆ ಮಹಾನ್ ನಿದರ್ಶನವಾಗಿದೆ. ದೇಶಕ್ಕೆ ದೇಶವೇ ಹಾಸಿಹೊದ್ದು ಮಲಗಿಕೊಂಡಂಥ ಸ್ಥಿತಿಯಲ್ಲಿ "ಜವರಾಯ ಬರಿಗೈಲಿ ಬರಲಿಲ್ಲ. ಕೊರೋನಾ ಕೊಡಲಿ ಹಿಡ್ಕೊಂಡು, ಒಳ್ಳೊಳ್ಳೆ ಮರವಾ ಕಡಕೊಂಡ" ಎಂಬಂತೆ ಸಾಹಿತಿಗಳು, ಕಲಾವಿದರು, ಗಣ್ಯರು, ತಜ್ಞರು, ಮೇಧಾವಿಗಳನ್ನು ಕರೋನಾ ಕಾಣದ ಲೋಕಕ್ಕೆ ಸಾಗಿಸಿದ್ದು,ಜನರ ತಲ್ಲಣಗಳನ್ನು ನೂರ್ಮಡಿಗೊಳಿಸಿದೆ. ಇದರೊಂದಿಗೆ ಕರೋನಾಕ್ಕೆ ಔಷಧಿಗಳನ್ನು ಅಮೇರಿಕಾ, ಚೀನಾ ಮತ್ತೆಲ್ಲೂ ಕಂಡು ಹಿಡಿಯುವ ಪ್ರಯತ್ನಗಳು, ಪ್ರಯೋಗಗಳು, ಪೇಟೆಂಟ್‌ಗಳ, ಖ್ಯಾತಿಗಾಗಿ ನಡೆದ ರಾಜಕೀಯಗಳು, ದೇಶವಿದೇಶಗಳ ಕೈಮೇಲಾಟಗಳಿಂದಾಗಿ 'ಲಸಿಕೆ' ಸಾರ್ವಜನಿಕರ ಬಳಕೆಗೆ ಬರಲು ಅತಿ ವಿಳಂಬವಾದದ್ದನ್ನೂ ಜನರು ಬಲ್ಲರು. ಜೊತೆಗೆ ವಿಜ್ಞಾನ ಶಾಸ್ತ್ರಗಳಾದ ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರಗಳ ಸಮ್ಮಿಳಿತವಾದ ವೈದ್ಯಕೀಯ ವಿಜ್ಞಾನವೆಂಬುದು ದಿಕ್ಕು ತೋಚದಂತಾದ ಸ್ಥಿತಿ ಹಾಗೂ ಈ ಅಘಾತಕಾರಿ ಸ್ಥಿತಿಯನ್ನು ತನ್ನ ಪ್ರಖ್ಯಾತಿ ಹೇಗೆ ಬಳಸಿಕೊಳ್ಳಬೇಕೆಂಬ ಜಿಜ್ಞಾಸೆ, ಉದ್ಯಮಲಾಲಸೆಗಳು, ಔಷಧಿ ಕಂಪನಿಗಳ ಪೈಪೋಟಿ, ವಿತರಣಾ ಹಕ್ಕುಗಳ ಸ್ವಾಮ್ಯತೆ, ಕೈಗಾರೀಕರಣ ಮತ್ತು ರಾಜಕಾರಣದ ಅಮಾನುಷ ನಡೆಯನ್ನು ಸಮಾಜದ ಮುಂದೆ ಅನಾವರಣಗೊಂಡಿದೆ. ಅತಿ ವಿಳಂಬವಾಗಿ ನಿರ್ಮಿಸಿದ ಕ್ವಾರಂಟೈನ್ ಕೇಂದ್ರಗಳು, ಆಕ್ಸಿಜನ್ ಸರಬರಾಜು ವ್ಯವಸ್ಥೆ, ಹೋಂ ಕ್ವಾರಂಟೈನ, ವೈದ್ಯರು, ದಾದಿಯರು, ಸಹಾಯಕ ಸಿಬ್ಬಂದಿಗಳ ನೇಮಕಾತಿಗಳು, ತುರ್ತು ನಿಗಾ ಘಟಕಗಳು, ವಿವಿಧ ಹಂತಗಳ ರೋಗ ನಿರೋಧಕ ಕೇಂದ್ರಗಳು ಮತ್ತು ಔಷಧಿ ಸರಬರಾಜು ನೆಟ್‌ವರ್ಕ್‌ಗಳ ಸ್ಥಾಪನೆ, ಇವುಗಳಿಂದಾಗಿ ಕರೋನಾ ನಿಯಂತ್ರಣಕ್ಕೆ ಈಗಲಾದರೂ ಬಂದಿದೆಯಲ್ಲಾ ಎಂದು ಜನರು ನಿರಾಳ ನಿಟ್ಟುಸಿರು ಬಿಡುವಂತಾಗಿದೆ. ಇಂಥಹ ಭೀಕರ ಸ್ಥಿತಿಗೆ ಪ್ರತಿಯೊಬ್ಬರು ನಾವೆಷ್ಟು ಕಾರಣ? ನಮ್ಮ ಪಾಲೆಷ್ಟು ಎಂಬುದನ್ನು ಅರಿತುಕೊಳ್ಳಬೇಕಿದೆ.

ನಿಸರ್ಗದ ವಿನಾಶವೇ ನಮ್ಮ ಸರ್ವನಾಶಕ್ಕೆ ಸಕಾರಣವೆಂಬುದನ್ನು ಅರಿತು, ಪ್ರಕೃತಿಯನ್ನು ಸಂರಕ್ಷಿಸುವ ಕಾರ್ಯದಲ್ಲಿ ನಿರತರಾಗೋಣ. ಸ್ವಚ್ಛತೆ, ನಿರ್ಮಲತೆ, ಶುಭ್ರತೆಗಳೇ ಆದ್ಯತೆಯಾಗಿರಲಿ; ನಾವು ಮಾಡಿದ ಕೊಳಕನ್ನು ನಾವೇ ತೆಗೆಯೋಣ; ಬೀದಿಗೆ ಬಿಸಾಕುವುದು ಬೇಡ; ನೀರಿನ ಪ್ರತಿಹನಿಯೂ ಅತ್ಯಮೂಲ್ಯ; ಗಿಡಮರ, ಸಸ್ಯರಾಶಿಯನ್ನು ಬೆಳೆಸೋಣ; ಸೃಷ್ಟಿಯ ಸಕಲ ಜೀವರಾಶಿಗಳನ್ನು ನಮ್ಮಂತೆ ಬದುಕಲು ಬಿಡೋಣ; ಹೊಗೆಯುಗುಳುವ ಕಂಪನಿ, ಕಾರ್ಖಾನೆ, ಸ್ಥಾವರಗಳ ಮಾಲಿನ್ಯವನ್ನು ನಿಲ್ಲಿಸೋಣ. ಅಭಿವೃದ್ಧಿ ವ್ಯಾಖ್ಯಾನವನ್ನು ಬದಲಿಸೋಣ. ಪರಿಸರ ಸ್ನೇಹಿ ಸಹಜ, ಸರಳ ಉದ್ಯೋಗಪರ್ವನ್ನೇ ಆರಂಭಿಸೋಣ; ಇಂಥಹ ನಡೆಗಳಿಂದ ಬದುಕು ಸಹನೀಯವಾಗಬಹುದು. ವೈಯಕ್ತಿಕತೆಗಿಂತ, ಸುತ್ತಲಿನ ಜನ ಸಮುದಾಯದ ಆರೋಗ್ಯವೇ ನಮ್ಮ ಆರೋಗ್ಯವನ್ನು ಕಾಪಾಡುವುದೆಂಬ ಸಮಷ್ಠಿ ಪ್ರಜ್ಞೆಯಿಂದ ಎಲ್ಲರ ಸುಖದುಃಖದಲ್ಲಿ ಸಾಮಾಜಿಕ ನೆಮ್ಮದಿಯಲ್ಲಿ ನಮ್ಮ ಸಂತೋಷ ಅಡಗಿದೆ ಎಂಬ ಬುದ್ಧನ ವಿಚಾರಗಳು, ಗಾಂಧೀಜಿ ಅವರ ರಚನಾತ್ಮಕ ಕಾರ್ಯಗಳು ನಮಗೆ ಮಾರ್ಗದರ್ಶಕವಾಗಿವೆ. ಅವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ಸಾಗೋಣ. ಬಸವಣ್ಣನವರ ವಚನ "ಬೆಳೆವ ಭೂಮಿಯೊಳಗೊಂದು ಪ್ರಳಯದ ಕಸಹುಟ್ಟಿ, ತಿಳಿಯಲೀಯದು, ಎಚ್ಚರಲೀಯದು ಎನ್ನ ಗುಣವೆಂಬ ಕಸವ ಕಿತ್ತು ಸಲಹಯ್ಯ ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವ" ಎಂಬಂತೆ ಪ್ರಗತಿಯೇ ಪ್ರಳಯದ ಸ್ಥಿತಿಗೆ ಕೊಂಡೊಯ್ಯುವುದನ್ನು ತಡೆಯೋಣ. ವಿಶ್ವದಾದ್ಯಂತ ಮತ್ತು ನಮ್ಮ ದೇಶದಲ್ಲಿರುವ ಪರಿಸರ ತಜ್ಞರು, ಪರಿಸರ ಸಂರಕ್ಷಕರು, ಬುಡಕಟ್ಟು ಅರಣ್ಯವಾಸಿಗಳು, ಪರಿಸರ ಹೋರಾಟಗಾರರ ನುಡಿಗಳಿಗೆ ಸರ್ಕಾರಗಳು, ತಜ್ಞರು, ಸಂಸ್ಥೆಗಳು, ಸಮಿತಿಗಳು, ವಿಜ್ಞಾನಿಗಳು ಗಮನ ಕೊಡಲೇ ಬೇಕೆಂದು ಒತ್ತಾಯಿಸೋಣ. ಕರೋನಾ ವಾರಿಯರ್‌ಗಳಾಗಿ ಹಗಲಿರುಳೆನ್ನದೆ ದುಡಿದ ವೈದ್ಯರು, ದಾದಿಯರು, ಸ್ವಯಂ ಸೇವಕರು, ಸಂಘ ಸಂಸ್ಥೆಗಳವರಿಗೆ ಅಭಿನಂದನೆಗಳನ್ನು ಸಲ್ಲಿಸೋಣ



ನೆಟಾಲನ್ನು ತಲುಪಿದುದು : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ" ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ದೋಣಿ, ಹಡಗಿನ ಏಣಿಯನ್ನು ಮುಟ್ಟುತ್ತಿತ್ತು, ಆದರೆ ತತ್‌ಕ್ಷಣ ಅಲೆಯ ಹೊಡೆತದಿಂದ ದೂರಕ್ಕೆ ಸರಿಯುತ್ತಿತ್ತು, ಹಡಗು ಹೊರಡಲು ಮೊದಲನೆಯ ಸಿಳ್ಳು ಆಗಲೇ ಆಗಿತ್ತು, ನನಗೆ ಗಾಬರಿಯಾಯಿತು. ನಮ್ಮ ಸಂಕಟವನ್ನು ಕಪ್ತಾನನು ಹಡಗಿನ ಮೇಲಿನಿಂದ ನೋಡುತ್ತಿದ್ದ. ಹಡಗು ಇನ್ನೂ ಐದು ನಿಮಿಷ ಹೆಚ್ಚಾಗಿ ನಿಲ್ಲಬೇಕೆಂದು ಆತ ಅಪ್ಪಣೆ ಕೊಟ್ಟಿದ್ದ, ಹಡಗಿನ ಸಮೀಪದಲ್ಲಿ ಮತ್ತೊಂದು ದೋಣಿ ಇತ್ತು. ಮಿತ್ರರೊಬ್ಬರು ಅದನ್ನು ನನಗಾಗಿ ಹತ್ತು ರೂಪಾಯಿಗಳಿಗೆ ಗೊತ್ತು ಮಾಡಿದರು. ಆ ದೋಣಿ, ತುಂಬಿದ್ದ ದೋಣಿಯಿಂದ ನನ್ನನ್ನು ಎತ್ತಿಕೊಂಡಿತು. ಹಡಗಿನ ಏಣಿಯನ್ನು ಆಗಲೇ ಮೇಲಕ್ಕೆ ಎತ್ತಿ ಕಟ್ಟಿದ್ದರು. ಆದುದರಿಂದ ನನ್ನನ್ನು ಒಂದು ಹಗ್ಗದಲ್ಲಿ ಕಟ್ಟಿ ಮೇಲಕ್ಕೆ ಎತ್ತಿ ಕೊಳ್ಳಬೇಕಾಯಿತು. ನಾನು ಹಡಗನ್ನು ಏರಿದ ಕೂಡಲೇ ಹಡಗು ಹೊರಟಿತು. ದೋಣಿಯಲ್ಲಿದ್ದ ಇತರ ಪ್ರಯಾಣಿಕರು ಪಾಪ ! ಅದರಲ್ಲಿಯೇ ಉಳಿದರು. ಕಪ್ತಾನನು ಕೊಟ್ಟ ಎಚ್ಚರಿಕೆ ಈಗ ನನಗೆ ನಿಜವಾಗಿ ಅರ್ಥವಾಯಿತು.

ಲಾಮು ಆದನಂತರ ಮುಂದೆ ಬಂದ ಬಂದರು ಮೊಂಬಾಸಾ, ಅನಂತರದ ಬಂದರು ಜಾನ್‌ಜಿಬಾರ್. ಜಾನ್‌ಜಿಬಾರ್‌ನಲ್ಲಿ ಬಹಳ ದಿನ ನಿಂತೆವು, 8–10 ದಿನ ಇರಬಹುದು. ಅನಂತರ ಇನ್ನೊಂದು ಹಡಗಿಗೆ ಬದಲಾಯಿಸಿಕೊಂಡವು.

ಕಪ್ತಾನನಿಗೆ ನನ್ನಲ್ಲಿ ಬಹಳ ವಿಶ್ವಾಸವುಂಟಾಗಿತ್ತು. ಆದರೆ ಆ ವಿಶ್ವಾಸ ಒಂದು ಅನಿಷ್ಠ ಮಾರ್ಗವನ್ನು ಹಿಡಿಯಿತು. ಅವನು ನನ್ನನ್ನೂ, ತನ್ನ ಮತ್ತೊಬ್ಬ ಇಂಗ್ಲಿಷ್ ಮಿತ್ರನನ್ನು ಹೊರಗೆ ಹೋಗಿ ತಿರುಗಾಡಿಕೊಂಡು ಬರಲು ಆಹ್ವಾನಿಸಿದನು. ನಾವು ದೋಣಿಯಲ್ಲಿ ತೀರಪ್ರದೇಶಕ್ಕೆ ಹೋದೆವು, ತಿರುಗಾಡಿಕೊಂಡು ಬರುವುದೆಂಬುದರ ಅರ್ಥವೇನೆಂಬುದು ನನಗೆ ತಿಳಿದಿರಲಿಲ್ಲ. ಅಂತಹ ವಿಷಯಗಳಲ್ಲಿ ನಾನು ಎಷ್ಟು ದಡ್ಡ ಎಂಬುದು ಕಪ್ತಾನನಿಗೂ ತಿಳಿದಿರಲಿಲ್ಲ. ಒಬ್ಬ ದಳ್ಳಾಳಿ, ನಮ್ಮನ್ನು ನೀಗ್ರೋ ಸ್ತ್ರೀಯರ ಗೃಹಗಳಿಗೆ ಕರೆದುಕೊಂಡು ಹೋದ. ನಮ್ಮಲ್ಲಿ ಪ್ರತಿಯೊಬ್ಬನನ್ನೂ ಒಂದೊಂದು ಕೊಠಡಿಗೆ ಸೇರಿಸಿದರು. ನಾನು ನಾಚಿಕೆಯಿಂದ ಮೂಕನಾಗಿ ನಿಂತಿದ್ದೆ. ಪಾಪ ಆ ಹೆಂಗಸು ನನ್ನನ್ನು ಕುರಿತು ಏನು ಯೋಚಿಸಿಕೊಂಡಳೋ ದೇವರಿಗೆ ಗೊತ್ತು. ಕಪ್ತಾನನು ನನ್ನನ್ನು ಕರೆದಾಗ, ನಾನು ಒಳಕ್ಕೆ ಹೋಗಿದ್ದಂತೆಯೇ ಹೊರಕ್ಕೆ ಬಂದೆ. ನನ್ನ ಅಕೃತ್ರಿಮ ಸ್ವಭಾವ ನನ್ನ ಮುಖದಲ್ಲಿಯೇ ಅವನಿಗೆ ಗೊತ್ತಾಯಿತು. ಮೊದಲು ನನಗೆ ತುಂಬಾ ಮಾನಭಂಗವಾದಂತೆ ಆಯಿತು. ಆದರೆ ಮುಂದೆ ಅದನ್ನು ಯೋಚಿಸಿದಾಗಲೆಲ್ಲ ಭಯಂಕರವಾದ ಜಿಗುಪ್ಸೆ ನನಗೆ ಉಂಟಾಗುತ್ತಿದ್ದುದರಿಂದ ನನಗೆ ಮಾನಭಂಗವಾಯಿತೆಂಬ ಭಾವನೆ ಬರುಬರುತ್ತಾ ಮರೆಯಾಯಿತು. ಆ ಹೆಂಗಸನ್ನು ಕಂಡಾಗ ನನ್ನ ಬುದ್ಧಿ ಕೆಟ್ಟಹಾದಿಯನ್ನು ಹಿಡಿಯದಿದ್ದುದಕ್ಕಾಗಿ ನಾನು ದೇವರನ್ನು ವಂದಿಸಿದೆ. ಕೊಠಡಿಗೇ ಹೋಗುವುದಿಲ್ಲ ಎಂದು ಹೇಳಲು ನನಗೆ ಧೈರ್ಯವಿಲ್ಲದೆ ಹೋಯಿತಲ್ಲಾ ಎಂದು ನನ್ನ ದೌರ್ಬಲ್ಯದಲ್ಲಿ ನನಗೆ ಜುಗುಪ್ಸೆಯೂ, ನನ್ನ ಹೇಡಿತನಕ್ಕಾಗಿ ನನ್ನಲ್ಲಿಯೇ ನನಗೆ ಕನಿಕರವೂ ಉಂಟಾಯಿತು. ನನ್ನ ಬಾಳಿನಲ್ಲಿ ಇದು ನನಗೆ ಆ ಬಗೆಯ ಮೂರನೆಯ ಪರೀಕ್ಷೆ ಆಗಿತ್ತು. ಅನೇಕ ಯುವಕರು, ಪ್ರಾರಂಭದಲ್ಲಿ ಅವರಿಗೇನೂ ಗೊತ್ತಿಲ್ಲದ ತಾವು ಪರಿಶುದ್ಧರಾಗಿದ್ದರೂ, ತಮಗೆ ಮಾನಭಂಗವಾಗುವುದೆಂಬ ಭಯದಿಂದ ಆ ಕೃತ್ಯಕ್ಕೆ ಎಳೆಯಲ್ಪಟ್ಟಿರಬೇಕು. ನಾನು ಪಾಪಕೂಪದಿಂದ, ಪರಿಶುದ್ಧನಾಗಿ ಹೊರಕ್ಕೆ ಬಂದುದೇನೂ ನನ್ನ ಸದ್ಗುಣವಲ್ಲ. ಆ ಕೊಠಡಿಗೆ ಹೋಗುವುದನ್ನು ನಾನು ತಿರಸ್ಕರಿಸಿದ್ದಿದ್ದರೆ ನನ್ನ ಸ್ವಪ್ರಯತ್ನದಿಂದ ನಾನು ಉಳಿದುಕೊಂಡೆನೆಂದು ಹೇಳಬಹುದಾಗಿತ್ತು. ನನ್ನನ್ನು ರಕ್ಷಿಸಿದುದಕ್ಕೆ ನಾನು ದಯಾಮಯನಾದ ಈಶ್ವರನನ್ನು ವಂದಿಸಬೇಕು. ಈ ಸಂಗತಿಯಿಂದ ದೇವರಲ್ಲಿ ನನ್ನ ನಂಬಿಕೆ ಇನ್ನೂ ಹೆಚ್ಚು ದೃಢವಾಯಿತು. ಸುಳ್ಳು ನಾಚಿಕೆಯನ್ನು ತಕ್ಕಮಟ್ಟಿಗೆ ಬಿಡುವುದನ್ನು ಅದು ನನಗೆ ಕಲಿಸಿತು.

ನಾವು ಆ ಬಂದರಿನಲ್ಲಿ ಒಂದು ವಾರ ಕಾಲ ಇರಬೇಕಾಗಿದ್ದರಿಂದ, ನಾನು ಊರೊಳಗೆ ಕೊಠಡಿಗಳನ್ನು ಗೊತ್ತುಮಾಡಿಕೊಂಡು ಅಲ್ಲಿ ವಾಸಮಾಡತೊಡಗಿದೆ. ಸುತ್ತಮುತ್ತ ತಿರುಗಾಡಿ ಅನೇಕ ವಿಷಯಗಳನ್ನು ನೋಡಿದೆ. ಜಾನ್‌ಜಿಬಾರ್‌ನ ಸಸ್ಯ ಮತ್ತು ಹಸಿರು ವೃಕ್ಷ ವೈಭವ ಸಮೃದ್ಧಿಯನ್ನು ಮಲಬಾರಿಗೆ ಮಾತ್ರ ಹೋಲಿಸಬಹುದು. ದೈತ್ಯಾಕಾರದ ಮರಗಳನ್ನೂ, ದೊಡ್ಡದಾದ ಫಲಗಳನ್ನೂ ನೋಡಿ ನಾನು ಆಶ್ಚರ್ಯಗೊಂಡೆ. ಹಡಗು ನಿಂತ ಮುಂದಿನ ಬಂದರು ಮೊಸಾಂಬಿಕ್, ಅಲ್ಲಿಂದ ಹೊರಟು ಮೇ ತಿಂಗಳ ಕೊನೆಗೆ ನಾವು ನೆಟಾಲನ್ನು ತಲುಪಿದೆವು.

ಕೆಲವು ಅನುಭವಗಳು : ನೆಟಾಲನ್ನು ಬಂದರು ಡರ್ಬಾನ್ ಎಂಬುದು. ಇದಕ್ಕೆ ಪೋರ್ಟ್‌ನೆಟಾಲ್ ಎಂದೂ ಹೆಸರು. ನನ್ನನ್ನು ಎದುರುಗೊಳ್ಳಲು ಅಬ್ದುಲ್ಲಾ ಸೇಠರು ಬಂದರಿಗೆ ಬಂದಿದ್ದರು. ಹಡಗು ಬಂದರಿನ ಕಟ್ಟೆಯನ್ನು ಸೇರಿತು. ಜನರು ತಮ್ಮ ಮಿತ್ರರನ್ನು ಸಂಧಿಸಲು ಹಡಗಿಗೆ ಬರುತ್ತಿದ್ದರು. ಅಲ್ಲಿ ಭಾರತೀಯರನ್ನು ಹೆಚ್ಚು ಗೌರವದಿಂದಲೂ, ಆದರದಿಂದಲೂ ಕಾಣುತ್ತಿರಲಿಲ್ಲವೆಂಬುದು ನನ್ನ ಕಣ್ಣಿಗೆ ಬಿದ್ದಿತು. ಅಬ್ದುಲ್ಲಾ ಸೇಠರ ಪರಿಚಯಸ್ಥರು ಅವರೊಡನೆ ಒಂದು ರೀತಿಯ ಒಣ ದೊಡ್ಡಸ್ತಿಕೆಯಿಂದ ನಡೆದುಕೊಳ್ಳುತ್ತಿದ್ದುದನ್ನೂ ನಾನು ಗಮನಿಸಿದೆ. ಅದು ನನ್ನ ಮನಸ್ಸನ್ನು ಚುಚ್ಚಿತು

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಒಬ್ಬ ಸದಸ್ಯ : 'ಕಾಂಗ್ರೆಸ್ಸಿನ ಹೆಸರಿನಲ್ಲೇ?' ಎಂದು ಪ್ರಶ್ನೆ ಕೇಳಿದರು.

ಉತ್ತರ: ಹೌದು, ಕಾಂಗ್ರೆಸ್ಸಿನ ಹೆಸರಿನಲ್ಲೇ. ಅವರಿಗೆ ಹೇಗೆ ಸಹಾಯ ಮಾಡಲೆಂದು ಸುತ್ತೂ ಹುಡುಕುತ್ತಿದ್ದೆ. ಈ ಒಪ್ಪಂದ ಹೊಳೆಯಿತು. ನಾನು ಅವರಿಗೆ ಮಾಡಿದ ಅನುಗ್ರಹ ಏನೂ ಇಲ್ಲ. ಇದು ಅವರ ಹಕ್ಕು. ಆದರೆ ಇದು ಅವರ ಹಕ್ಕು ಎಂದು ತಿಳಿದುಕೊಳ್ಳಲು ಸ್ವಲ್ಪ ತಡಮಾಡಿದೆ. ಇಷ್ಟು ತಿಳಿದ ಮೇಲೆ ನಾನು ಅವರ ಕಾರ್ಯಕ್ರಮಕ್ಕೆ ಮನಸ್ಸಿನಿಂದಲೂ ಅಡ್ಡಿ ತೋರಬಾರದು. ಅದರ ಬದಲು ಅವರು ಮಾಡುತ್ತಿರುವ ಕೆಲಸವೂ ಕೂಡ ಸರಿ ಎಂದು ನನ್ನ ಮನಸ್ಸನ್ನು ಗಟ್ಟಿ ಮಾಡಿಕೊಳ್ಳಲು ಪ್ರಯತ್ನಿಸಬೇಕು. ನೀವೂ ಹಾಗೆ ಮಾಡಬೇಕು ಎಂದು ನನ್ನ ವಿನಂತಿ.

ಆದ್ದರಿಂದಲೇ ನನ್ನ ದಾರಿ ಬಿಟ್ಟು ಹೋಗಿ ಪ್ರತಿಯೊಬ್ಬ ಸ್ವರಾಜ್ಯ ಪಕ್ಷದವರನ್ನು ಸಂಪರ್ಕ ಮಾಡಿಕೊಳ್ಳುತ್ತಿದ್ದೇನೆ. ಅವರ ವಾದಕ್ಕೆ, ಅವರ ಸಲಹೆಗಳಿಗೆ ನನ್ನದು ಮುಕ್ತಮನಸ್ಸು. ನಾನು ಸ್ವರಾಜ್ಯ ಪಕ್ಷದವರಿಗೆ ಸಹಾಯ ಮಾಡಬಹುದಾದುದು ಹೀಗೆಯೇ. ಇದರಿಂದ ನಾನು ವೇದಿಕೆಗಳ ಮೇಲೆ ಭಾಷಣ ಮಾಡಿ ಸರಕಾರದ ಧೋರಣೆಯ ಬಗ್ಗೆ ಮಾತಾಡಿ ಸಭೆಗಳನ್ನು ನೆಡೆಸುತ್ತೇನೆ ಎಂದು ಮುಂತಾಗಿ ಅರ್ಥಮಾಡಿದರೆ ನಾನು ಹಾಗೆ ಮಾಡಲಾರೆ; ಏಕೆಂದರೆ ನನಗೆ ಅದರಲ್ಲಿ ಮನಸ್ಸಿಲ್ಲ. ನಾನು ಒಪ್ಪಂದಕ್ಕೆ ಒಪ್ಪಿಕೊಂಡದ್ದು ಈ ಅರ್ಥದಲ್ಲಿ ಅಲ್ಲ. ಇವು ನನ್ನ ಮಿತಿ. ನನಗೆ ಇದನ್ನೆಲ್ಲ ಮಾಡಬಾರದೆಂದಿಲ್ಲ. ಆದರೆ ನಾನು ಮನಗಾಣಬೇಕು. ಮನಗಂಡ ಕೂಡಲೇ ನಾನು ಸ್ವರಾಜ್ಯವಾದಿಯೆಂದು ಸಂಪೂರ್ಣವಾಗಿ ಘೋಷಿಸಿದ್ದೇನೆ. ಈ ಪೃಥ್ವಿಯ ಮೇಲಿನ ಯಾವುದೂ ನನ್ನನ್ನು ತಡೆಯಲಾರದು. ಆಮೇಲೆ ನನ್ನಿಂದ 24 ಗಂಟೆಯನ್ನೂ ನನ್ನ ಜಾಗೃತಿಯ ಎಲ್ಲ ಸಮಯವನ್ನೂ ನಿರೀಕ್ಷಿಸಬಹುದು. ಇವತ್ತು ನಾನು ಪೂರ್ಣ ಮನಸ್ಸಿನ ಸಹಕಾರವನ್ನು ನೀಡಲಾರೆ. ಆದರೆ ನನ್ನ ಮಿತಿಯಲ್ಲಿ ಖಂಡಿತವಾಗಿಯೂ ಅವರಿಗೆ ಪ್ರೋತ್ಸಾಹಕರ, ಮನಃಪೂರ್ಣ ಸಹಕಾರ ಕೊಡಬಲ್ಲೆ. ಉದಾಹರಣೆಗೆ ಸರಕಾರ ನಿಮಗೂ ನಿಮ್ಮ ಕೀರ್ತಿ ಪ್ರತಿಷ್ಠೆಗೂ ಆತಂಕ ಒಡ್ಡಿದರೆ, ನಿಮ್ಮ ಜೊತೆ ನಾನು ಕೂಡ ನಿಮಗೆ ನೆರವಾಗಲು ಬರುತ್ತೇನೆ. ನಿಮ್ಮ ಜೊತೆಗೆ ಕಷ್ಟ ಅನುಭವಿಸುತ್ತೇನೆ. ಒಂದು ವೇಳೆ ನೀವು ನನ್ನ ಸಹಕಾರ ಬೇಡವೆಂದರೂ, ದಯವಿಟ್ಟು ನನ್ನ ಸಹಾಯ ತೆಗೆದುಕೊಳ್ಳಿ ಎಂದು ಬೇಡುತ್ತೇನೆ. ಖಾಸಗಿಯಾಗಿ ಈ ಧೋರಣೆ ಒಳ್ಳೆಯದು ಎಂದು ಹೇಳಿರಿ ಎಂದರೆ ನನ್ನ ಅರ್ಥ ಅದಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಒಂದು ಮಾತು. ನಿಮ್ಮನ್ನು ಯಾರಾದರೂ ಖಾಸಗಿಯಾಗಿ ಕೇಳಿದರೆ, ರಾಟೆಯಲ್ಲಿ ಅವರಿಗೆ ನಂಬಿಕೆ ಇಲ್ಲದಿದ್ದರೂ ನೂಲಬೇಕು ಎಂದು ಹೇಳಿರಿ. ನಿಮಗೆ ರಾಟೆಯಲ್ಲಿ ನಂಬಿಕೆ ಇಲ್ಲದೆ ಇಲ್ಲ ಎನ್ನುತ್ತೀರಿ. ನಿಮಗೆ ನಂಬಿಕೆ ಇಲ್ಲದಿದ್ದರೆ ಈ ಒಪ್ಪಂದವನ್ನು ತಿರಸ್ಕರಿಸಿರಿ. ಇಲ್ಲದಿದ್ದರೆ ನಿಮ್ಮ ವಿಶ್ವಾಸಕ್ಕೆ ಭಂಗ ಬರುತ್ತದೆ.

ಕೇಳ್ಕರ್: ಈ ಕೆಲಸ ಅವರವರ ಮನಸ್ಸಿನ ನಿಷೇಧಾತ್ಮಕ ವಿಚಾರಕ್ಕೆ ತಕ್ಕಂತೆ ಇರುತ್ತದೆ. ಸ್ವರಾಜ್ಯಪಕ್ಷದಲ್ಲಿ ಅನೇಕರಿಗೆ ಒಂದು ಮಾನಸಿಕ ಪ್ರತಿಬಂಧ ಇದೆ. ಅವರಿಗಾಗಿ ನೀವು ಸ್ವಲ್ಪ ಅವಕಾಶ ಕೊಡಬೇಕು. ಈ ಮಾನಸಿಕ ಪ್ರತಿಬಂಧ ರಾಟೆಯಿಂದ ಏನೂ ಪ್ರಯೋಜನವಿಲ್ಲ ಎನ್ನುವಷ್ಟು ದೂರ ಹೋಗಿದ್ದರೆ ಆಗ ನೀವು ಒಪ್ಪಂದವನ್ನು ತಿರಸ್ಕರಿಸಬೇಕು.

ರಾಟೆಯ ಬಗ್ಗೆ ಸ್ವರಾಜ್ಯ ಪಕ್ಷದಿಂದ ನಾನು ಬಯಸುವ ಸಹಕಾರ, ನನ್ನಿಂದ ಅವರು ಶಾಸನ ಸಭೆಗಳ ಕಾರ್ಯದ ಬಗ್ಗೆ ನಿರೀಕ್ಷಿಸುವ ಸಹಕಾರ, ಒಂದೇ ಬಗೆಯದು ಅಲ್ಲ, ಒಂದೇ ಪರಿಮಾಣದ್ದೂ ಅಲ್ಲ. ಇದನ್ನು ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಅಸಾಧ್ಯ ಕಾರ್ಯಗಳನ್ನು ನಿಮ್ಮಿಂದ ನಾನು ನಿರೀಕ್ಷಿಸುವುದಿಲ್ಲ. ನಿಮ್ಮಿಂದ ನಾನು ನಿರೀಕ್ಷಿಸುವುದು ಯಥಾಶಕ್ತಿ ಪ್ರಾಮಾಣಿಕತೆ, ನಂಬಿಕೆ; ಅಷ್ಟೇ ಸಾಕು, ಒಂದು ಗುಂಜೂ ಹೆಚ್ಚು ಬೇಡ. ಈ ಒಪ್ಪಂದವನ್ನು ಈ ದೃಷ್ಟಿಯಿಂದ ಪ್ರತಿಯೊಬ್ಬರೂ ನೋಡಿ ಎನ್ನುತ್ತೇನೆ. ಈ ದೃಷ್ಟಿ ಇಲ್ಲದಿದ್ದರೆ, ಚಳವಳಿ ವಿಫಲವಾಗುತ್ತದೆ ಎಂದು ನಾನು ಹೇಳುತ್ತೇನೆ. ಆಗಲೂ ನಾನು ವಿಫಲ ಆದೆ ಎಂದಲ್ಲ. ಬಹುಶಃ ನನ್ನನ್ನು ಅಹಂಕಾರಿ, ವಿಲಕ್ಷಣ ಎಂದು ನೀವು ಕರೆಯಬಹುದು. ಈಗಾಗಲೇ ಕೆಲವರು ಯೂರೋಪಿಯನ್ನರು, ಕೆಲವರು ಭಾರತೀಯರು ನನಗೊಬ್ಬನಿಗೇ ಮನುಷ್ಯ ಸ್ವಭಾವ ಗೊತ್ತು ಎನ್ನುತ್ತೇನೆ ಎನ್ನುತ್ತಾರೆ. ನನ್ನದು ಸರಿ ಎಂದು ನನ್ನ ನಂಬಿಕೆ. ಇತರರು ಹೇಳಿದುದೂ ಇಷ್ಟೇ ಸರಿ ಇರಬಹುದು. ನಾನು ಸರಿ ಎಂದು ನಂಬಿಕೆ ನನಗಿಲ್ಲದಿದ್ದರೆ, ನನ್ನ ಮಾರ್ಗ ಸರಿ ಎಂದು ನಾನು ನಂಬದಿದ್ದರೆ, ಚುಕ್ಕಾಣಿ ಹಿಡಿಯಲು ನಾನು ಅಯೋಗ್ಯ, ನಾನು ತಿದ್ದಿಕೊಳ್ಳಬೇಕು ಎನ್ನುವುದು ಆ ಕೆಟ್ಟ ಮನಸ್ಸನ್ನು. ಕೇಳಕರರು ಹೇಳುವ ಆ ಮಾನಸಿಕ ಪ್ರತಿಬಂಧ ಅಂಥದು ಏನೂ ಇರಬಾರದು. ಸ್ವರಾಜ್ಯ ಪಕ್ಷದವರು ಭಾರತದ ವೈರಿಗಳೆಂದು ಯಾರೂ ತಿಳಿಯಬಾರದು. ಅರಾಜಕತಾವಾದಿಗಳೂ ಕೂಡಾ ಭಾರತದ ಶತ್ರುಗಳು ಎಂದು ನಾನು ತಿಳಿದಿಲ್ಲ. ತನಗೆ ತೋಚಿದಂತೆ ಅವನು ಮಾಡುತ್ತಾನೆ. ನಾನು ಹೇಗೆ ತೀರ್ಪು ಕೊಡಲಿ? ಅವನ ಕೃತಿಯನ್ನು ಮಾತ್ರ ನಾನು ವಿಮರ್ಶೆ ಮಾಡಬಲ್ಲೆ. ಆದರೆ ಇಲ್ಲಿ ಯಾವ ಹೋಲಿಕೆಯೂ ಇಲ್ಲ.

ಮುಂದುವರಿಯುವುದು...

ಡಾ. ಬಾಬು ಜಗಜೀವನರಾಮ್
(05.04.1908 – 06.07.1986)

ರುದ್ರಪ್ಪ ಹನಗವಾಡಿ


(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಗರ್‌ವಾಲ್ ಶಾಲೆಯಲ್ಲಿ ಜಾತಿ ತಾರತಮ್ಯ ಅನುಸರಿಸುತ್ತಿದ್ದು, ಹಿಂದೂ ಮತ್ತು ಮುಸ್ಲಂರನ್ನು ಬೇರೆ ಬೇರೆಯಾಗಿ ನೋಡಲಾಗುತ್ತಿತ್ತು. ಶಾಲೆಯಲ್ಲಿ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಪ್ರತ್ಯೇಕವಾದ ನೀರಿನ ಮಡಿಕೆಗಳನ್ನು ಇರಿಸಲಾಗಿತ್ತು. ಜಗಜೀವನ್ ರಾಮ್ ಅವರು ಒಂದು ದಿನ ಹಿಂದೂ ಮಡಕೆಯಿಂದ ನೀರು ಕುಡಿದದ್ದನ್ನು ಗಮನಿಸಿ, ಈ ವಿಷಯವನ್ನು ಪ್ರಾಂಶುಪಾಲರಿಗೆ ವರದಿ ಮಾಡಲಾಯಿತು. ನಂತರ ಪ್ರಾಂಶುಪಾಲರು ಶಾಲೆಯಲ್ಲಿ ಅಸ್ಪೃಶ್ಯರಿಗಾಗಿಯೇ ಪ್ರತ್ಯೇಕವಾಗಿ ನೀಡಿನ ಮಡಕೆಯನ್ನಿಟ್ಟರು. ಪ್ರಾಂಶುಪಾಲರು ಪ್ರತ್ಯೇಕ ಮಡಕೆ ವ್ಯವಸ್ಥೆ ನಿಲ್ಲಿಸುವವರೆಗಿನ ಅವಧಿಯಲ್ಲಿ ಎರಡು ಬಾರಿ ಒಡೆದುಹಾಕಿದ್ದರು. 1925 ರಲ್ಲಿ ಪಂ. ಮದನ್ ಮೋಹನ್ ಮಾಳವೀಯಾ ಅವರು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ, ಜಗಜೀವನರಾಂ ಅವರ ಸ್ವಾಗತ ಭಾಷಣದಿಂದ ಪ್ರಭಾವಿತರಾಗಿ ಅವರನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಲು ಆಹ್ವಾನಿಸಿದರು. ಇದು ಅವರ ಜೀವನದಲ್ಲಿ ಒಂದು ಮಹತ್ವದ ತಿರುವು ನೀಡಿತ್ತು.

1935ರಲ್ಲಿ, ಅವರು ಅಸ್ಪೃಶ್ಯರ ಸಮಾನತೆಗಾಗಿ ಹೋರಾಡಲು ಅಖಿಲ ಭಾರತ ಖಿನ್ನತೆಗೆ ಒಳಗಾದ ವರ್ಗಗಳ ಲೀಗ್ ಸ್ಥಾಪನೆ ಮಾಡಿದರು. ಇದು ಅವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಲು ಅನುವು ಮಾಡಿಕೊಟ್ಟಿತು. ಅದೇ ವರ್ಷದಲ್ಲಿ ಹಿಂದೂ ಮಹಾಸಭಾ ಅಧಿವೇಶನದಲ್ಲಿ ದೇವಾಲಯಗಳು ಮತ್ತು ಕುಡಿಯುವ ನೀರಿನ ಬಾವಿಗಳನ್ನು ದಲಿತರಿಗೆ ತೆರೆಯಬೇಕೆಂದು ಒತ್ತಾಯಿಸಿ ನಿರ್ಣಯವನ್ನು ಪ್ರಸ್ತಾಪಿಸಿದರು. ನಂತರ 1940ರ ದಶಕದ ಆರಂಭದಲ್ಲಿ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ಎರಡು ಬಾರಿ ಜೈಲುವಾಸ ಅನುಭವಿಸಬೇಕಾಯಿತು. ಎರಡನೆಯ ಮಹಾಯುದ್ಧದಲ್ಲಿ ಭಾರತ ಭಾಗವಹಿಸುವುದನ್ನು ಬಹಿರಂಗವಾಗಿ ಖಂಡಿಸಿದ ಪ್ರಮುಖ ನಾಯಕರಲ್ಲಿ ಇವರು ಒಬ್ಬರಾಗಿದ್ದರು ಮತ್ತು ಇದಕ್ಕಾಗಿ ಅವರನ್ನು 1940 ರಲ್ಲಿ ಜೈಲಿನಲ್ಲಿರಿಸಲಾಯಿತು.

ಸಂವಿಧಾನ ರಚನಾ ಸಭೆಯಲ್ಲಿ ಅವರು ದಲಿತ ಹಕ್ಕುಗಳನ್ನು ಅಳವಡಿಸುವ ಕಾರ್ಯದಲ್ಲಿ ಭಾಗಿಯಾದರು. ಮತ್ತು ಚುನಾಯಿತ ಸಂಸ್ಥೆಗಳು ಮತ್ತು ಸರ್ಕಾರಿ ಸೇವೆಗಳಲ್ಲಿ ಜಾತಿಯ ಆಧಾರದ ಮೇಲೆ ದಲಿತರಿಗಾಗಿ ಮೀಸಲಾತಿ ಕುರಿತು ವಾದಿಸಿದರು.

1946ರಲ್ಲಿ, ಅವರು ಜವಾಹರಲಾಲ್ ನೆಹರೂ ಅವರ ತಾತ್ಕಾಲಿಕ ಸರ್ಕಾರದಲ್ಲಿ ಸಚಿವರಾಗಿ ಸೇವೆಸಲ್ಲಿಸಿದರು. ನಂತರ ಮೊದಲ ರಚನೆಯಾದ ಕ್ಯಾಬಿನೆಟ್‌ನಲ್ಲಿ ಕಾರ್ಮಿಕ ಸಚಿವರಾಗಿ ಸೇವೆಸಲ್ಲಿಸಿದರು. ಆ ಸಂದರ್ಭದಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ನೀತಿಗಳಿಗೆ ಅಡಿಪಾಯ ಹಾಕಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಆಗಸ್ಟ್ 16, 1947 ರಂದು ಜಿನೀವಾದಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಓ) ಕಾರ್ಮಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಪ್ರತಿಷ್ಠಿತ ಉನ್ನತ ಮಟ್ಟದ ಭಾರತೀಯ ನಿಯೋಗದ ಭಾಗವಾಗಿದ್ದರು. 'ನಿಯೋಗದಲ್ಲಿದ್ದ' ಖ್ಯಾತ ಗಾಂಧಿವಾದಿ ಬಿಹಾರ ಬಿಭುತಿ ಡಾ. ಅನುಗ್ರಾ ನಾರಾಯಣ್ ಸಿನ್ಹಾ ಅವರು ಜಗಜೀವನ ರಾಂ ಅವರಿಗೆ ರಾಜಕೀಯ ಮಾರ್ಗದರ್ಶಕರಾಗಿದ್ದರು. 1952 ರವರೆಗೆ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದ ಜಗಜೀವನ ರಾಂ ಅವರು ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. ರಾಮ್ 1946ರ ಮಧ್ಯಂತರ ರಾಷ್ಟ್ರೀಯ ಸರ್ಕಾರದಲ್ಲಿ ಸೇವೆ ಸಲ್ಲಿಸಿದ ನಂತರ, ನೆಹರೂ ಅವರ ಸರ್ಕಾರದಲ್ಲಿ (1952–56), ಸಾರಿಗೆ ಮತ್ತು ಸಂಪರ್ಕ ಖಾತೆ, ರೈಲ್ವೆ (1956–62), ಮತ್ತು ಸಂವಹನ ಖಾತೆಗಳ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು.



ಇಂದಿರಾ ಗಾಂಧಿ ಅವರ ಸರ್ಕಾರದಲ್ಲಿ, ಅವರು ಕಾರ್ಮಿಕ, ಉದ್ಯೋಗ ಮತ್ತು ಪುನರ್ವಸತಿ ಸಚಿವರಾಗಿ (1966–67), ಮತ್ತು ಕೇಂದ್ರ ಆಹಾರ ಮತ್ತು ಕೃಷಿ ಸಚಿವರಾಗಿ (1967–70) ಕೆಲಸ ಮಾಡಿದರು, ಅವರ ಅಧಿಕಾರಾವಧಿ ಹಸಿರು ಕ್ರಾಂತಿಗೆ ಕರೆ ನೀಡಿ, ದೇಶದ ಆಹಾರ ಸಮಸ್ಯೆಗೆ ಪರಿಹಾರದ ಮಾರ್ಗ ತೋರಿಸಿದರು. 1969 ರಲ್ಲಿ ಕಾಂಗ್ರೆಸ್ ಪಕ್ಷ ವಿಭಜನೆಯಾದಾಗ, ಜಗಜೀವನ್ ರಾಮ್ ಇಂದಿರಾ ಗಾಂಧಿ ನೇತೃತ್ವದ ಶಿಬಿರಕ್ಕೆ ಸೇರಿಕೊಂಡರು ಮತ್ತು ಕಾಂಗ್ರೆಸ್ ಬಣದ ಅಧ್ಯಕ್ಷರಾದರು. ಅವರನ್ನು ಕ್ಯಾಬಿನೆಟ್‌ನಲ್ಲಿ ವರ್ಚುವಲ್ ನಂ.2 ಆಗಿರುವ ಘನತೆಗೆ ಭಾಜನರಾಗಿದ್ದರು. ಅವರು ರಕ್ಷಣಾ ಸಚಿವರಾಗಿ ಯಶಸ್ವಿ ಕಾರ್ಯನಿರ್ವಹಣೆಯಿಂದಾಗಿ 1971 ರ ಇಂಡೋ–ಪಾಕಿಸ್ತಾನ ಯುದ್ಧ ನಡೆಯಿತು ಮತ್ತು ಬಾಂಗ್ಲಾದೇಶ ಸ್ವಾತಂತ್ರ ಗಳಿಸಿತು. ದೇಶ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೇಶದ ಸ್ಥಿತಿಗತಿಯನ್ನು ಪ್ರಧಾನವಾಗಿ ಆಲೋಚಿಸಿ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಫಾರ್ ಡೆಮಾಕ್ರಸಿ ಪಕ್ಷ ರಚನೆ ಮಾಡಿದರು. ಮತ್ತು ಜನತಾ ಒಕ್ಕೂಟ ರಚಿಸಲು ಅಪಾರವಾಗಿ ಶ್ರಮಿಸಿದರು.

ಮುಂದುವರಿಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

'ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ' ಕೃತಿಯಿಂದ ಆಯ್ದ ಭಾಗಗಳು

ಲೇಖಕರು : ಲೂಯಿ ಫಿಷರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಜನವರಿ 18ನೇ ತಾರೀಖು ಸ್ವಲ್ಪ ಸುಖವಾಗಿ ಮೈಯನ್ನು ಕೊಂಚ ಒತ್ತಿಸಿಕೊಂಡನು. ತೂಕ 107 ಪೌಂಡೇ ಇತ್ತು. ಜನವರಿ 13ನೇ ತಾರೀಖು ಮಧ್ಯಾಹ್ನ 11 ಗಂಟೆಗೆ ಉಪವಾಸ ಪ್ರಾರಂಭವಾದಾಗಿನಿಂದ ಹೊಸ ಕಾಂಗ್ರೆಸ್ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರ ಮನೆಯಲ್ಲಿ ಶತ್ರುಗಳ ನಡುವೆ ತಾತ್ಕಾಲಿಕವಾಗಿ ಜಗಳ ನಿಲ್ಲಿಸುವುದೇ ಅಲ್ಲದೆ, ಶಾಶ್ವತ ಶಾಂತಿ ನೆಲಸಲು ಸಮ್ಮೇಳನಗಳು ನಡೆಯುತ್ತಿದ್ದವು. ಕಾಗದದ ಪ್ರಮಾಣಗಳು ಅಮರಣಾಂತ ಉಪವಾಸ ಮಾಡಬೇಕೆನ್ನುವ ತನ್ನ ನಿಶ್ಚಯವನ್ನು ಕದಲಿಸುವುದಿಲ್ಲವೆಂದು ಗಾಂಧಿ ಹೇಳಿದರು. ಪ್ರಮಾಣಗಳ ಜೊತೆಗೆ ಅವುಗಳನ್ನು ಕಾರ್ಯ ರೂಪಕ್ಕೆ ತರಲು ಮಾಡಿರುವ ಏರ್ಪಾಟುಗಳೇನೆಂದು ಕೇಳಿದನು. ಹಿಂಬಾಲಕರು ನಡೆಸಲು ಸಾಧ್ಯವಿರುವುದಕ್ಕಿಂತ ಹೆಚ್ಚು ಪ್ರಮಾಣಗಳನ್ನು ಪ್ರತಿನಿಧಿಗಳು ಮಾಡ ಕೂಡದು. ಐದು ದಿನ ಮಾತನಾಡಿ, ವಾದಿಸಿ, ಬರೆದು, ಸಹೋದ್ಯೋಗಿಗಳೊಡನೆ ಕಲೆತು ಆತ್ಮಪರೀಕ್ಷೆ ಮಾಡಿಕೊಂಡರು. ಕಡೆಗೆ ಜನವರಿ 18ರ ಬೆಳಿಗ್ಗೆ 100 ಜನ ಹಿಂದೂ, ಮುಸ್ಲಿಂ, ಸಿಕ್, ಕ್ರೈಸ್ತ, ಜ್ಯೂಗಳು ಮತ್ತು ಯುದ್ಧ ಮನೋಭಾವವಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಮಹಾಸಭಾದ ಪ್ರತಿನಿಧಿಗಳು, ಪಾಕೀಸ್ತಾನದ ರಾಯಭಾರಿ, ಪ್ರಸಾದ್, ನೆಹರು, ಆಜಾದ್ ಗಾಂಧಿಯ ಬಳಿಗೆ ಬಂದರು. ಮುಸ್ಲೀಮರ ಜೀವ, ಆಸ್ತಿ, ಮತಗಳನ್ನು ಕಾಪಾಡುವುದಾಗಿಯೂ, ಕಾಣೆಸಿಕೊಳ್ಳಲು ಅವರು ಹೆದರುತ್ತಿದ್ದ ಪ್ರದೇಶಗಳಲ್ಲಿ ಓಡಾಟಕ್ಕೆ ಅನುಕೂಲತೆ ಕಲ್ಪಿಸಿಕೊಡುವುದಾಗಿಯೂ ಬರೆದುಕೊಟ್ಟರು. ಹಿಂದೂ ನಿರಾಶ್ರಿತರು ಮಸೀದಿಗಳನ್ನು ಬಿಟ್ಟುಕೊಡುವುದಾಗಿಯೂ, ಓಡಿಹೋಗಿದ್ದ, ಅವಿತುಕೊಂಡಿದ್ದ ಮುಸ್ಲಿಂ ವರ್ತಕರು ತಮ್ಮ ಕೆಲಸ ಕಾರ್ಯಗಳನ್ನು ಧೈರ್ಯವಾಗಿ ಮಾಡಲು ಅವಕಾಶ ಮಾಡಿಕೊಡುವುದಾಗಿಯೂ ಹೇಳಿದರು. ಈ ಎಲ್ಲಾ ಕೆಲಸಗಳೂ ಪೋಲೀಸು, ಸೈನ್ಯದ ಸಹಾಯವಿಲ್ಲದೆ ನಡೆಯುವುದು. ಜನರೇ ಅವುಗಳನ್ನು ಆಗ ಮಾಡುವರು. ಬದಲಾವಣೆಯ ಸೂಚನೆಯಾಗಿ ಹಿಂದೂ, ಮುಸ್ಲಿಮರು ಜೊತೆಗೂಡಿ, ಸೋದರಭಾವ ತೋರಿದ ಘಟನೆಗಳನ್ನು ಉಪವಾಸದಿಂದ ಸೋತ ಮಹಾತ್ಮರಿಗೆ ವರ್ಣಿಸಿದರು. ಗಾಂಧಿ ಅವರು ಮಂಚದ ಮೇಲೆ ಆಯಾಸವಾಗಿದ್ದರೂ ಉತ್ಸಾಹದಿಂದ ಎದ್ದು ಕುಳಿತು ಪ್ರತಿನಿಧಿಗಳೊಡನೆ ಮಾತನಾಡಿದರು. ಅಲಹಾಬಾದಿನಲ್ಲಿ ಗಲಭೆಯಾಯಿತೆಂದು ಪತ್ರಿಕೆಗಳಲ್ಲಿ ಬಂದಿದೆಯೆಂದು ಹೇಳಿದನು. ಆ ಹೊಣೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಮಹಾ ಸಭೆಗಳಿಗೆ ಸೇರಿದ್ದೆಂದು ಹೇಳಿದನು. "ಇಂಡಿಯಾ ದೇಶಕ್ಕೆ ಹಿಂದೂಗಳು, ಸಿಕ್ಕರು, ಮುಸ್ಲಿಮರು ಸೋದರರೆಂಬ ಅರಿವುಂಟಾಗದಿದ್ದರೆ ಎರಡೂ ರಾಷ್ಟ್ರಗಳಿಗೆ ಒಳ್ಳೆಯದಲ್ಲ. ಅವೆರಡಕ್ಕೂ ವ್ಯಾಜ್ಯವುಂಟಾದರೆ ಇಂಡಿಯಾ ಗತಿಯೇನು? ಈ ಆಲೋಚನೆ ಮನಸ್ಸನ್ನು ಕದಡಿ ಕಣ್ಣೀರು, ಗುಳಿಬಿದ್ದ ಕೆನ್ನೆಗಳ ಮೇಲೆ ಹರಿಯಿತು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ

ಯುವ ನಾಯಕತ್ವದಲ್ಲಿ ಹೊಸ ಮನ್ವಂತರ ಹುಟ್ಟಿಕೊಳ್ಳಲಿ

– ಡಾ. ಎಚ್.ಎಸ್. ದೊರೆಸ್ವಾಮಿ



'ರಾಷ್ಟ್ರೀಯವಾದವು ದ್ವೇಷವನ್ನು ಪ್ರಚೋದಿಸಬೇಕಾದ ಅಗತ್ಯವಿಲ್ಲ. ಜನಾಂಗೀಯ ದ್ವೇಷ ಎಂಬುದು ರಾಷ್ಟ್ರೀಯವಾದದ ನಿಜವಾದ ಚೈತನ್ಯವನ್ನೇ ಕೊಂದುಹಾಕುತ್ತದೆ' ಎಂಬ ಗಾಂಧಿಯವರ ಮಾತು ಇಂದು ನಮಗೆ ಪ್ರೇರಣೆಯಾಗಬೇಕು. ಜಾತಿ, ಧರ್ಮ, ಭ್ರಷ್ಟ ಹಣ–ಇವುಗಳು ಇಂದಿನ ರಾಜಕೀಯದ ಗೆಲುವಿನ ಸಾಧನಗಳಾಗಿಬಿಟ್ಟಿವೆ. ಮತದಾರರೂ ಇವುಗಳ ಪ್ರಭಾವಕ್ಕೆ ಮಣಿದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಿದ್ದಾರೆ. ಇಂದಿನ ಈ ದುಸ್ಥಿತಿಯಿಂದ ನಮ್ಮ ಜನ ಹೊರಬರಬೇಕು. ಅಧಿಕಾರದ ಅಮಲಿನ ರಾಜಕಾರಣವನ್ನು ವಿರೋಧಿಸುವುದು ನಮ್ಮ ಉದ್ದೇಶವಾಗಬೇಕು. ದ್ವೇಷ, ಅಸಭ್ಯ ವರ್ತನೆ ಬೇಡವೇ ಬೇಡ. ಸಮಾಜದಲ್ಲಿ ದ್ವೇಷ, ಅಶಾಂತಿಗಳನ್ನು ಸೃಷ್ಟಿಸುವ ಮೂಲಕವೇ ಗದ್ದುಗೆ ಹಿಡಿದಿರುವವರು ಅಧಿಕಾರ ಉಳಿಸಿಕೊಳ್ಳಲು ದುರ್ಮಾರ್ಗದಲ್ಲೇ ನಡೆಯುವ ಲಕ್ಷಣಗಳು ನಿಚ್ಚಳವಾಗಿವೆ. ಜನರ ನಿಜವಾದ ಪ್ರಗತಿಯನ್ನು ತಮ್ಮ ಆಡಳಿತ ವೈಖರಿಯಾಗಿಸಿಕೊಳ್ಳದವರು, ಧರ್ಮ, ದ್ವೇಷಗಳ ಆಧಾರದಲ್ಲಿ ಗೆಲ್ಲಲು ಹವಣಿಸುತ್ತಾರೆ. ಅಂಥವರು ಸಾಕಷ್ಟು ಕೀಳು ಹುನ್ನಾರಗಳನ್ನೂ ನಡೆಸುತ್ತಾರೆ. ನಿಮಗೆ ನೆನಪಿರಬಹುದು 2002–2012ರ ಅವಧಿಯಲ್ಲಿ ಗುಜರಾತಿನ ಮುಖ್ಯಮಂತ್ರಿಯ ಹತ್ಯೆಯ ಸುದ್ದಿ ಮಾಧ್ಯಮದಲ್ಲಿ ಹರಿದಾಡಿತು. ಆಗೊಮ್ಮೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಅವರ ಹತ್ಯೆಗೆ ಪ್ರಯತ್ನ ನಡೆಯುತ್ತಿದೆ ಎಂದು ಗುಜರಾತ್ ಪೊಲೀಸರ ಮೂಲಕ ಸುಳ್ಳು ಸುದ್ದಿಯ ಪ್ರಚುರಪಡಿಸಲಾಗಿತ್ತು. ಆ ಚುನಾವಣೆಯಲ್ಲಿ ಗೆದ್ದರು ಕೂಡಾ. ಇಂಥದೇ ಆರೋಪದ ಮೇಲೆ ಟೀಕಾಕಾರರನ್ನು, ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ತಳ್ಳಲಾಗುತ್ತಿದೆ. ಆದಾಗ್ಯೂ ಕ್ಲಿಷ್ಟ ಸಂದರ್ಭದಲ್ಲಿ ಯುವ ನಾಯಕರು ಜನಮಾನಸದಲ್ಲಿ ನಾಯಕರಾಗಿ ಮೂಡಿಬರುತ್ತಾರೆ. ಇಂತಹ ಯುವ ನಾಯಕತ್ವದ ಮೂಲಕ ಹೊಸ ಮನ್ವಂತರ ಹುಟ್ಟಿಕೊಳ್ಳಲಿದೆ. ಅವರ ಜೊತೆಗೆ ನಾವೆಲ್ಲ ಕೈ ಜೋಡಿಸಬೇಕಿದೆ. ವಿರೋಧ ಪಕ್ಷಗಳೂ ಕೂಡ ದುರಾಡಳಿತವನ್ನು ಕೊನೆಗೊಳಿಸಲು ಒಂದುಗೂಡಿದರೆ ದುಷ್ಟ ಆಡಳಿತವನ್ನು ತೊಲಗಿಸುವುದು ಕಷ್ಟದ ಕೆಲಸವಲ್ಲ. ಕರ್ನಾಟಕದ ಯುವಕ ಯುವತಿಯರೂ ಇದೇ ಗುರಿ ಸಾಧನೆಗಾಗಿ ಸಂಘಟನೆ ಕಟ್ಟುತ್ತಿದ್ದಾರೆ. ಯುವನಾಯಕರು ವಿಚಾರ ಕ್ರಾಂತಿಯ ಮೂಲಕ ಶೋಷಣೆರಹಿತ ಧರ್ಮ–ನಿರಪೇಕ್ಷ, ಭ್ರಷ್ಟಾಚಾರಮುಕ್ತ ಸರ್ವಸಮಾನತೆಯ ಸಮಾಜ ಒಂದನ್ನು ಕಟ್ಟುವ ಸಂಕಲ್ಪ ಮಾಡಲಿ ಎಂದು ಹಾರೈಸುತ್ತೇನೆ.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.



"ವೈಯಕ್ತಿಕ ತ್ಯಾಗ ಸಿದ್ಧಾಂತ"ದ ನಿಯಮ ಪಾಲಿಸುತ್ತಿದ್ದ ತಿಲಕರು ಅವರ ಶಿಕ್ಷಣ ಸಂಸ್ಥೆಯಲ್ಲಿರುವವರೆಲ್ಲ ಅದರಂತೆ ಇರಬೇಕೆಂದು ಆಶಿಸಿದ್ದರು. ಶಿಕ್ಷಣ ಸಂಸ್ಥೆ ಹೊರತಾಗಿ ಹಣ ಪಡೆದಲ್ಲಿ ಅದು ಸೊಸೈಟಿಯದೇ ಆಗಬೇಕೆಂದು ಅವರು ಇಚ್ಛಿಸಿದ್ದರು. ಎರಡನೆಯದಾಗಿ ಸಮಾಜ ಸುಧಾರಣೆಯ ಘಟನೆಯೊಂದು ಇವರೆಲ್ಲರ ನಡುವೆ ಮತ್ತೊಂದು ಭಿನ್ನಾಭಿಪ್ರಾಯ ಉದ್ಭವಿಸಲು ಕಾರಣವಾಯಿತು. ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು ಹತ್ತರಿಂದ – ಹನ್ನೆರಡಕ್ಕೇರಿಸಬೇಕು ಎಂಬ ವಿಚಾರದಲ್ಲಿ ಸವರ್ಣೀಯರೆಲ್ಲರೂ ವಿರೋಧಿಸಿದರು. 'ರಮಾಬಾಯಿ' ಎಂಬ ಹೆಣ್ಣು ಮಗಳು 'ನಾನು ಅವಿದ್ಯಾವಂತನೊಂದಿಗೆ ವಾಸಿಸಲಾರೆ' ಎಂದಿದ್ದಳು. ಆದರೆ ಉಚ್ಚನ್ಯಾಯಾಲಯ 'ಪತ್ನಿಯನ್ನು ತನ್ನೊಂದಿಗೆ ವಾಸಿಸಲು ಬಲತ್ಕಾರ ಮಾಡುವ ಹಕ್ಕು ಪತಿಗೆ ಇರುವುದೆಂದು' 1880ರಲ್ಲಿ ತೀರ್ಮಾನ ಪ್ರಕಟಿಸಿತ್ತು. ಅಗರ್‌ಕರ್, ರಾನಡೆ ಮತ್ತು ಭಂಡಾರ್‌ಕರ್ ಅವರು ಪತ್ನಿಯನ್ನು ಬೆಂಬಲಿಸಿದರು. ತಿಲಕ್, ಜೋಷಿ ಮತ್ತು ಅಪ್ಟೆ ಅವರು ಪತಿಯ ಹಕ್ಕನ್ನು ಎತ್ತಿ ಹಿಡಿದರು. ಟಿಳಕ್ ಮತ್ತು ರಾನಡೆ ಅವರ ನಡುವೆ ದೊಡ್ಡ ವಾಗ್ವಾದವೇ ನಡೆಯಿತು. 'ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ' ಕಾಲೇಜಿನ ಆಡಳಿತ ಮಂಡಳಿಯವರು 1888ರಲ್ಲಿ ಗೋಖಲೆ ಅವರು ರಚಿಸಿದ 'ಗಣಿತ ಶಾಸ್ತ್ರ'ವನ್ನು ಪಠ್ಯಪುಸ್ತಕವಾಗಿ ಮಾನ್ಯ ಮಾಡಿದರು. ಈ ಎಲ್ಲಾ ಕಾರಣಗಳಿಂದ ಬೇಸತ್ತು, ತಿಲಕರು 'ರಾಜೀನಾಮೆ ಪತ್ರ'ವನ್ನು ಸೊಸೈಟಿಗೆ ಸಲ್ಲಿಸಿದರು. ಇದರಿಂದಾಗಿ ಶಿಕ್ಷಣ ಸಂಸ್ಥೆಗೆ ತುಂಬಲಾರದ ನಷ್ಟವಾಯಿತು. ತಿಲಕರು ಪತ್ರಿಕಾ ರಂಗ, ಕಾನೂನು ಶಾಲೆ ಆರಂಭಿಸುವುದರ ಮೂಲಕ ಭಾರತ ಸ್ವಾತಂತ್ರ್ಯ ಸಮರದ ಬುನಾದಿಗೆ ಕಾರಣಕರ್ತರಾದರು.

ಮುಂದುವರಿಯುವುದು...

ಅಕ್ಷರದವ್ವ : ಸಾವಿತ್ರಿಬಾ ಪುಲೆ

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸಾವಿತ್ರಿ ಬಾಪುಲೆ ದಂಪತಿಗಳ ಕ್ರಾಂತಿಕಾರಕ ಸಾಮಾಜಿಕ ಪರಿವರ್ತನಾ ಕ್ರಮವೆಂದರೆ, ವಿಧವೆಯರ ಕೇಶ ಮುಂಡನ ಪದ್ಧತಿಯನ್ನು ನಿಲ್ಲಿಸಿದ್ದಾಗಿದೆ. ಅಂದಿನ ಮುಂಬಯಿಯಲ್ಲಿದ್ದ ನಾಪಿತರ ಒಂದು ಸಭೆಯನ್ನು ಆಯೋಜಿಸಿದರು. ಅವರೆಲ್ಲರಿಗೂ ವಿಧವೆಯರ ಸಂಕಷ್ಟಗಳು, ಕೇಶಮುಂಡನದ ಪರಿಣಾಮಗಳು, ವಿಕಲರೂಪದಿಂದಾಗುವ ಅಪಮಾನಗಳನ್ನು ಸಭೆಯಲ್ಲಿ ವಿವರಿಸಿದರು. ಅವರೆಲ್ಲರಿಂದಲೂ "ಇನ್ನು ಮುಂದೆ ವಿಧವೆಯರ ಕೇಶ ಮುಂಡನ ಮಾಡುವುದಿಲ್ಲ" ವೆಂಬ ಪ್ರತಿಜ್ಞೆ ಮಾಡಿಸಿದರು. ಈ ವಿಷಯದಲ್ಲಿ 'ಧೀನಬಂಧು' ಪತ್ರಿಕೆಯಲ್ಲಿ ಲೇಖನಗಳನ್ನು ಬರೆದರು. ದೇಶಾದ್ಯಂತ ವಿಷಯ ವಿದ್ಯುತ್ ಪ್ರವಾಹದಂತೆ ಪಸರಿಸಿತು. ಸವರ್ಣೀಯರು ಕುಪಿತರಾದರು. ಆದರೆ ಬ್ರಾಹ್ಮಣ ವಿಧವೆಯರು ನೆಮ್ಮದಿಯ ನಿಟ್ಟುಸಿರನ್ನೆಳೆದರು.

ಸಾಮಾಜಿಕ ಅನ್ಯಾಯ, ಅಪಮಾನಗಳ ವಿರುದ್ಧ ನಿರಂತರವಾಗಿ ಕಾರ್ಯಶೀಲರಾಗಿದ್ದ ದಂಪತಿಗಳು, 'ಸತ್ಯ ಶೋಧಕ ಸಮಾಜ'ವೆಂಬ ಸಾಮಾಜಿಕ ಸಂಸ್ಥೆಯನ್ನು 1873ರಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ, ಕಂದಾಚಾರ, ಅಸ್ಪೃಶ್ಯತೆ, ಅಸಮಾನತೆ, ಪುರೋಹಿತಶಾಹಿ ವಿರುದ್ಧ ಹೋರಾಡುತ್ತಾ, ಸರಳ ವಿವಾಹ, ಅಂತರ್ಜಾತೀಯ ವಿವಾಹ, ಸಾಮೂಹಿಕ ವಿವಾಹ, ಸಮಾನತೆ, ಶಿಕ್ಷಣ ಜಾಗೃತಿ ಕ್ರಮಗಳನ್ನು ಬೆಳೆಸುತ್ತಾ ಸಾಗಿದರು. ಪುಲೆ ಅವರ 'ಧೀನಬಂಧು' ಪತ್ರಿಕೆಯಲ್ಲಿ ಮಹಿಳಾ ಜಾಗೃತಿ ಲೇಖನಗಳು, ಶಿಕ್ಷಣ, ಇಂಗ್ಲೀಷ್ ಶಿಕ್ಷಣ ಕುರಿತಾದ ಲೇಖನಗಳನ್ನು ಬರೆದರು.



ಪುಲೆ ಅವರ ಸ್ನೇಹಿತ ಮೋರೋ ವಿಠ್ಠಲ ವಾಳೇಕರರಿಗೆ ಪ್ರೋತ್ಸಾಹಿಸಿ, "ಗೃಹಿಣಿ" ಎಂಬ ಮಾಸಿಕ ಸಂಚಿಕೆಯನ್ನು ಪ್ರಕಟಿಸಲು ಕಾರಣಕರ್ತರಾದರು. ಅದರಲ್ಲಿ ಅನೇಕ ಲೇಖನಗಳನ್ನು ಬರೆದರು. 'ಹರಕೆ' ಎಂಬ ಲೇಖನದಲ್ಲಿ 'ಕಲ್ಲು ದೇವರಿಗೆ ಮಕ್ಕಳನ್ನು ಕೊಡೆಂದು ಬೇಡುವುದು ಅಂಧ ಶ್ರದ್ಧೆ ಎಂದೂ, ಹರಕೆ ಕಟ್ಟಿದರೆ ಮಕ್ಕಳಾಗುವುದೇ?" ಎಂದು ಪ್ರಶ್ನೆ ಎತ್ತಿದರು. ಅವರ ಅಜ್ಞಾನ ಕವನ "ನಮ್ಮೆಲ್ಲರ ವೈರಿಯೊಂದೇ, ಒಗ್ಗೂಡಿ ನಾವದನು ನೂಕೋಣ, ಇದ ಬಿಟ್ಟು ಅನ್ಯ ಉಪಾಯವಿಲ್ಲ. ಹುಡುಕಿ, ಮನದಿಂದ ಯೋಚಿಸಿ, ಕಿವಿಯೊಡ್ಡಿ ಕೇಳಿ ಅದರ ಹೆಸರು ಅಜ್ಞಾನ" ಎಂದು ಸಮಾಜಿಕ ಅನಿಷ್ಟಗಳನ್ನು ವಿರೋಧಿಸಿ, ಜ್ಞಾನ–ವಿಜ್ಞಾನದ ಕರೆಕೊಟ್ಟರು. ಶಿಕ್ಷಣದಿಂದ ಮಾತ್ರ ಮಹಿಳೆ ಸಶಕ್ತಳಾಗುವಳು ಎಂದು ಧ್ವನಿ ಎತ್ತಿದರು. ಸಮುದಾಯದೊಂದಿಗೆ ಸಂವಾದದಲ್ಲಿ 'ತಾಯಂದಿರು, ಹೆಣ್ಣುಮಕ್ಕಳಿಗೆ ಸ್ವಾಭಿಮಾನದ ಪಾಠ, ಸ್ವಾವಲಂಬನೆಯ ಶಿಕ್ಷಣ ಕೊಡಿಸಬೇಕು. ಶಿಕ್ಷಣವೇ ಹೆಣ್ಣು ಮಕ್ಕಳ ಆಭರಣವಾಗಿದೆ' ಎಂದರು. 'ತೆಗೆದುಕೋ ನಡಿ, ಹೋಗು ಶಾಲೆಗೆ, ಹೋಗು ಶಾಲೆಗೆ" ಎಂದು ಕವನ ಬರೆದರು. 'ನಮ್ಮವ್ವ' ಕವನದಲ್ಲಿ (ಅತ್ತೆಯನ್ನು ಕುರಿತಾದ ಕವನ) 'ನಮ್ಮವ್ವ ಅತಿ ಕಷ್ಟಳು, ಪ್ರೇಮಮಯಿ, ದಯಾಳು' ಎಂದು ತಾಯಿಯ ಗುಣವಿಶೇಷಗಳು ಮತ್ತು ಹೃದಯವಂತಿಕೆಯನ್ನು ತೆರೆದಿಟ್ಟರು.

ಮುಂದುವರಿಯುವುದು...

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು : ಬೆಳಗುಂಬ ನಾರಾಯಯಣಪ್ಪ

ಪ್ರೊ. ಲೀಲಾ ವಾಸುದೇವ್

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ಎಕ್ಸಿಕ್ಯೂಟಿವ್ ಇಂಜನಿಯರ್ ಹುದ್ದೆ ತೊರೆದು ದೇಶಸೇವೆಗೆ ತೊಡಗಿದ ಮಹಾನ್ ದೇಶಪ್ರೇಮಿ ಬೆಳಗುಂಬ ನಾರಾಯಣಪ್ಪ ಅವರು 1946ರಲ್ಲಿ ಬೆಂಗಳೂರಿನ ಸಮೀಪದ ದೊಡ್ಡಬಳ್ಳಾಪುರದಲ್ಲಿ ಜನಿಸಿದವರಾಗಿದ್ದಾರೆ. ಸ್ವರಾಜ್ಯ ನಿರೀಕ್ಷೆಯ ಆ ದಿನಗಳಲ್ಲಿ ದೇಶದಲ್ಲೆಲ್ಲಾ ಗಾಂಧೀಜಿ ಮತ್ತು ಅನುಯಾಯಿಗಳ ಹತ್ತಾರು ಹೋರಾಟಗಳು ನಡೆಯುತ್ತಿದ್ದವು. ಜನಗಳ ಮೇಲೆ ಗಾಂಧೀ ತತ್ವಗಳ ಪ್ರಭಾವ ಪರಿಣಾಮಕಾರಿಯಾಗಿತ್ತು. ನೇರವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರದ್ದು ಒಂದು ಗುಂಪಾದರೆ ಅವರ ರಚನಾತ್ಮಕ ಕಾರ್ಯಗಳಲ್ಲಿ ಕ್ರಿಯಾಶೀಲರಾದವರದ್ದು ಮತ್ತೊಂದು ಗುಂಪು. ಈ ಎರಡನೇ ಗುಂಪಿಗೆ ಸೇರಿದ ನಾರಾಯಣಪ್ಪ ಅವರು, ಮಾಗಡಿ ತಾಲ್ಲೂಕಿನ ಬೆಳಗುಂಬ ಗ್ರಾಮದ ಗ್ರಾಮೋದ್ಧಾರಕ್ಕೆ ಸಂಪೂರ್ಣವಾಗಿ ತಮ್ಮನ್ನು ತೆತ್ತುಕೊಂಡರು.

ಇವರು 1912ರ ಏಪ್ರಿಲ್ 4 ರಂದು ಕೃಷಿಕ ಕುಟುಂಬದಲ್ಲಿ ತಂದೆ ವೀರಣ್ಣ, ತಾಯಿ ನರಸಮ್ಮ ಇವರಿಗೆ ಮಗನಾಗಿ ಜನಿಸಿದರು. ನಾರಾಯಣಪ್ಪ ಅವರು ಇಂಗ್ಲೀಷ್ ಲೋಯರ್ ಸೆಕೆಂಡರಿ ಮಾಗಡಿಯಲ್ಲಿ, ಹೈಸ್ಕೂಲು, ಲಂಡನ್ ಮಿಷನ್ ಸ್ಕೂಲ್ ಬೆಂಗಳೂರಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಪಡೆದರು. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಜೂನಿಯರ್ ಕಾಲೇಜಿನಲ್ಲಿ 'ಲೀಡಿಂಗ್ ಟು ಇಂಜನಿಯರಿಂಗ್' ಎಂಬ ಎರಡು ವರ್ಷದ ಕೋರ್ಸ್ ಓದಿ, ನಂತರ ಮೈಸೂರಿನ ವಿಶ್ವೇಶ್ವರಯ್ಯ ಇಂಜನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದರು. ಮೊದಲ ಹುದ್ದೆ 'ಸರ್ವೆಯರ್' ನರಸಿಂಹರಾಜಪುರದಲ್ಲಿ, ನಂತರ ಬಡ್ತಿಯಾಗಿ ಅಸಿಸ್ಟೆಂಟ್ ಇಂಜನಿಯರ್ ಎಂದು ದೊಡ್ಡಬಳ್ಳಾಪುರಕ್ಕೆ ಬಂದರು. ಓದು, ನೌಕರಿಯ ನಡುವೆಯೇ ಗಾಂಧಿ ಪುಸ್ತಕಗಳ ಅಧ್ಯಯನದಿಂದ, ಪತ್ರಿಕೆ ಓದುವುದರಿಂದ ಮತ್ತು ನ್ಯಾಷನಲ್ ಹೈಸ್ಕೂಲಿನಲ್ಲಿ ಗಾಂಧೀಜಿಯವರ ಭಾಷಣದಿಂದ ಪ್ರಭಾವಿತರಾಗಿದ್ದರು. ನಾರಾಯಣಪ್ಪನವರು 1946ರಲ್ಲಿ ಮಹತ್ವದ ನಿರ್ಣಯ ತೆಗೆದುಕೊಂಡರು. ಗಾಂಧೀಜಿ ಅವರ 'ಹರಿಜನ', 'ಖಾದಿ ಗ್ರಾಮೋದ್ಯೋಗ ಪತ್ರಿಕೆಗಳು ಅವರ ನಿರ್ಧಾರವನ್ನು ಬಲಪಡಿಸಿದ್ದವು. ಈಶ್ವರಚಂದ್ರ ವಿದ್ಯಾಸಾಗರರ ಪುಸ್ತಕಗಳು ಸ್ಫೂರ್ತಿ ನೀಡಿದ್ದವು. ದೇಶಕ್ಕೆ ಸ್ವಾತಂತ್ರ್ಯ ಬರುವ ಒಂದು ವರ್ಷ ಮೊದಲೇ ಬೆಳಗುಂಬಕ್ಕೆ ಹಿಂತಿರುಗಿ ಗಾಂಧೀಜಿಯವರ 11 ರಚನಾತ್ಮಕ ಕಾರ್ಯಕ್ರಮಗಳ ಪಾಲನೆಯೊಂದಿಗೆ ಹೊಸ ಜೀವನ ಆರಂಭಿಸಿದರು. ಆಗಲೇ ಹಳ್ಳಿಗೆ ಠಕ್ಕರ್ ಬಾಪಾ ಭೇಟಿ ನೀಡಿದ್ದರು. ಗಾಂಧೀ ಪ್ರೇರಿತ ಮೂಲ ಶಿಕ್ಷಣದ ಕೆಂಗೇರಿ ಗುರುಕುಲದ ಸಂಪರ್ಕ ಬೆಳೆಸಿ ಹಳ್ಳಿಯಲ್ಲಿ ಕೆಲಸ ಪ್ರಾರಂಭ ಮಾಡಿದ್ದರು.



ನಾರಾಯಣಪ್ಪ ಅವರ ಕಾರ್ಯಕ್ಷೇತ್ರ ಬೆಳಗುಂಬದೊಂದಿಗೆ, ಭಗಿನಿಗೆರೆ ಗ್ರಾಮವನ್ನೂ "Adopted Village" ಮಾದರಿಯಲ್ಲಿ ಅಭಿವೃದ್ಧಿ ಮಾಡಿದರು. ಶಾಲೆ, ಅಂಚೆ ಕಚೇರಿ, ವಯಸ್ಕರ ಶಿಕ್ಷಣ ಮತ್ತು ರಸ್ತೆ ನಿರ್ಮಾಣ ಮಾಡಿಸಿದರು. 10–12 ಮನೆಗಳನ್ನು ಕಟ್ಟಿಸಿದರು. ವಿನೋಬಾಜಿ ಅವರ ಪ್ರಭಾವದಿಂದ ಭೂದಾನ ಚಳುವಳಿಯಲ್ಲಿ ಭಾಗಿಯಾದರು. ಸರ್ವೋದಯ ಮಂಡಳಿಯ ಅಧ್ಯಕ್ಷರಾಗಿ ಕರ್ನಾಟಕದಾದ್ಯಂತ ಓಡಾಡಿ, ಪುಸ್ತಕ ಮಾರಾಟ, ಗಾಂಧೀ–ವಿನೋಬಾ ವಿಚಾರ ಪ್ರಚಾರ, ಸರ್ವೋದಯ ಕಾರ್ಯಗಳಲ್ಲಿ ತೊಡಗಿದರು. ಹಲವು ಬಾರಿ ವಿನೋಬಾಜಿ ಅವರೊಂದಿಗೆ ಪ್ರವಾಸ ಮಾಡಿದ್ದೂ ಉಂಟು. ಓದುವ ಹುಚ್ಚಿನ ನಾರಾಯಣಪ್ಪ ದೊಡ್ಡ ಪುಸ್ತಕ ಭಂಡಾರವನ್ನೇ ಹೊಂದಿದ್ದರು. ಅನೇಕ ಕೃತಿಗಳನ್ನು ರಚಿಸಿದ್ದರು. ಪುಸ್ತಕಗಳನ್ನು ಹೊತ್ತು ಮಾರಾಟ ಮಾಡುತ್ತಿದ್ದರು. ಸಾವಿರಾರು ಪುಸ್ತಕಗಳು ಇಂದಿಗೂ ಭಗಿನಿಗೆರೆ ಹೈಸ್ಕೂಲಿನಲ್ಲಿ ಇವೆ. ಬೆಳಗುಂಬದಲ್ಲಿ ಇವರು ಕಟ್ಟಿಸಿದ ಶಾಲೆಯೂ ನಡೆಯುತ್ತಿದೆ. ಇವರು "ಕೂಡೊಕ್ಕಲ ಸಂಘ" ರಚಿಸಿ, ಸಹಕಾರಿ ಕೃಷಿ ಪದ್ಧತಿಯನ್ನೂ ಆರಂಭಿಸಿದರು. ಪತ್ನಿ ಸರಸ್ವತಮ್ಮ, ದೇಶಪ್ರೇಮಿ, ಗಾಂಧಿವಾದಿ, ಸಮಾಜ ಕಲ್ಯಾಣ ಇಲಾಖೆಯ ಅಧ್ಯಕ್ಷೆಯಾಗಿ, ಕಸ್ತೂರ್‌ಬಾ ಟ್ರಸ್ಟ್ ಸೇವಾಕರ್ತರಾಗಿ ಸೇವೆ ಸಲ್ಲಿಸಿದವರಾಗಿದ್ದಾರೆ. ಇವರ ಗ್ರಾಮೋದ್ಯೋಗದ ಕಾರ್ಯಗಳನ್ನು ವೀಕ್ಷಿಸಲು ಮಿರ್ಜಾ ಇಸ್ಮಾಯಿಲ್, ಜಯಚಾಮರಾಜೇಂದ್ರ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ ಮುಂತಾದ ಗಣ್ಯ ವ್ಯಕ್ತಿಗಳು ಆಗಮಿಸಿದ್ದರು. ಮಾಗಡಿಯಲ್ಲಿ ಆಸ್ಪತ್ರೆ, ನಿರಾಶ್ರಿತರ ಕಾಲೋನಿ, ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಇವರು ಪ್ರೇರಣೆಯಾಗಿದ್ದರು.

ಗೂಡುವ ಬೀಡು ಕನ್ನಡದ ನಾಡು

ಗಾಡಿಯ ಸೀಮೆ ಚೆಲ್ವೊಗೆವ ತಾಣಮಲಂಪಿನ ಸಂತೆ
ಪೆಂಪು ಸಾರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ
ಗೊತ್ತು ವಿನಾದದಾಗರಂ ಮೋಡಿಯ ಮಂಟಪಂ
ಸಿರಿಯ ಪೆರ್ಚುಗೆಗೊಳ್ಳನೆ ಮುಕ್ತಿಕಾಂತೆ
ಕೈ ಗೂಡುವ ಬೀಡು ಕನ್ನಡದ ನಾಡು
ವಿರಜಿಪುದೆಂತು ಬಣ್ಣಿಪೆಂ

– ಚಿಕ್ಕುಪಾಧ್ಯಾಯ (ಹಸ್ತಿಗಿರಿಯ ಮಹಾತ್ಮ್ಯ)

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

"ಕ್ಷಮೆ ಎಂಬುದೇ ಪ್ರೀತಿಯ ಮೊದಲ ಕೌಶಲ್ಯ"

ನಡು ಬೀದಿಯಲ್ಲಿ ಮಾರಾಣಾಂತಿಕ ಹಲ್ಲೆಗೊಳಗಾದ ಬಾಪುವನ್ನು ಗಿಬ್ಸನ್ ಎಂಬ ವಕೀಲರ ಕಛೇರಿಯಲ್ಲಿ ಪ್ರಥಮಚಿಕಿತ್ಸೆ ನೀಡಿ ಸ್ಥಳೀಯ ಚರ್ಚ್‌ನ ಪಾದ್ರಿ ರೆ.ಜೋಸೆಫ್ ಡೋಕ್ ಕೋರಿಕೆಯಂತೆ ವಿಶ್ರಾಂತಿಗಾಗಿ ಅವರ ಮನೆಗೆ ಕರೆದೊಯ್ಯಲಾಗಿತ್ತು. ವಿಶ್ರಾಂತಿ ನಂತರ ಮುಂದಿನ ಪಯಣಕ್ಕೆ ಹೊರಡುವ ಮುನ್ನ ತನ್ನ ಮೇಲೆ ಹಲ್ಲೆ ಮಾಡಿದ ಮೀರ್ ಆಲಂ ನದು ಏನೂ ತಪ್ಪಿಲ್ಲ, ಬಿಡುಗಡೆ ಮಾಡಿ ಎಂದರು. ದಕ್ಷಿಣ ಆಫ್ರಿಕಾದ ಟ್ರಾನ್ಸ್ ವಾಲ್ ಪ್ರಾಂತದಲ್ಲಿ ವಾಸಿಸುತ್ತಿದ್ದ ಏಷ್ಯಾ ದೇಶಗಳ ಜನರಿಗೆ ಏಷ್ಯಾಟಿಕ್ ನೋಂದಣಿ ಕಾಯ್ದೆ–1906 ರಡಿ ಬೆರಳಚ್ಚು ಗುರುತು ನೀಡಿ ನೋಂದಣಿ ಮಾಡಿಸಿ ರಹದಾರಿ ಪತ್ರ ಪಡೆದುಕೊಳ್ಳುವ ವಿಷಯದಲ್ಲಿ ಜನರಲ್ ಸ್ಮಟ್ಸ್ ನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ತಾವೇ ಮೊದಲಿಗರಾಗಿ ಆ ಪ್ರಕ್ರಿಯೆಗೆ ತೆರಳಿದರು. ಅದನ್ನು ವಿರೋಧಿಸುತ್ತಿದ್ದ ಮೀರ್ ಆಲಂ ಮತ್ತವನ ತಂಡದವರು ಗಾಂಧಿಯವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದರು. ಕೆಳಗೆ ಬಿದ್ದ ಗಾಂಧಿ ಅವರನ್ನು ಪಠಾಣರ ಆ ಗುಂಪು ಕಾಲಿನಿಂದ ಒದ್ದು, ಕಬ್ಬಿಣದ ಸಲಾಕೆಯಿಂದ ಥಳಿಸುವ ಸಂದರ್ಭದಲ್ಲಿ ಗಾಂಧೀ ಸಹಚರರು ತಡೆಯದೆ ಹೋಗಿದ್ದರೆ ಅವರಿಗೆ ಪ್ರಾಣಾಂತಿಕ ಗಾಯ ಆಗುತ್ತಿತ್ತು. ಅಂತಹ ಅವಘಡವೊಂದಕ್ಕೆ ಕಾರಣನಾದ ಮೀರ್ ಆಲಂ ಮತ್ತು ಅವನ ಸಹಚರರನ್ನು ಶಿಕ್ಷೆಗೆ ಗುರಿ ಮಾಡದೆ ಬಿಡುಗಡೆಗೊಳಿಸಬೇಕೆಂದು ಹೇಳಿದ ಬಾಪು ಕ್ಷಮೆಯ ದೊಡ್ಡ ಮೂರ್ತಿಯಾಗಿ ಕಾಣುತ್ತಾರೆ.

ದಕ್ಷಿಣ ಆಫ್ರಿಕಾದಲ್ಲಿ ಹೋರಾಟದುದ್ದಕ್ಕೂ ಕಾನೂನು ಪಾಲನೆಯ ನೆಪದಿಂದ ಕಾಡಿದ ಹಾಗೂ ಜೈಲು ಪಾಲು ಮಾಡಿದ್ದ ಬ್ರಿಟಿಷ್ ಅಧಿಕಾರಿ ಜನರಲ್ ಸ್ಮಟ್ಸ್‌ನಿಗೆ ಬಿಡುಗಡೆಯ ದಿನದಂದು ತಾವೇ ತಯಾರಿಸಿದ ಒಂದು ಜೊತೆ ಚಪ್ಪಲಿಯನ್ನು ಉಡುಗೊರೆಯಾಗಿ ನೀಡಿ ಬಂದರು. ಇದು ಅವರ ಕ್ಷಮಾಗುಣದ ಮತ್ತೊಂದು ಘಟನೆಯಾಗಿ ನಮ್ಮ ಮುಂದಿದೆ. ಇವೆರಡೂ "ದುರ್ಬಲರು ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ. ಕ್ಷಮೆ ಎಂಬುದು ಪ್ರಬಲರ ಲಕ್ಷಣವಾಗಿದೆ. ಸಾಮಾಜಿಕವಾಗಿರುವುದು ಎಂದರೆ ಕ್ಷಮಿಸುವುದು ಎಂದರ್ಥ. ಕ್ಷಮೆ ಎಂದರೆ ಪ್ರೀತಿಯನ್ನು ಅರಿಸುವುದು. ಇದು ಸ್ವಯಂ ಕೊಟ್ಟುಕೊಳ್ಳುವ ಪ್ರೀತಿಯ ಮೊದಲ ಕೌಶಲ್ಯ" ಎಂಬ ಅವರ ಮಾತು ಜಗತ್ತಿನಾದ್ಯಂತ ಪ್ರಚಲಿತದಲ್ಲಿರುವ ಕ್ಷಮೆಯ ಕುರಿತಾದ ಉದಾತ್ತ ಸಿದ್ಧಾಂತವಾಗಿದೆ.

ಗಾಂಧೀಜಿ ಅವರು ಅಹಿಂಸೆ, ಸರಳತೆ, ಪರಿಸರ ಪ್ರೇಮ, ಸ್ವರಾಜ್ಯ ಇನ್ನಿತರ ಅನೇಕ ಮಾನವೀಯ ಗುಣಗಳು ಸಾಕಾರ ಸ್ವರೂಪರಾಗಿದ್ದಾರೆ. ಆದರೆ ಅವರ ಈ ಗುಣಗಳು ಈಗಲೂ ಅತ್ಯಗತ್ಯವಾದುದಾಗಿದೆ. ಜಗತ್ತು ತನ್ನ ಚಾರಿತ್ರಿಕ ಹಾದಿಯೊಳಗೆ ಚೆಲ್ಲಾಡಿರುವ ಜೀವ ಸಂಕುಲಗಳ ರಕ್ತ ಆರಲುಬಿಡದೆ ಅದನ್ನು ಹಸಿಯಾಗಿಯೆ ಇಡಲು ಪ್ರಯತ್ನಿಸುತ್ತಿರುವಾಗ, ಅದನ್ನು ವಿಸ್ಮರಣೆಗೊಳಿಸುವುದು ಕ್ಷಮಾಗುಣದಿಂದ ಮಾತ್ರ ಸಾಧ್ಯ. ಪ್ರಸ್ತುತದ ಆಧುನಿಕತೆ ದಯಪಾಲಿಸಿರುವ ನಾಗಾಲೋಟದ ಬದುಕೂ ಕೂಡ ಹಿಂಸಾಪ್ರವೃತ್ತಿಯನ್ನೇ ಬೆಳಸಲು ಪ್ರಯತ್ನಿಸುತ್ತಿದೆ. ಈ ಹೊತ್ತಿನಲ್ಲಿ ಬಾಪು ಪ್ರತಿಪಾದಿಸಿದ ಕ್ಷಮಾ ಗುಣ ಎಲ್ಲರಿಗೂ ತುಂಬಲಿ ಎಂದು ಪ್ರಾರ್ಥಿಸೋಣ.

ನಾನು 'ಅಹಿಂಸೆಯು ಹಿಂಸಾಚಾರಕ್ಕಿಂತ ಶ್ರೇಷ್ಠ' ಎಂದು ನಂಬುತ್ತೇನೆ, ಕ್ಷಮೆ, ಶಿಕ್ಷೆಗಿಂತ ಪೌರುಷವುಳ್ಳದ್ದಾಗಿದೆ ... "ಕಣ್ಣಿಗೆ ಕಣ್ಣು" ಎಂದು ಸೆಟೆದು ನಿಂತರೆ, ಇಡೀ ಜಗತ್ತನ್ನು ಕುರುಡಾಗಿಸಿದಂತಾಗುತ್ತದೆ" ಎಂಬ ಮಾನವ ಪ್ರೀತಿಯ ಸತ್ಯ ದರ್ಶನ ಮಾಡಿಸುವ ಗಾಂಧಿ ಅವರ ನಡೆ ಏಸುವಿನ ನಂತರದ್ದು ಎಂದೇ ಪರಿಗಣಿಸಬಹುದಾಗಿದೆ.

ಮುಂದುವರಿಯುವುದು..

ಮಾತೃಭೂಮಿ

ಮರೆತೆ ಯಾತಕಯ್ಯಾ ನಿನ್ನ ಮಾತೃಭೂಮಿಯ
ನಿರುತ ನಿನ್ನ ಹೊರೆಯ ಹೊತ್ತು ಪೊರೆವ ತಾಯಿಯ
ಒಂಬತ್ತು ತಿಂಗಳು ತನ್ನೊಳಿಂಬುಗೊಟ್ಟವಳು ತಾಯಿ
ತೊಂಬತ್ತು ವರುಷವಾದರೂ ಹೊರುವ
ಕುಂಭಿನಿ ತಾಯಲ್ಲೋ ಮನುಜ

ನಡೆ ನುಡಿ ಬರುವನಕ ನಿನ್ನ ಒಡಲ ಸಾಕಿದವಳು ತಾಯಿ
ಕಡೆತನಕ ನಿನ್ನೊಡಲಿಗೆ ಅನ್ನವ ಕೊಡುವಳು
ತಾಯಲ್ಲೋ ಮನುಜ

–ಮುದವೀಡು ಕೃಷ್ಣರಾಯರು

ಕನ್ನಡ

ಜಾತಿ ಸಂಕರವಿಲ್ಲ ಜಡದೇಹಿಗಳಿಲ್ಲ
ನೀತಿ ಹೀನರು ಚೋರರಿಲ್ಲ
ಘಾತುಕರಿಲ್ಲ ದುರ್ಜನರಿಲ್ಲ ಕರ್ನಾಟಕ
ರೀತಿಯನೆಂತು ಬಣ್ಣಿಪೆನು

ತೊರೆಗೂಡಿದ ನದಿ ನದಿಯ ಕಾಲುವೆಗಳು
ಪರಿದು ಕೂಡಿದ ಕೆರೆಯಿಂದ
ಕೆರೆತೊರೆ ನದಿಯಾರಾಮ ರಂಜಿಸುತಿಹ
ಪುರವಿಹುವಾ ದೇಶದೊಳಗೆ

–ಗೋವಿಂದ ವೈದ್ಯ
(ಕಂಠೀರವ ನರಸಿಂಹರಾಜ ವಿಜಯ ಕೃತಿಯಿಂದ)


ಬೆಳಗಾಂ ಅಧಿವೇಶನದಲ್ಲಿ ಕಲಾತಪಸ್ವಿ ವೆಂಕಟಪ್ಪ ಅವರು

– ವೇಮಗಲ್ ಸೋಮಶೇಖರ್.

ಆ ತಿಂಗಳ 24ರಂದು ಮೈಸೂರಿನಿಂದ ಹೊರಟ ಸಂಗೀತ ವಿದ್ವಾಂಸರಾದ ಬಿ.ದೇವೇಂದ್ರಪ್ಪ, ಬೆಳಕವಾಡಿ ಶೀನಿವಾಸ ಅಯ್ಯಂಗಾರ್, ಡಿ.ವಿ.ರಂಗಸ್ವಾಮಿ ಅಯ್ಯಂಗಾರ್ ಮತ್ತು ಅವರ ಅಭಿಮಾನಿಗಳ ತಂಡದಲ್ಲಿ ವೆಂಕಟಪ್ಪನವರೂ ಸೇರಿದ್ದರು. ರೈಲು ಅರಸೀಕೆರೆ ಮೂಲಕವಾಗಿ ಮರುದಿನ ಬೆಳಗಾಂ ತಲುಪಿದಾಗ ಅವರಿಗೆಲ್ಲಾ ಅದ್ದೂರಿಯ ಸ್ವಾಗತ ದೊರೆಯಿತು. ವೆಂಕಟಪ್ಪನವರ ಬಿಡಾರ ಶೇಷಣ್ಣನವರಿಗಾಗಿ ಏರ್ಪಡಿಸಿದ್ದ ಗುಡಾರದಲ್ಲೇ ಇದ್ದಿತು. ಎಲ್ಲ ವ್ಯವಸ್ಥೆಗಳನ್ನೂ ತುಂಬ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಎಲ್ಲರಿಗೂ 26ನೇ ಶುಕ್ರವಾರದಂದು ಮಹಾತ್ಮ ಗಾಂಧಿಯವರ ದರ್ಶನವಾಯಿತು. ತುಂಬಿದ ಸಭೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ದೇಶಭಕ್ತ ಗಂಗಾಧರರಾವ್ ದೇಶಪಾಂಡೆ ಅವರ ಸ್ವಾಗತ, ಮಹಾತ್ಮರ ಪ್ರಾಸ್ತಾವಿಕಭಾಷಣ ಎರಡನ್ನೂ ವೆಂಕಟಪ್ಪ ಅವರು ಆಲಿಸಿದರು. ಮಧ್ಯಾಹ್ನ ಸ್ವದೇಶಿ ಪ್ರದರ್ಶನಾಲಯಕ್ಕೆ ಹೋದಾಗ ಅವರಿಗೊಂದು ಅಚ್ಚರಿ ಕಾದಿತ್ತು. ತಾವು ಮೈಸೂರಿನಿಂದ ರೈಲಿನಲ್ಲಿ ಕಳುಹಿಸಿದ್ದ ಚಿತ್ರಗಳು ಇನ್ನೂ ಸೇರಿಯೇ ಇರಲಿಲ್ಲ! ಮನಸ್ಸಿಗೆ ತುಂಬ ಬೇಸರವಾಗಿ ವೆಂಕಟಪ್ಪ ತಮ್ಮ ಬಿಡಾರಕ್ಕೆ ಹಿಂದಿರುಗಿದ್ದರು. ಮರುದಿನ ಕಾಂಗ್ರೆಸ್ ಅಧಿವೇಶನಕ್ಕೆ ಹೋಗುವ ಉತ್ಸಾಹವೂ ಅವರಿಗೆ ಇರಲಿಲ್ಲ. ಬೇರೆಲ್ಲಿಯೂ ಹೋಗುವ ಮನಸ್ಸೂ ಇರಲಿಲ್ಲ. ವೆಂಕಟಪ್ಪನವರೇನೋ ಬೆಳಗಾವಿಗೆ ಬಂದುದಾಯಿತು. ಚಿತ್ರಗಳು ಮಾತ್ರ ಬರಲಿಲ್ಲ. ಅದಾದ ಮಾರನೆಯ ದಿನ ಮೈಸೂರಿನಿಂದ ಬಂದಿದ್ದ ಸಂಗೀತಗಾರರಿಗೆ ತಮ್ಮ ಅನಿಸಿಕೆಗಳಿಗೆ ಅವಕಾಶ ದೊರೆಯಿತು. ದೇಶ ನಾಯಕರೆಲ್ಲಾ ನೆರೆದಿದ್ದರು. ಮಹಾತ್ಮರು, ಮಹಮ್ಮದಾಲಿ, ಶೌಕತ್ಆಲಿ, ಪಂಡಿತ ಮದನ ಮೋಹನ ಮಾಳವೀಯ, ಲಾಲಾ ಲಜಪತ್‌ರಾಯ್ ಮೊದಲಾದ ಗಣ್ಯರೂ, ಶೇಷಣ್ಣನವರೇ ಮೊದಲಾಗಿ ಹಿರಿಯ ವಿದ್ವಾಂಸರು ಸರದಿಯಂತೆ ತಂತಮ್ಮ ಅನಿಸಿಕೆಗಳನ್ನು ಮಂಡಿಸಿದ್ದರು. ನೆರೆದವರು ಮೆಚ್ಚಿಕೊಂಡರು. ಎಲ್ಲರ ಪರವಾಗಿ ಮದನ ಮೋಹನ ಮಾಳವೀಯರು ಮೆಚ್ಚುಗೆ ಮಾತುಗಳನ್ನಾಡಿದರು. ಮಹಾತ್ಮರು ಕಾರ್ಯಗೌರವದಿಂದ ಸ್ವಲ್ಪ ಹೊತ್ತು ಇದ್ದು ಹೊರಟು ಹೋದರು. ಮರುದಿನ ಅಂದರೆ 29ರಂದು ಮಹಾತ್ಮರ ಆಶ್ರಮದಲ್ಲಿ ಅವರ ಸಮ್ಮುಖದಲ್ಲಿ ಶೇಷಣ್ಣ ಅವರ ವೀಣಾ ಕಚೇರಿ ಒಂದು ಗಂಟೆ ನಡೆಯಿತು. ಅಂದು ಸೋಮವಾರ ಮಹಾತ್ಮರ ಮೌನದಿನವಾದ್ದರಿಂದ "ಒಂದು ಗಂಟೆಯನ್ನು ತುಂಬಾ ಆನಂದದಿಂದ ಕೇಳಿದ್ದೇನೆ, ಮನಸ್ಸಿಗೆ ಬಹಳ ಶಾಂತಿ ದೊರಕಿದೆ, ಇನ್ನೂ ಕೇಳಬೇಕೆಂಬ ಆಸೆ ಇದೆ. ಆದರೆ ಇತರೆ ಕೆಲಸಗಳು ಇರುವುದರಿಂದ, ಕ್ಷಮಿಸಿ" ಎಂದು ಕಾಗದದಲ್ಲಿ ಬರೆದುಕೊಟ್ಟರು. ಹತ್ತಿರ ಕೂತವರಲ್ಲಿ ವೆಂಕಟಪ್ಪನವರೂ ಒಬ್ಬರು. ಆಶ್ರಮದಿಂದ ಹೊರಬರುವಾಗ ವೆಂಕಟಪ್ಪನವರ ಕೊಡೆ ಕಾಣೆಯಾಗಿತ್ತು. ಆಶ್ರಮದಲ್ಲಿ ಹೀಗೆ ಕೊಡೆಯನ್ನು ಕದ್ದೊಯ್ದುದು ಅರ್ಥವಾಗಲಿಲ್ಲ. ಇದನ್ನು ತಮ್ಮ ದಿನಚರಿಯಲ್ಲಿ ನಮೂದಿಸಿದ್ದಾರೆ. ಮೈಸೂರಿನಿಂದ ಬಂದಿದ್ದವರೆಲ್ಲಾ 31ನೆಯ ತಾರೀಖಿನಂದು ಬೆಳಗಾಂ ಬಿಟ್ಟು ಹೊರಟರು. ವೆಂಕಟಪ್ಪ, ಬಿ.ದೇವೇಂದ್ರಪ್ಪ, ಬೆಳಕವಾಡಿ ಶೀನಿವಾಸ ಅಯ್ಯಂಗಾರ್, ಡಿ.ವಿ.ರಂಗಸ್ವಾಮಿ ಅಯ್ಯಂಗಾರ್ ಮೇಲ್ ಗಾಡಿಯನ್ನು ಹಿಡಿದು ಮೈಸೂರಿಗೆ ಬಂದರು. ಉಳಿದ ವಿದ್ವಾಂಸರು ಧಾರವಾಡದ ಕಡೆ ಹೋದರು. ವೆಂಕಟಪ್ಪನವರಿಗೆ ಬೆಳಗಾಂ ಪ್ರಯಾಣದಿಂದ ಆದ ಒಂದು ಪ್ರಯೋಜನವೇನೆಂದರೆ ಮೈಸೂರಿನ ವೈಣಿಕರೂ, ಶಾಸ್ತ್ರಜ್ಞರೂ ಆದ ಎಚ್.ಪಿ.ಕೃಷ್ಣರಾಯರ ಭೇಟಿ. ಕೃಷ್ಣರಾಯರು 'ಸೈಕಾಲಜಿ ಆಫ್ ಮ್ಯೂಸಿಕ್' ಎಂಬ ಸೊಗಸಾದ ಗ್ರಂಥವನ್ನು ಬರೆದಿದ್ದರು. ವೆಂಕಟಪ್ಪನವರು ಕಲ್ಕತ್ತೆಯಲ್ಲಿದ್ದಾಗ 'ಶ್ರುತಿವೀಣೆ'ಯನ್ನು ಸಿದ್ಧಪಡಿಸಿದ್ದರಷ್ಟೆ. ಅದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಲು ವೆಂಕಟಪ್ಪನವರು ಅದನ್ನು ಮೈಸೂರಿನಲ್ಲಿರುತ್ತಿದ್ದ ಕೃಷ್ಣರಾಯರಿಗೆ ಕಳುಹಿಸಿದ್ದರು. ಆಗಿನಿಂದ ಅವರಿಬ್ಬರ ನಡುವೆ ಪತ್ರವ್ಯವಹಾರ ನಡೆಯುತ್ತಿದ್ದಿತು. ಆದರೆ ಭೇಟಿಯಾದದ್ದಿಲ್ಲ. ಮೈಸೂರಿನಿಂದ ಬೆಳಗಾಂ ಅಧಿವೇಶನಕ್ಕೆ ಆಹ್ವಾನಿಸಲ್ಪಟ್ಟ ವಿದ್ವಾಂಸರಲ್ಲಿ ಕೃಷ್ಣರಾಯರೂ ಒಬ್ಬರಾಗಿದ್ದರು. ಇವರಿಬ್ಬರ ಮೊದಲ ಭೇಟಿ ಬೆಳಗಾಂನಲ್ಲೇ ಆಗಿತ್ತು.

ಸಾದರ ಸ್ವೀಕಾರ

ಶೀರ್ಷಿಕೆ	ಪ್ರಕಾಶಕರು	ಲೇಖಕರು
1. ಅಂದಿಗೂ–ಇಂದಿಗೂ ಪ್ರಸ್ತುತ ಗಾಂಧೀಜಿ	ಕರ್ನಾಟಕ ಗಾಂಧಿ ಸ್ಮಾರಕ ನಿಧಿ	ಡಾ. ಎಚ್.ಎಸ್. ದೊರೆಸ್ವಾಮಿ
2. ಮೋದಿ ಗೆದ್ದಿದ್ದು ಎಲ್ಲಿ? ಸೋತಿದ್ದು ಎಲ್ಲಿ?	ಸುಂದರ ಪ್ರಕಾಶನ	ಶೇಷಣ್ಣ, ಅರುಣ ಅಡಿಗ, ಟಿಎಸ್ಸಾರ್ ರಾವ್
3. ಸತ್ಯಾಗ್ರಹಿ ದಂಪತಿಗಳು	ಚೇತನಾ ಪಬ್ಲಿಕೇಷನ್	ಹಾ.ವೀ. ಮಂಜುಳಾ ಶಿವಾನಂದ
4. ಸ್ವಪ್ನ ಸಾರಸತ್ವ	ಭಾಗ್ಯಲಕ್ಷ್ಮಿ ಪ್ರಕಾಶನ	ಗೋಪಾಲಕೃಷ್ಣ ಪೈ
5. **A Bridge to The Times of Gandhi**	**Sarovdaya Ilakkiya Pannai**	**T. Kannan**
6. **Great Indian Women**	**Publication Division, Govt. of India**	**Suresh Awasthi**
7. **Eco Criticism**	**University of Georgia Press**	**Peter Ben, Translation by Jayaragavan and K.C. Shivareddy**
8. **Bapu Kuti**	ಅಭಿನವ ಪ್ರಕಾಶನ	ಕನ್ನಡಾನುವಾದ : ಕೆ. ವೆಂಕಟರಾಜು



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಶೀಲಾಬಾಯಿ ಕುಲಕರ್ಣಿ : ಧಾರವಾಡದ ಪ್ರತಿಷ್ಠಿತ ಕುಟುಂಬದಲ್ಲಿ ಜನಿಸಿದ ಇವರು ಕಿರಿ ವಯಸ್ಸಿನಿಂದಲೇ ಪ್ರಭಾತ್‌ಪೇರಿ, ಧ್ವಜವಂದನೆಯಲ್ಲಿ ಭಾಗವಹಿಸಿ, ಅಲ್ಲಿ ಹಾಡುತ್ತಿದ್ದ ಹಾಡುಗಳನ್ನು ಕಲಿತಿದ್ದರು. ಪೋಲೀಸರೆದುರಿಗೆ “ಮಹಾತ್ಮಾ ಗಾಂಧಿ ಕೀ ಜೈ”, ವಂದೇ ಮಾತರಂ” ಎಂದು ಜಯಕಾರ ಕೂಗಿದ್ದಕ್ಕಾಗಿ ಪೋಲೀಸರು ಇವರನ್ನು ಬಂಧಿಸಿ, ತದನಂತರ ಎಚ್ಚರಿಕೆ ಕೊಟ್ಟು ಬಿಡುಗಡೆ ಮಾಡಿದ್ದರು. 1935ರ ನಂತರ ಪತಿಯೊಡನೆ ಸೇರಿ “ಚಲೇಜಾವ್” ಚಳುವಳಿಯಲ್ಲಿ ಪಾಲ್ಗೊಂಡರು. ಇವರು ಶಿಕ್ಷಕ ತರಬೇತಿಯನ್ನು ತ್ಯಜಿಸಿ, ಇವರ ಪತಿಯೂ ಸಹ ನೌಕರಿ ತ್ಯಜಿಸಿ, ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಕೇಂದ್ರ ಸಂಘಟನೆಯ ನಿರ್ದೇಶನದಂತೆ ಬೆಳಗಾವಿಯಲ್ಲಿ ನೆಲೆ ನಿಂತು, ನಾಲ್ಕು ಜಿಲ್ಲೆಗಳ ಸತ್ಯಾಗ್ರಹದ ಕೆಲಸ ನಿರ್ವಹಣೆ ವಹಿಸಬೇಕಾಯಿತು. ಜನ ಸಂಘಟನೆ, ಬುಲೆಟಿನ್ ಪ್ರಕಟಣೆ, ಆಹಾರ ವ್ಯವಸ್ಥೆಯ ಜವಾಬ್ದಾರಿ ನಿರ್ವಹಿಸಿದರು. ಪೋಲೀಸ ಠಾಣೆ ವಿನಾಶದ ಕಾರ್ಯಕ್ಕೆ ಹಣದ ಕೊರತೆಯಾದಾಗ, ಕೈಲಿದ್ದ ಬಳೆಯನ್ನೂ ಕೊಟ್ಟುಬಿಟ್ಟರು. ಸತ್ಯಾಗ್ರಹಿ ಬಾಬುರಾವ್ ಕಾಮತ್‌ರ ಬಂಧನದ ಸಂದರ್ಭದಲ್ಲಿ ಅವರ ಹತ್ತಿರವಿದ್ದ ಚೀಟಿಯ ಆಧಾರದಲ್ಲಿ ಇವರ ಮನೆಗೆ ಮುತ್ತಿಗೆ ಹಾಕಿದ್ದರು. ದಾಖಲೆಗಳು ದೊರೆಯದೆ ಪೋಲೀಸರು ಹಿಂತಿರುಗಿದ್ದರು. ವನಿತಾ ವಿದ್ಯಾಲಯದಲ್ಲಿ ಇವರ ಶಿಕ್ಷಣದೊಂದಿಗೆ ನೂಲುವುದು, ಪ್ರಾರ್ಥನೆ, ರಾಷ್ಟ್ರೀಯ ಚಿಂತನೆಗಳಲ್ಲಿ ಭಾಷಣ ಕಲೆ ಇವರಿಗೆ ಕರಗತವಾಗಿತ್ತು. ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ ಜೈಲಿನಲ್ಲಿ ರೋಗಿಗಳ ಶುಶ್ರೂಷೆ ಮಾಡಿದರು. ಐದು ತಿಂಗಳ ಅಂಡರ್ ಟ್ರಯಲ್ ಬಂಧಿಯಾಗಿದ್ದ ಇವರಿಗೆ ಶ್ರಮಶಿಕ್ಷೆ ವಿದಿಸಲಾಗಿತ್ತು. ಆರು ತಿಂಗಳ ನಂತರ ಬಿಡುಗಡೆಯಾದ ಇವರು ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅವರ ಶ್ರಮ ಸಾರ್ಥಕವಾಯಿತೆಂದು ಸಂಭ್ರಮಿಸಿದ್ದರು.

ವಿಮಲಾ ಗುಲ್ವಾಡಿ ಮತ್ತು ಹೇಮ ಶಿನೋಲಿಕರ್

ಧಾರವಾಡದ ಕೋರ್ಟ್ ಆವರಣಕ್ಕೆ ನುಗ್ಗಿ, ನ್ಯಾಯಾಧೀಶರ ಪೀಠದಲ್ಲಿ ಕುಳಿತು “ನೀವು ಪಿರಂಗಿಯವರು, ನೀವು ಭಾರತ ಬಿಟ್ಟು ತೊಲಗಿ” ಎಂದು ಘೋಷಣೆ ಕೂಗಿದ ದಿಟ್ಟ ಮಹಿಳೆಯರಿವರು. 1942ರ ಸೆಪ್ಟಂಬರ್ ಆರರಂದು ಬೆಳಗಿನ 11 ಗಂಟೆಗೆ ಕೋರ್ಟ್‌ನಲ್ಲಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಘರ್ಜಿಸಿದ ಈ ಇಬ್ಬರ ಕ್ರಾಂತಿಕಾರಿ ನಡೆಗೆ ಸೇರಿದ ಜನಸ್ತೋಮ, ಪೋಲೀಸರು, ನ್ಯಾಯಾಧೀಶರು ಬೆಕ್ಕಸ ಬೆರಗಾದರು. ನಂತರ ಇವರಿಬ್ಬರನ್ನು ಬಂದಿಸಿ, ಸೆರೆಮನೆಗೆ ತಳ್ಳಿದರು. ತದನಂತರದಲ್ಲಿ ಇವರಿಬ್ಬರ ಧೈರ್ಯಕ್ಕೆ ಮೆಚ್ಚಿದ ಮಹಿಳಾ ಪೋಲೀಸರಿಬ್ಬರೂ ತಮ್ಮ ನೌಕರಿಗೆ ರಾಜೀನಾಮೆ ಸಲ್ಲಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಸೇರಿಕೊಂಡರು.

ಮುಂದುವರಿಯುವುದು....

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು (ಮುಂದುವರಿದ ಭಾಗ)

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಅವರು ಸಂಯುಕ್ತವಾಗಿ ದಿ.24.12.2020ರಂದು ಆಯೋಜಿಸಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಂಡಿಸಿದ ಲೇಖನವನ್ನು ಫೆಬ್ರವರಿ ತಿಂಗಳಿಂದ ಪ್ರಕಟಿಸಲಾಗುತ್ತಿದೆ

ಗಾಂಧೀಜಿ, ಪಾಲಿಶ್ ಮಾಡಿದ ಮತ್ತು ಪಾಲಿಶ್ ಮಾಡದ ಅಕ್ಕಿ, ಬೆಲ್ಲ, ಸಕ್ಕರೆಗಳ ಪೌಷ್ಟಿಕತೆಯನ್ನು ತಿಳಿಯಲು ತಮಗೆ ಪರಿಚಯವಿದ್ದ ಹಲವರಿಗೆ ಪ್ರಶ್ನೆಗಳನ್ನು ಕಳಿಸಿದರು. ಆದರೆ ಅದರ ಬಗ್ಗೆ ಸಾಕಷ್ಟು ಸಂಶೋಧನೆಗಳು ಆಗಿಲ್ಲ ಎನ್ನುವುದು ಅವರಿಗೆ ತಿಳಿದು ಬಂತು. ಇದನ್ನು ತಿಳಿಯಲು ಯಾವ ರೀತಿಯ ಲ್ಯಾಬ್ ಗಳನ್ನು ನಿರ್ಮಾಣ ಮಾಡಬೇಕು? ಅಲ್ಲಿಯ ಸಂಶೋಧನೆಗಳ ವಿವರಗಳನ್ನು ಕಾಲ ಕಾಲಕ್ಕೆ ಜನರಿಗೆ ಹೇಗೆ ತಿಳಿಸಬೇಕು? ಎನ್ನುವುದರ ಚಿಂತನೆಯನ್ನು ಮಾಡಿದರು. ಅದಕ್ಕಾಗಿ ಆಲ್ ಇಂಡಿಯಾ ವಿಲೇಜ್ ಇಂಡಸ್ಟ್ರೀಸ್ ಅಸೋಸಿಯೇಷನ್‌ನ ಸಲಹಾ ಮಂಡಳಿಯ ಸದಸ್ಯರನ್ನಾಗಿ, ಸರ್ ಸಿ.ವಿ ರಾಮನ್, ಪಿ.ಸಿ ರೇ, ಜೆ.ಸಿ ಬೋಸ್, ಸ್ಯಾಮ್ ಹಿಗ್ಗಿನ್ ಬಾತಮ್ ಅವರನ್ನು ನೇಮಿಸಿಕೊಂಡರು. ಅಧಿಕಾರದ ಕೇಂದ್ರೀಕರಣವಾಗಬಾರದು ವೈಜ್ಞಾನಿಕ ವಿಚಾರಗಳ ಕೇಂದ್ರೀಕರಣವಾಗಬೇಕು ಎನ್ನುವುದು ಅವರ ವಿಚಾರವಾಗಿತ್ತು. ಅಹಿಂಸಾವಾದವನ್ನು ಕಾರ್ಖಾನೆಗಳ ನಾಗರಿಕತೆಯಲ್ಲಿ ಕಟ್ಟಲು ಸಾಧ್ಯವಿಲ್ಲ. ಆದರೆ ಸ್ವಸಮೃದ್ಧಿಯನ್ನು ಹೊಂದಿದ ಸ್ವಶಕ್ತ ಗ್ರಾಮಗಳಲ್ಲಿ ಕಟ್ಟಬಹುದು ಎನ್ನುತ್ತಿದ್ದರು. ಗ್ರಾಮಗಳ ಜನರು ತಮ್ಮ ಕೆಲಸಗಳಿಗಾಗಿ ಪಟ್ಟಣಗಳಿಗೆ ವಲಸೆ ಹೋಗಬಾರದು. ಅವರಿಗೆ ಅಲ್ಲಿಯೇ ಸಂತೃಪ್ತ ಜೀವನ ನಡೆಸಲು ಸಾಧ್ಯವಾಗಬೇಕು ಎನ್ನುವುದು ಅವರ ವಾದವಾಗಿತ್ತು. ಬಹುಶಃ ಇದುವರೆಗೆ ಈ ವಿಚಾರಗಳು ನಮಗೆ ಅಷ್ಟೇನೂ ಗಂಭೀರವಾದದ್ದು ಎಂದು ಅನಿಸಿರಲಿಲ್ಲ. ಆದರೆ ಇತ್ತೀಚಿನ ಕರೋನಾದ ಲಾಕ್ ಡೌನ್ ಸಂದರ್ಭದಲ್ಲಿ , ಗ್ರಾಮಗಳಿಂದ, ದೂರದ ಸಣ್ಣ ಊರುಗಳಿಂದ, ಬಂದ ಕಾರ್ಮಿಕರು ಅನುಭವಿಸಿದ ಪರಿಸ್ಥಿತಿಯನ್ನು ನೋಡಿದರೆ, ಅಂದಿನ ಗಾಂಧೀಜಿಯವರ ವಿಚಾರ ಇಂದಿಗೂ ಎಷ್ಟು ಪ್ರಸ್ತುತ ಎನ್ನುವುದು ತಿಳಿದು ಬರುತ್ತದೆ.

ಆಶ್ರಮದ ಒಳಗೆ ಮತ್ತು ಹೊರಗೆ ಗಾಂಧೀಜಿಯವರು ವಿಜ್ಞಾನದ ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಸ್ಥಳೀಯ ಭಾಷೆಯಲ್ಲಿ ಸ್ಥಳೀಯ ಜನರು ತಮ್ಮ ಜೀವನಕ್ಕೆ ಅನುಕೂಲವಾಗುವಂತಹ ವಿಜ್ಞಾನದ ಶಿಕ್ಷಣವನ್ನು ಪಡೆಯಬೇಕೆಂದು ಗಾಂಧೀಜಿ ಅವರು ಬಯಸಿದ್ದರು. ಪ್ರಾಯೋಗಿಕ ತರಬೇತಿಗೆ ಒತ್ತು ನೀಡಬೇಕೆಂದು ಬಯಸಿದ್ದರು. ಅದಕ್ಕಾಗಿ ಅವರು ಸ್ಥಳೀಯ ಭಾಷೆಯಲ್ಲಿ ವಿಜ್ಞಾನ ಶಿಕ್ಷಣವನ್ನು ನೀಡುವ ಜಪಾನ್‌ನ ಉದಾಹರಣೆಯನ್ನು ಕೊಡುತ್ತಿದ್ದರು.

ಮುಂದುವರಿಯುವುದು....

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

– ಯ.ರು. ಪಾಟೀಲ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಏತನ್ಮಧ್ಯೆ, ಸ್ವರಾಜ್ಯಕ್ಕಾಗಿ ನಡೆಯುತ್ತಿದ್ದ ಯತ್ನಗಳ ಕುರಿತು ದೇಶೀ ಪತ್ರಿಕೆಗಳ ಪ್ರಚಾರ ಕಡಿಮೆ ಇತ್ತು ಎನ್ನುವ ಅರಿವು ಗಾಂಧೀಜಿಯವರಿಗಿತ್ತು. ಬ್ರಿಟೀಷರನ್ನು ದೇಶದಿಂದ ಹೊರಗಟ್ಟಬೇಕೆ0ಬ ಕುರಿತು ನಿಖರವಾದ ಜಾಗೃತಿ ಮಾಡಬೇಕೆನ್ನುವ ವಿಚಾರ ಮಾಧ್ಯಮದಲ್ಲಿ ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಜನರಲ್ಲಿರುವ ಮೂಢ ನಂಬಿಕೆ, ಅಸಮಾನತೆ, ಕೆಟ್ಟ ರೂಢಿಗಳು, ಸೋಮಾರಿತನ, ಅನಕ್ಷರತೆ ಇವುಗಳ ಕುರಿತು ಜಾಗೃತಿಯನ್ನುಂಟು ಮಾಡಲು ಮಾಧ್ಯಮ ಪ್ರಯತ್ನಿಸುತ್ತಿತ್ತು. ಜನನಾಯಕರಾಗಿ, ಸಾಮಾಜಿಕ ಕಳಕಳಿ ಹಾಗೂ ಪತ್ರಿಕೋದ್ಯಮಗಳಿಂದ ಲೋಕಮಾನ್ಯ ಟಿಳಕರು ಪ್ರಭುತ್ವದ ನಿದ್ದೆ ಕೆಡಿಸಿದ್ದರು. ಗಾಂಧೀಜಿಯವರ ಪತ್ರಿಕೋದ್ಯಮ ಕಾಯಕಕ್ಕೆ ಇವರು ಪ್ರೇರಣೆಯಾಗಿದ್ದರು. ಆದರೆ ಟಿಳಕರ ಉಗ್ರ ಚಿಂತನೆಗಳನ್ನು ಸರಿಸಿಟ್ಟು ಗಾಂಧೀಜಿಯವರು ವ್ಯಕ್ತಪಡಿಸುವ ಸತ್ಯ, ಅಹಿಂಸೆ, ಸತ್ಯಾಗ್ರಹ, ತ್ಯಾಗಗಳ ಮೌಲ್ಯಗಳಿಂದ ಬ್ರಿಟೀಷರು ನಿಬ್ಬೆರಗಾಗುತ್ತಿದ್ದರು. ಆದರೆ ಮುಂದೊಂದು ದಿನ ಹಲವು ಭಾಷೆಗಳಲ್ಲಿ ಹೊರ ಬರುತ್ತಿದ್ದ ಪತ್ರಿಕೆಗಳು ಬ್ರಿಟೀಷ ಆಡಳಿತವನ್ನು ವಿಮರ್ಶೆ ಮಾಡಲಾರಂಭಿಸಿದವು. ಇದರಿಂದ ಪ್ರಭುತ್ವಕ್ಕೆ ಇರುಸು ಮುರುಸಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲೀಷ ಪತ್ರಿಕೆಗಳಿಗಿಂತಲೂ ದೇಶೀ ಪತ್ರಿಕೆಗಳೇ ಹೆಚ್ಚು ಜನಪ್ರಿಯತೆ ಮತ್ತು ಪ್ರಸಾರ ಪಡೆದವು. ಗಾಂಧೀಜಿ ಅವರ "ಯಂಗ್ ಇಂಡಿಯಾ" ಪತ್ರಿಕೆಗೆ ಹನ್ನೆರಡು ನೂರು ಚಂದಾದಾರರಿದ್ದರೆ ಗುಜರಾತಿ ನವಜೀವನ ಪತ್ರಿಕೆಗೆ ಹನ್ನೆರಡು ಸಾವಿರ ಚಂದಾದಾರರಿದ್ದರು. ನಂತರ ಈ ಸಂಖ್ಯೆ ಇಪ್ಪತ್ತು ಸಾವಿರಕ್ಕೆ ಬೆಳೆಯಿತು. ಗಾಂಧೀಜಿ ಅವರು ಒಟ್ಟು ಎಂಟು ಪತ್ರಿಕೆಗಳನ್ನು ನಡೆಸಿದರು. ಅವರ ಇಂಡಿಯನ್ ಓಪಿನಿಯನ್ ದಕ್ಷಿಣ ಆಫ್ರಿಕಾದಿಂದ ನಾಲ್ಕು ಭಾಷೆಗಳಲ್ಲಿ 1903 ರಲ್ಲಿ ಪ್ರಕಟವಾಗುತ್ತಿತ್ತು. ನವಜೀವನ ಪತ್ರಿಕೆ ಗುಜರಾತಿ ಸಾಪ್ತಾಹಿಕವಾಗಿ 1918ರಲ್ಲಿ ಪ್ರಕಟವಾಗುತ್ತಿತ್ತು. ಇದೇ ವರ್ಷ ಹಿಂದಿ ಭಾಷೆಯಲ್ಲಿ ನವಜೀವನ ಹಾಗೂ ಯಂಗ್ ಇಂಡಿಯಾ ಆಂಗ್ಲ ಭಾಷೆಯಲ್ಲಿ ಪ್ರಕಟವಾಗುತ್ತಿದ್ದವು. ನಂತರದ ವರ್ಷದಲ್ಲಿ 'ಸತ್ಯಾಗ್ರಹ' ಕೈಬರಹದಲ್ಲಿ ಪ್ರಕಟವಾಗುತ್ತಿತ್ತು. ಇನ್ನುಳಿದಂತೆ 1933ರಲ್ಲಿ ಆಂಗ್ಲ ಸಾಪ್ತಾಹಿಕವಾಗಿ 'ಹರಿಜನ', ಗುಜರಾತಿಯಲ್ಲಿ 'ಹರಿಜನ ಬಂಧು' ಉರ್ದು ಭಾಷೆಯಲ್ಲಿ "ಹರಿಜನ" ಪ್ರಕಟವಾದರೆ 1942ರಲ್ಲಿ ಹಿಂದಿ ಭಾಷೆಯಲ್ಲಿಯೂ ಪ್ರಕಟವಾಗುತ್ತಿತ್ತು. ಕನ್ನಡ ಭಾಷೆಯಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರು 1942ರಲ್ಲಿ ಹರಿಜನ ಆರಂಭಿಸಿದರು. ಪತ್ರಿಕೆಗಳ ಕುರಿತು ಗಾಂಧೀಜಿಯವರಿಗೆ ಇದ್ದ ನಿಲುವುಗಳೆಂದರೆ, "ಪತ್ರಿಕೆ ಜನರ ಬೆಂಬಲದಿಂದಲೇ ನಡೆಯಬೇಕು. ಪ್ರಜೆಗಳು ಬದುಕಿನಲ್ಲಿ ಹೇಗೆ ಮುಂದುವರಿಯಬೇಕು, ಸಾರ್ವಜನಿಕ ಜೀವನದಲ್ಲಿ ಹೇಗೆ ನಡೆಯಬೇಕು ಎಂದು ಮಾರ್ಗದರ್ಶನ ಮಾಡುವ ಪತ್ರಿಕೋದ್ಯಮ ದೇಶದ ಒಂದು ಧರ್ಮದರ್ಶಿ ಸಂಸ್ಥೆಯಾಗಿರಬೇಕು. ಓದುಗರ ಅಭಿಪ್ರಾಯ ತಿಳಿದುಕೊಂಡು ಅವರೂ ಸಹ ದೇಶ ಕಟ್ಟುವ ಕೆಲಸದಲ್ಲಿ ಭಾಗವಹಿಸುವಂತೆ ಪ್ರಚೋದಿಸುವುದು ಪತ್ರಿಕೆಗಳ ಹೊಣೆಗಾರಿಕೆಯಾಗಬೇಕು. ಜನರಲ್ಲಿ ಸಾಮರಸ್ಯ, ಐಕ್ಯಮತ್ಯ ಬೆಳೆಸುವ ನಿಟ್ಟಿನಲ್ಲಿ ಪತ್ರಿಕೆಗಳು ಗುರುತರ ಹೊಣೆಗಾರಿಕೆ ವಹಿಸಬೇಕು. ಪಾರದರ್ಶಕ ಪತ್ರಿಕೋದ್ಯಮವೇ ಅಗತ್ಯ. ಅರ್ಧ ಸತ್ಯ, ಕಣ್ಣು ಮುಚ್ಚಾಲೆಗಳ ಪರಿಸ್ಥಿತಿಯನ್ನು ಕೈ ಬಿಡಬೇಕು. ನಿರಂತರ ಸತ್ಯ ಅನ್ವೇಷಣೆ ನಡೆಯುತ್ತಿದ್ದರೆ ಮಾತ್ರ ಪತ್ರಿಕೆ ಜೀವಂತ" ಎನ್ನುವುದು ಗಾಂಧೀಜಿಯವರ ಅಚಲ ನಿಲುವಾಗಿತ್ತು.

ಫ್ಲೈಯಿಂಗ್ ಸಿಖ್ : ಮಿಲ್ಖಾ ಸಿಂಗ್ – ಗೌರವ ನಮನ (08.10.1935 – 18.06.2021)

– ಡಾ. ಗಣನಾಥಶೆಟ್ಟಿ ಎಕ್ಕಾರು



ಭಾರತ ಕಂಡ "ಮಹಾನ್ ಕ್ರೀಡಾಪಟು ಮತ್ತು ಅಥ್ಲೀಟ್" ಮಿಲ್ಖಾ ಸಿಂಗ್ ಲ್ಯಾಲ್ಲುಪುರದಲ್ಲಿ ಜನಿಸಿದವರಾಗಿದ್ದಾರೆ. 1947ರ ಭಾರತದ ಇಬ್ಭಾಗದಲ್ಲಿ ಸಂಭವಿಸಿದ ನರಮೇಧದಲ್ಲಿ ಅವರು ಹೆತ್ತವರನ್ನು ಕಳೆದುಕೊಂಡರು. ಅಂದು 12ರ ವಯಸ್ಸಿನ ಬಾಲಕ ಮಿಲ್ಖಾನ ಕಣ್ಣೆದುರಿಗೇ ಹೆತ್ತವರ ಹತ್ಯೆ ಮಾಡಲಾಗಿತ್ತು. 1956ರಲ್ಲಿ ನಡೆದ ಮೆಲ್ಬೋರ್ನ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಮಿಲ್ಖಾ ಸಿಂಗ್ ಭಾರತ ತಂಡದ ಅಥ್ಲೀಟ್ ಆಗಿ ಸ್ಪರ್ಧಿಸಿದ್ದು ಸಾಧನೆಯ ಕೊರತೆಯಿಂದಾಗಿ ಮೊದಲ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ತಮ್ಮ ಕ್ರೀಡಾ ಸಾಮರ್ಥ್ಯ ತೋರಿಸಲಾಗಲಿಲ್ಲ. 1958ರಲ್ಲಿ ಯುನೈಟೆಡ್ ಕಿಂಗ್ಡಮ್‌ನ ವೇಲ್ಸ್ ರಾಜಧಾನಿ ಕಾರ್ಡಿಫ್‌ನಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಸ್ವರ್ಣಪದಕ ಪಡೆದರು. ಇದೇ ಸಮಯದಲ್ಲಿ, ಪಾಕಿಸ್ತಾನದಲ್ಲಿ ನಡೆಯಲಿದ್ದ ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಲು ಮಿಲ್ಖಾಗೆ ಅಮಂತ್ರಣ ಬಂದಿತ್ತಾದರೂ, ಬಾಲ್ಯದ ದಾರುಣ ನೆನಪುಗಳೇ ಹೃದಯ ತುಂಬಿಕೊಂಡಿದ್ದರಿಂದ ಅಲ್ಲಿ ಭಾಗವಹಿಸಲು ಆಸಕ್ತಿ ತೋರಲಿಲ್ಲ. ಪಾಕಿಸ್ಥಾನ ಅತಿಥ್ಯ ವಹಿಸಿದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತೆ ಮಿಲ್ಖಾ ಸಿಂಗ್‌ರನ್ನು ಒತ್ತಾಯಿಸಲಾಯಿತು. ನಂತರ ಅವರು ಸ್ಪರ್ಧೆಯಲ್ಲಿ ಓಡಲು ನಿರ್ಧರಿಸಿದರು.ಓಟದಲ್ಲಿ ಮಿಲ್ಖಾ ಸಿಂಗ್ ತಮ್ಮ ಎಲ್ಲ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿ, ಬಹಳ ಸುಲಭವಾಗಿ ಜಯಗಳಿಸಿದರು. ಇದರಿಂದಾಗಿ ಅವರು 'ಫ್ಲೈಯಿಂಗ್ ಸಿಖ್' ಎಂದು ಬಿರುದಾಂಕಿತರಾದರು. ಇವರು ಭಾರತದ ಪರವಾಗಿ, ರೋಮ್ ಹಾಗೂ ಟೋಕಿಯೋ ಸಮ್ಮರ್ ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಸ್ಪರ್ಧಿಸಿದ್ದರು. ಅಥ್ಲೀಟ್ ಮಿಲ್ಖಾ ಸಿಂಗ್‌ರ ಪಾಲಿಗೆ 1958ರಿಂದ 1960ರ ಅವಧಿ ಸ್ವರ್ಣಯುಗ ಎನ್ನಬಹುದು. 1958ರಲ್ಲಿ ಟೋಕಿಯೋದಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ ಮಿಲ್ಖಾ ಸಿಂಗ್, 200 ಮೀಟರ್ ಮತ್ತು 400 ಮೀಟರ್ ಓಟಗಳಲ್ಲಿ ಕ್ರಮವಾಗಿ 21.6 ಸೆಕೆಂಡ್‌ಗಳು ಹಾಗೂ 47 ಸೆಕೆಂಡ್‌ಗಳಲ್ಲಿ ಓಡಿ, ಸ್ವರ್ಣ ಪದಕ ಗಳಿಸಿದರು. 1958ರಲ್ಲಿ ಕಾರ್ಡಿಫ್‌ನಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ 400 ಮೀಟರ್ ಓಟದಲ್ಲಿ ಸ್ವರ್ಣ ಪದಕ ಗಳಿಸಿದರು. ಇದರೊಂದಿಗೆ, ಮಿಲ್ಖಾ ಸಿಂಗ್ ಕಾಮನ್ವೆಲ್ತ್ ಕ್ರೀಡಾಕೂಟದಮೊದಲ ಸ್ವರ್ಣ ಪದಕ ವಿಜೇತ ಭಾರತೀಯ ಎಂಬ ಕೀರ್ತಿಗೆ ಭಾಜನರಾದರು. ಮಿಲ್ಖಾ ಸಿಂಗ್‌ರ ಜೀವನಗಾಥೆಯನ್ನು ಆಧರಿಸಿ 'ಭಾಗ್ ಮಿಲ್ಖಾ ಭಾಗ್' ಎಂಬ ಚಲನಚಿತ್ರ ನಿರ್ಮಿಸಲಾಗಿದೆ. ಇವರ ಕ್ರೀಡಾ ಸೇವೆಗೆ ಭಾರತ ಸರ್ಕಾರದ ಪದ್ಮಶ್ರೀ ಹಾಗೂ ಅನೇಕ ಪ್ರಶಸ್ತಿಗಳು ಸಂದಿವೆ.

ಕನ್ನಡ... ಕನ್ನಡಿಗ... ಕರ್ನಾಟಕ : ಮಾಸ್ತಿ ವೆಂಕಟೇಶ ಅಯ್ಯಂಗಾರ್
(06.06.1891 – 06.06.1986)

– ಡಾ. ರಾಮಲಿಂಗೇಶ್ವರ (ಸಿಸಿರಾ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಮಾಸ್ತಿ ಎಂದೇ ಖ್ಯಾತರಾಗಿ, ಶ್ರೀನಿವಾಸ್ ಎಂಬ ಕಾವ್ಯನಾಮದಿಂದ ಹೃದಯಸ್ಪರ್ಶಿ ಕತೆಗಾರರಾಗಿದ್ದವರೇ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರಾಗಿದ್ದಾರೆ. ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ ಜನನ. ಮಾಸ್ತಿ ಅವರು "ಪೆರಿಯಾತ್" ಎಂಬ ಮನೆತನದವರು. ಇದರ ಅರ್ಥ ದೊಡ್ಡ ಮನೆಯವರು ಎಂದು. ಹೊಂಗೇನಹಳ್ಳಿ, ಯಳಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರು, ಕಡೆಗೆ ಮದರಾಸು ಹೀಗೆ ನಾನಾ ಕಡೆಗಳಲ್ಲಿ ಬಂಧುಗಳ ನೆರವಿನಿಂದ ಶಿಕ್ಷಣ ಪಡೆಯುತ್ತಾ ಎಂ.ಎ. ಪದವಿ ಗಳಿಸಿದರು. ಮಾಸ್ತಿ, ಶಾಲೆಯಲ್ಲಿ ಎಲ್ಲಾ ಪರೀಕ್ಷೆಯಲ್ಲೂ ಪ್ರಥಮ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡಲಿಲ್ಲ. ಮದ್ರಾಸಿನಲ್ಲಿ ಇಂಗ್ಲೀಷ್ ಎಂ.ಎ. ಪದವಿಯಲ್ಲಿ ಚಿನ್ನದ ಪದಕ ಗಳಿಸಿದ್ದರು. ಮಾಸ್ತಿ ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸುಮಾರು ಒಂದೂವರೆ ತಿಂಗಳು ಉಪಾಧ್ಯಾಯರಾಗಿದ್ದು, ನಂತರ ಬೆಂಗಳೂರಿನಲ್ಲಿ ಸಿವಿಲ್ ಪರೀಕ್ಷೆ ಬರೆದು ಪ್ರಥಮರಾಗಿ ತೇರ್ಗಡೆಯಾಗಿದ್ದರು. ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮೀಶನರಾಗಿ ವೃತ್ತಿ ಜೀವನವನ್ನಾರಂಭಿಸಿ ಅಸಿಸ್ಟೆಂಟ್ ಸೆಕ್ರೆಟರಿ, ಡೆಪ್ಯೂಟಿ ಕಮೀಷನರ್, ಎಕ್ಸೈಸ್ ಕಮೀಷನರ್ ಇನ್ನೂ ಮುಂತಾದ ಹುದ್ದೆಯಲ್ಲಿ 1914 ರಿಂದ 1943 ರವರೆಗೆ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು. ಹೀಗಿದ್ದರೂ ಸಾಹಿತ್ಯಕ್ಕಂಟಿದ ನಂಟು ಅವರನ್ನು ಬಿಡಲಿಲ್ಲ. 1920ರಲ್ಲಿ ಅವರ ಮೊದಲ ಕಥಾಸಂಕಲನ ಪ್ರಕಟಗೊಂಡಿತು. ಸಣ್ಣಕತೆ, ನೀಳ್ಗತೆ, ಕಾದಂಬರಿ, ಕಾವ್ಯ, ನಾಟಕ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ, ಸಂಪಾದನೆ, ಅನುವಾದ – ಹೀಗೆ ಕನ್ನಡ ಸಾಹಿತ್ಯದ ಪ್ರತಿಯೊಂದು ಕ್ಷೇತ್ರದಲ್ಲೂ ಅವರ ಲೇಖನಿ ಧುಮ್ಮಿಕ್ಕಿ ಹರಿಯಿತು. 1983ರಲ್ಲಿ 'ಚಿಕ್ಕವೀರ ರಾಜೇಂದ್ರ' ಕಾದಂಬರಿಗಾಗಿ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಮಾಸ್ತಿಯವರು ಕನ್ನಡಕ್ಕೆ ನಾಲ್ಕನೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟವರಾಗಿದ್ದಾರೆ. ಸಾಹಿತ್ಯ ರಚನೆಯ ಜೊತೆಗೆ ಸಾಹಿತ್ಯ ಪೋಷಕರಾಗಿಯೂ ಮಾಸ್ತಿ ಅವರು ಕಾರ್ಯಶೀಲರಾಗಿದ್ದರು. ಜಿ.ಪಿ. ರಾಜರತ್ನಂ, ದ.ರಾ. ಬೇಂದ್ರೆಯಂತಹವರಿಗೆ ಆದರ್ಶರಾಗಿದ್ದರು. 1910ರಲ್ಲಿ ಬರೆದ 'ರಂಗನ ಮದುವೆ' ಎಂಬ ಸಣ್ಣ ಕಥಾ ಸಂಗ್ರಹದಿಂದ ಹಿಡಿದು ನಿಧನರಾಗುವ ಕೆಲವೇ ತಿಂಗಳುಗಳ ಮುನ್ನ ಬರೆದ 'ಮಾತುಗಾರ ರಾಮಣ್ಣ' ಕೃತಿಯವರೆಗೆ ಒಟ್ಟು 123 ಕೃತಿಗಳನ್ನು ರಚಿಸಿದ್ದಾರೆ. ಇದರೊಂದಿಗೆ ಅವರೇ ನಡೆಸುತ್ತಿದ್ದ "ಜೀವನ" ಎಂಬ ಪತ್ರಿಕೆಯಲ್ಲಿ ಬರೆದ ಸಂಪಾದಕೀಯ ಲೇಖನಗಳು, ಕವಿತೆಗಳ ಸಂಗ್ರಹ, ಕಾವ್ಯ ಸೇರಿವೆ. 20ನೆಯ ಶತಮಾನದ ಆರಂಭದಲ್ಲಿ ಬೆಳವಣಿಗೆಯ ದೃಷ್ಟಿಯಿಂದ, ಸಾಹಿತ್ಯದಲ್ಲಿ ಗಮನಾರ್ಹ ಕೆಲಸವಾಗಬೇಕಾಗಿದ್ದಾಗ ಮಾಸ್ತಿ ಸಾಹಿತ್ಯ ರಚನೆಯ ಕೆಲಸವನ್ನು ಕೈಗೊಂಡಿದ್ದರು. "ಸಣ್ಣ ಕಥಾ ರಚನೆ" ಅವರು ಆರಿಸಿಕೊಂಡ ಪ್ರಧಾನ ಸಾಹಿತ್ಯ ಪ್ರಕಾರ. ಶ್ರೀನಿವಾಸ ಎಂಬ ಕಾವ್ಯನಾಮದಲ್ಲಿ ಹಲವಾರು ಕಥಾ ಸಂಕಲನಗಳನ್ನು ಪ್ರಕಟಿಸಿದರು. ಅವರ ಸಣ್ಣಕಥೆಯೊಂದನ್ನು ರಾಜಾಜಿಯವರು ತಮಿಳಿಗೆ ಅನುವಾದಿಸಿದರು. ಅವರ ಸಣ್ಣ ಕತೆಗಳು ಇಂಗ್ಲೀಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ದೂರದರ್ಶನದಲ್ಲಿ ಕೆಲವು ಕತೆಗಳು ಪ್ರಸಾರವಾಗಿವೆ. ಕಥೆ ಹೇಳುವುದರಲ್ಲಿ ಮಾಸ್ತಿ ಎತ್ತಿದ ಕೈ. "ಸುಬ್ಬಣ್ಣ" ಎಂಬ ನೀಳ್ಗತೆ, ಅನನ್ಯ ಮಾನವೀಯ ಅಂತಃಕರಣವನ್ನು ತುಳುಕಿಸುವ ಮತ್ತು ಅಪರೂಪದ ತಂತ್ರಗಾರಿಕೆ ಬಳಸಿದ ಕಥಾ ರಚನೆಯಾಗಿದೆ. ಸಣ್ಣ ಕಥೆಗಳ ಜನಕರೆಂದೇ ಸುಪ್ರಸಿದ್ಧರಾಗಿದ್ದ ಮಾಸ್ತಿ ಅವರಿಗೆ ಕಥೆ ಹೇಳುವುದು ಪುಣ್ಯದ ಕೆಲಸವಾಗಿತ್ತು. ಅವರ ಎಲ್ಲ ಕೃತಿಗಳು ಕುಶಲತೆ, ಸೌಮ್ಯತೆ, ಜೀವನ ದರ್ಶನಗಳಿಂದ ಹೃದಯಸ್ಪರ್ಶಿಯಾಗಿರುತ್ತವೆ. "ಭಾರತತೀರ್ಥ", "ಆದಿಕವಿ ವಾಲ್ಮೀಕಿ" ಇವು ರಾಮಾಯಣಗಳನ್ನು ಕುರಿತು ಬರೆದ ಗ್ರಂಥಗಳಾದರೆ "ಶ್ರೀರಾಮ ಪಟ್ಟಾಭಿಷೇಕ" ಅವರ ಕಾವ್ಯವಾಗಿದೆ. ರವೀಂದ್ರನಾಥ ಠಾಕೂರ್, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಗಳನ್ನೂ, ಪುರಂದರದಾಸ, ಕನಕದಾಸ, ಅನಾರ್ಕಲಿ, ತಿರುಪಾಣಿ, ಶಿವಾಜಿ ಮುಂತಾದವರ ನಾಟಕಗಳನ್ನೂ ಹಾಗೂ ಷೇಕ್ಸ್‌ಪಿಯರನ ನಾಟಕಗಳ ಅನುವಾದಗಳನ್ನೂ ಮಾಡಿದ್ದಾರೆ. ಇತ್ತೀಚೆಗೆ "ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಬದುಕು ಬರಹ" ಎಂಬ ಕೃತಿಯನ್ನು ಎಸ್.ಆರ್. ವಿಜಯಶಂಕರ್ ಅವರು ರಚಿಸಿ, ವರ್ತಮಾನಕ್ಕೆ ಮಾಸ್ತಿ ಅವರನ್ನು ಸಮರ್ಪಕವಾಗಿ ತಲುಪಿಸುವ ಮಹತ್ವದ ಕಾರ್ಯ ಮಾಡಿದ್ದಾರೆ.



ಮಾಸ್ತಿ ಬರೆದ ಕಾದಂಬರಿಗಳು ಎರಡು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ 'ಚಿಕ್ಕವೀರ ರಾಜೇಂದ್ರ' – ಕೊಡಗಿನ ಅರಸ ಚಿಕ್ಕವೀರ ರಾಜೇಂದ್ರನನ್ನು ಕುರಿತದ್ದಾಗಿದೆ. ಮತ್ತೊಂದು "ಚನ್ನಬಸವನಾಯಕ". ಮಾಸ್ತಿ ಅವರು ಅಕ್ಷರಶಃ 'ಕನ್ನಡದ ಆಸ್ತಿ'ಯೇ ಆಗಿದ್ದಾರೆ. ಇವರುಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಬೆಳಗಾವಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ, ಮೈಸೂರು ಮಹಾರಾಜರಿಂದ "ರಾಜಸೇವಾ ಪ್ರಸಕ್ತ" ಬಿರುದು ಇನ್ನೂ ಹತ್ತು ಹಲವು ಗೌರವಗಳಿಗೆ ಭಾಜನರಾಗಿದ್ದಾರೆ.

ಬನವಾಸಿಯಿಂದ ನಿರ್ಗಮಿಸಿದ ಕಬ್ಬಿಗ : ಡಾ. ಸಿದ್ದಲಿಂಗಯ್ಯ - ಅಕ್ಷರ ನಮನ

(23.08.1913 - 19.04.2021)

– ಡಾ.ಸತ್ಯಮಂಗಲ ಮಹಾದೇವ

ಕನ್ನಡ ಕಾವ್ಯಲೋಕವು ಶಾಂತ ನದಿಯಂತೆ ಹರಿಯುತ್ತಿದ್ದ ಕಾಲ. ನೊಂದವರ, ಶೋಷಿತರ, ಬಡವರ ಒಡಲ ಬೆಂಕಿಯನ್ನು ಕಂಡುಂಡ, ತಾನೂ ಬೆಂದು ಬಸವಳಿದ ಯುವಕನೊಬ್ಬ ನದಿಯ ಪುಣ್ಯಸ್ನಾನ ಮಾಡುವವರಿಗೆ ತನ್ನ ಮತ್ತು ತನ್ನ ಸಮುದಾಯದ ನೋವುಗಳನ್ನು ಕೆಂಡದುಂಡೆಗಳ ಮಾಡಿ ಎಸೆದಾಗ ನದಿಯ ಪುಣ್ಯಸ್ನಾನದಲ್ಲಿದ್ದ ಕೆಲವರಿಗೆ ತಪ್ಪಿನ ಅರಿವಾಯಿತು, ಇನ್ನೂ ಕೆಲವರಿಗೆ ಆಶ್ಚರ್ಯವಾಯಿತು, ಇದರ ಮೂಲ ತಿಳಿದವರಲ್ಲಿ ಮಾನವತೆ ಜಾಗೃತವಾಯಿತು. 'ಹೊಲೆಮಾದಿಗರ ಹಾಡು' 1975ರಲ್ಲಿ ಪ್ರಕಟವಾದಾಗ ಕನ್ನಡ ಕಾವ್ಯಲೋಕವು ಈ ನೆಲದ ತರತಮಗಳ ಬೆಂಕಿಯಲಿ ಬೆಂದವರ ಹೊಸ ನುಡಿಗಟ್ಟುಗಳಿಗೆ, ತಲ್ಲಣದ ಕೂಗುಗಳಿಗೆ ಸಾಕ್ಷಿಯಾಯಿತು. ಹರಿಯುವ ನದಿಯನ್ನು ಹೋರಾಟದ ಸಾಗರದ ಕಡೇ ತಿರುಗಿಸಿದ್ದು ನಮ್ಮ ಜನಕವಿ, ದಲಿತರ ಪ್ರತಿನಿಧಿ, ನಾಡೋಜ ಡಾ.ಸಿದ್ದಲಿಂಗಯ್ಯ ಅವರಾಗಿದ್ದಾರೆ.

ಕ್ರಾಂತಿ ಕನ್ಯೆ ಮೋಹಜನ್ಯೆ । ನಿನ್ನ ಮದುವೆ ಆಗುವೆ
ಕ್ರಾಂತಿ ಕಿಡಿಯ ಸಿಡಿಸುವಾಗ । ನಾನು ನಿನ್ನ ತಬ್ಬುವೆ

'ನನ್ನವಳಿಗೆ' ಎನ್ನುವ ಕವಿತೆಯ ಈ ಸಾಲುಗಳು ಕ್ರಾಂತಿ ಕನ್ಯೆಯ ವರಿಸಿದ ಯುವಕನ ಮನೋಧರ್ಮವನ್ನು ಅನಾವರಣಗೊಳಿಸಿತು. ಹೌದು ಸಿದ್ದಲಿಂಗಯ್ಯನವರು ಸ್ವತಃ ಕೆಂಡದ ಮಾತುಗಳನ್ನೆ ಉಗುಳುವ ಕ್ರಾಂತಿಕನ್ಯೆಯ ತಬ್ಬಿದ್ದರು ದಲಿತರು ಅನುಭವಿಸಿದ ತಲ್ಲಣಗಳು ಸಂಘರ್ಷದ ರೂಪು ಪಡೆಯಿತು. ಸಿದ್ದಲಿಂಗಯ್ಯನವರು ಬರೆದ ಕಾವ್ಯ ನಾಡಿನ ಎಲ್ಲಾ ಶೋಷಿತರ, ಬಡವರ ಎದೆಗಳಲ್ಲಿ ಆರದ ದೀಪವಾಗಿ ಉರಿಯಲು ಕಾರಣವಾಯಿತು. ದಲಿತರ ನೋವುಗಳ ಪಂಜಿನಂತೆ ಉರಿದ ಸಿದ್ದಲಿಂಗಯ್ಯನವರ ಕಾವ್ಯದ ಲಯ ನವೋದಯದ್ದೇ ಆದರೂ ಅವರು ಬಳಸಿದ ನುಡಿಗಟ್ಟು ನೊಂದ ಬಡವರ ಎದೆಯಲ್ಲಿ ಬೆಂದ ಬೆಂಕಿಯ ಕಿಡಿಗಳೇ ಆಗಿದ್ದವು ಹೊಸದಾಗಿದ್ದವು. ಅಪರೂಪದ್ದಾಗಿದ್ದವು. ರೂಪಕಗಳು ಕಣ್ಣಿಗೆ ರಾಚುವಂತಿದ್ದ ನಿತ್ಯ ಘಟನೆಗಳೇ ಆಗಿರುತ್ತಿದ್ದವು. ಆದ್ದರಿಂದ ಕವಿಯ ಮನೋಧರ್ಮ 'ಹೋರಾಟ', ಕೊನೆಯ ಉಸಿರಿನವರೆಗೂ ಅಂತರ್ಗಾಮಿಯಾಗಿಯೇ ಹರಿಯಿತು. 2015 ನೇ ಸಾಲಿನ ಡಾ.ಜಿ.ಎಸ್.ಶಿವರುದ್ರಪ್ಪ ಕಾವ್ಯಪ್ರಶಸ್ತಿ ಸ್ವೀಕಾರಕ್ಕೆ ನಾನು ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಹೋದಾಗ ಪ್ರಶಸ್ತಿ ಪ್ರದಾನ ಮಾಡುವ ಸಂದರ್ಭದಲ್ಲಿ ತೀರ್ಪುಗಾರರ ನುಡಿಗಳನ್ನು ಹಂಚಿಕೊಂಡ ಕನ್ನಡದ ಪ್ರಖ್ಯಾತ ಸ್ತ್ರೀವಾದಿ ಲೇಖಕಿ ಸ.ಉಷಾ ಅವರು "ಸತ್ಯಮಂಗಲ ಮಹಾದೇವ ಅವರೆ ನಿಮ್ಮ ಯಾರ ಹಂಗಿಲ್ಲ, ಬೀಸುವ ಗಾಳಿಗೆ," ಕೃತಿಗೆ ಏಕೆ ಪ್ರಶಸ್ತಿಯನ್ನು ಕೊಡುತ್ತಿದ್ದೇವೆಂದರೆ. ನೀವು ನಿಂತ ಈ ಸ್ಥಳದಲ್ಲಿ ಸಿದ್ದಲಿಂಗಯ್ಯನವರು 'ಇಕ್ಕರಲಾ ಒದಿರ್ಲ' ಎಂದು ಕ್ರಾಂತಿಯ ಕಿಡಿಗಳನ್ನು ಸಿಡಿಸಿದ್ದರು, ದಲಿತ ಸಂವೇದನೆಯ ಮೂರನೇ ತಲೆಮಾರಿನ ನಿಮ್ಮ ಕಾವ್ಯದಲ್ಲಿ ಕಿಡಿಗಳಿಗೆ ವಿನಯದ ರೂಪ ಬಂದಿದೆ, ಕ್ರಾಂತಿಯು ವಿಡಂಬನೆಯಾಗಿ ಶೋಷಣೆಮಾಡುವವರ ಕಣ್ಣು ತೆರೆಸುತ್ತವೆ" ಎಂದರು. 90ರ ದಶಕದಿಂದೀಚೆಗೆ ಮತ್ತು ಸಿದ್ದಲಿಂಗಯ್ಯನವರ ಇತ್ತೀಚಿನ ಕಾವ್ಯಗಳಲ್ಲಿ ಬುದ್ಧನಿದ್ದ, ಬಾಬಾ ಸಾಹೇಬರು ಆಕಾಶದ



ಅಗಲಕ್ಕೂ ನಿಂತ ಆಲವಾದಾಗ ತಾವೂ ಆಲದ ಅಡಿಯಲ್ಲಿ ಕೂತು ದನಿ ಎತ್ತರಿಸಿ ಕೂಗದೆ ಹೋರಾಟದ ಮಾತುಗಳನ್ನು ಹಾಸ್ಯದ ದನಿಯಲ್ಲಿ ತಿವಿದರು. ಅವರು ಆಸ್ಪತ್ರೆ ಸೇರುವ ನಾಲ್ಕುದಿನಗಳ ಮುಂಚೆ ಭೇಟಿಯಾದಾಗ ಅವರ ವಿನಯ, ನಮ್ಮಂತಹ ಕಿರಿಯರ ಮೇಲಿನ ವಾತ್ಸಲ್ಯ, ಅಲೆಮಾರಿಗಳು, ಎಲ್ಲಾ ಜಾತಿಯ ಶೋಷಿತರು ಒಂದಾಗಿ ಹೋರಾಡಬೇಕೆನ್ನುವ ಹಂಬಲ ಕ್ರಾಂತಿಕನ್ಯೆ ಬುದ್ಧನ ಚಿಂತನೆಗಳಿಂದ ಹೊಸ ಮನುಷ್ಯಳಾಗಿ ಕಂಡಳೇ ಹೊರೆತು, ಹೋರಾಟದ, ಕ್ರಾಂತಿಯ ತನ್ನ ವರ್ಗತನವನ್ನು ಬಿಟ್ಟುಕೊಟ್ಟಿಲ್ಲ ಎಂಬುದಾಗಿ ಕಂಡರು.

"ಕವಿಗಳು" ಎಂದೇ ನಾವು ಯಾವಾಗಲೂ ಕರೆಯುತ್ತಿದ್ದ ನಾಡೋಜ ಡಾ.ಸಿದ್ದಲಿಂಗಯ್ಯನವರು ನಮಗೆ ಸಮ ಸಮಾಜ ನಿರ್ಮಾಣದ ಹೋರಾಟ, ಕಾವ್ಯ, ವಿನಯ, ತಿಳಿ ಹಾಸ್ಯದ ವಿಡಂಬನೆಗಳನ್ನು ಕೊಟ್ಟಿದ್ದಾರೆ. ಅವರ ಅನುಭವಜನ್ಯ ನುಡಿಗಳನ್ನು ಅನುಮಾನಿಸಿ, ಕೆದಕಿ ಬೆದಕದೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಕನ್ನಡದ ಏಳ್ಗೆಗೆ ಬೇಕಾದ ಪಟ್ಟುಗಳನ್ನು ಆರಿಸಿಕೊಂಡು ಕಲಿಯುವುದು ಮುಖ್ಯ. 'ಮನುಷ್ಯಜಾತಿ ತಾನೊಂದೆ ವಲಂ' ಎಂದು ನುಡಿದ ಆದಿಕವಿ ಪಂಪ ಬನವಾಸಿಯಲ್ಲಿ ಮರು ಹುಟ್ಟು ಪಡೆಯುವೆ ಎಂದು ಹೇಳಿದ. ಕನ್ನಡ ಸಾಹಿತ್ಯಕ್ಕೆ ಹೊಸ ನುಡಿಗಟ್ಟನ್ನು, ದಿಕ್ಕು ದೆಸೆಗಳನ್ನು ತಂದ ಕವಿ ಸಿದ್ದಲಿಂಗಯ್ಯನವರು ಕನ್ನಡದ ನೆಲದಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ಬನವಾಸಿಯನ್ನು ಕಟ್ಟಿ, ಈಗ ಬನವಾಸಿಯಿಂದ (ಅವರ ಮನೆಯ ಹೆಸರು) ನಿರ್ಗಮಿಸಿದ್ದಾರೆ. ಬಹುಶಃ ಕುವೆಂಪು, ಮಾಸ್ತಿ, ಕೆ.ಎಸ್.ನ, ಬೇಂದ್ರೆ ಇವರುಗಳೊಂದಿಗೆ ಕೂತು ಕನ್ನಡ ಕಾವ್ಯದ ಹೊಸ ನಾಳೆಗಳ ಸಮ ಸಮಾಜದ ಪಟ್ಟುಗಳನ್ನು ಕಲಿಯುತ್ತಿರಬಹುದೇನೋ.. ದೇಹ ಮಣ್ಣಿಗೆ, ಆತ್ಮ ಕನ್ನಡಕ್ಕೆ.

ಕನ್ನಡ ಸಾಹಿತ್ಯ ಲೋಕಕ್ಕೆ ಇವರ ಮಹತ್ತರ ಕೊಡುಗೆಗಳೆಂದರೆ, ಕವನ ಸಂಕಲನಗಳು :– 'ಹೊಲೆಮಾದಿಗರ ಹಾಡು', 'ಮೆರವಣಿಗೆ', 'ಸಾವಿರಾರು ನದಿಗಳು', 'ಕಪ್ಪು ಕಾಡಿನ ಹಾಡು', 'ಆಯ್ದ ಕವಿತೆಗಳು', 'ಅಲ್ಲಿ ಕುಂತವರೆ', 'ನನ್ನ ಜನಗಳು ಮತ್ತು ಇತರ ಕವಿತೆಗಳು', 'ಸಮಕಾಲೀನ ಕನ್ನಡ ಕವಿತೆ ಭಾಗ –3 4', ವಿಮರ್ಶಾ ಕೃತಿಗಳು :– ಲೇಖನಗಳ ಸಂಕಲನ, 'ಹಕ್ಕಿನೋಟ', 'ರಸಗಳಿಗೆಗಳು', 'ಎಡ–ಬಲ', 'ಉರಿ ಕಂಡಾಯ', 'ಅವತಾರಗಳು', 'ಸದನದಲ್ಲಿ ಸಿದ್ದಲಿಂಗಯ್ಯ ಭಾಗ–1, 2, 'ಜನ ಸಂಸ್ಕೃತಿ', ನಾಟಕಗಳು :– 'ಏಕಲವ್ಯ', 'ನೆಲಸಮ', 'ಪಂಚಮ' 'ಊರುಕೇರಿ ಭಾಗ । – 2, ಎಂಬ ಆತ್ಮಕಥೆಗಳನ್ನು ರಚಿಸಿದ್ದಾರೆ.

ಹೆಮ್ಮೆಯ ಕನ್ನಡಿಗ : ವರನಟ ಡಾ. ರಾಜ್‌ಕುಮಾರ್

(ಏಪ್ರಿಲ್ 24, 1929 – ಏಪ್ರಿಲ್ 12, 2006)

ಮಹೇಶ್

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಕನ್ನಡಕ್ಕೊಬ್ಬನೇ ರಾಜಕುಮಾರ

ನಿರ್ದೇಶಕರಾಗಿದ್ದ ಹೆಚ್.ಎಲ್.ಎನ್. ಸಿಂಹ ಅವರು ನಿರ್ಮಾಪಕ ಎ.ವಿ.ಎಂ. ಚೆಟ್ಟಿಯಾರ್ ಅವರನ್ನು ಸಂಪರ್ಕಿಸಿ, ಚಿತ್ರದ ಸಹ ನಿರ್ಮಾಪಕರಾಗಿದ್ದ ಗುಬ್ಬಿ ವೀರಣ್ಣನವರಿಗೂ ಬೇಡರ ಕಣ್ಣಪ್ಪ ನಾಟಕದ ಪಾತ್ರದಾರಿಯ ವಿಷಯ ತಿಳಿಸಿ ಒಪ್ಪಿಸಿದರು. ನಂತರ ಮುತ್ತುರಾಜ್‌ರ ಜೊತೆಗೆ, ಜಿ.ವಿ.ಅಯ್ಯರ್ ಹಾಗು ನರಸಿಂಹರಾಜು ಇವರುಗಳನ್ನು 'ಸ್ಕ್ರೀನ್ ಟೆಸ್ಟ್' ಗೆ ಮದರಾಸಿಗೆ ಆಹ್ವಾನಿಸಿದರು. ಸಿಂಹ ಅವರಿಂದಲೇ ಮುತ್ತುರಾಜ್ ಅವರಿಗೆ 'ರಾಜಕುಮಾರ್' ಎಂಬ ಹೊಸ ಹೆಸರು ನಾಮಕರಣವಾಯಿತು. ರಾಜಕುಮಾರ್ ನಾಯಕನಟನಾಗಿ ನಟಿಸಿದ 'ಬೇಡರಕಣ್ಣಪ್ಪ' ಚಿತ್ರವು 1954ರ ಮೇನಲ್ಲಿ ಮೈಸೂರು ರಾಜ್ಯದೆಲ್ಲೆಡೆ ಬಿಡುಗಡೆಗೊಂಡು ಯಶಸ್ವಿ ಪ್ರದರ್ಶನ ಕಂಡಿತು. ಬೇಡರ ಕಣ್ಣಪ್ಪ ಚಿತ್ರ ರಾಷ್ಟ್ರಪ್ರಶಸ್ತಿ ಪಡೆದ ಪ್ರಥಮ ಕನ್ನಡ ಚಿತ್ರವಾಗಿ ಕನ್ನಡ ಚಿತ್ರರಂಗದಲ್ಲಿ ಮೈಲಿಗಲ್ಲಾಯಿತು. ಈ ಮೊದಲು ಮದರಾಸಿನಲ್ಲಿ 'ಸ್ಕ್ರೀನ್ ಟೆಸ್ಟ್' ನೋಡಿದ್ದ ನಿರ್ಮಾಪಕ ಎ.ವಿ.ಎಂ. ಚೆಟ್ಟಿಯಾರ್ ಅವರು ಹೆಚ್.ಎಲ್.ಎನ್.ಸಿಂಹ ಅವರಲ್ಲಿ "ಈ ಉದ್ದ ಮೂಗು ಮತ್ತು ಉಬ್ಬು ಹಲ್ಲಿನವನನ್ನು ಹಾಕಿಕೊಂಡು ಏನು ಚಿತ್ರ ಮಾಡುತ್ತೀಯ" ಎಂದು ಹೀಯಾಳಿಸಿದ್ದರು. ಆದರೆ ಹೆಚ್.ಎಲ್.ಎನ್.ಸಿಂಹ ಅವರು "ಪಾತ್ರಕ್ಕೊಪ್ಪುವ ವ್ಯಕ್ತಿಗಳು ಇವರೇ" ಎಂದು ಒಪ್ಪಿಸಿದ್ದರು.

ಬಣ್ಣದ ಬದುಕಿನ ಪಕ್ಷಿನೋಟ

ಬೇಡರ ಕಣ್ಣಪ್ಪ ಚಿತ್ರದಿಂದ ನಾಯಕ ನಟನಾದ ರಾಜಕುಮಾರ್, ಭಕ್ತ ವಿಜಯ, ಹರಿಭಕ್ತ, ಓಹಿಲೇಶ್ವರ, ಭೂಕೈಲಾಸ, ಭಕ್ತ ಕನಕದಾಸ, ನವಕೋಟಿ ನಾರಾಯಣ(ಭಕ್ತ ಪುರಂದರದಾಸ) ಮುಂತಾದ ಭಕ್ತಿ ಪ್ರಧಾನ ಚಿತ್ರಗಳಲ್ಲಿ ಅಭಿನಯಿಸಿದರು. 60ರ ದಶಕದಲ್ಲಿ, ಕಣ್ತೆರೆದು ನೋಡು, ಗಾಳಿಗೋಪುರ, ನಂದಾದೀಪ, ಸಾಕುಮಗಳು, ನಾಂದಿ ಮುಂತಾದ ಸಾಮಾಜಿಕ ಚಿತ್ರಗಳಲ್ಲಿಯೂ, ರಣಧೀರ ಕಂಠೀರವ, ಕಿತ್ತೂರು ಚೆನ್ನಮ್ಮ, ಇಮ್ಮಡಿಪುಲಿಕೇಶಿ, ಶ್ರೀ ಕೃಷ್ಣದೇವರಾಯ ಮುಂತಾದ ಐತಿಹಾಸಿಕ ಚಿತ್ರಗಳಿಂದ ರಾಜ್ ನಾಡಿನಲ್ಲಿ ಜನಪ್ರಿಯ ಕಲಾವಿದರಾದರು.

1966ರಲ್ಲಿ ಸಂಗೀತ ಪ್ರಧಾನ ಸಂಧ್ಯಾರಾಗ ಚಿತ್ರದಲ್ಲಿ ಶಾಸ್ತ್ರೀಯ ಸಂಗೀತಗಾರನಾಗಿ ನಟಿಸಿದ ರಾಜ್‌ಕುಮಾರ್ ಅಭಿನಯಕ್ಕೆ ಭಾರತದ ಹೆಸರಾಂತ ಗಾಯಕರಾದ ಡಾ.ಬಾಲಮುರಳಿ ಕೃಷ್ಣ ಹಾಗು ಪಂಡಿತ್ ಭೀಮಸೇನ ಜೋಷಿ ಅವರು ಹಾಡಿದ್ದಾರೆ. ಅದೇ ವರ್ಷ ತೆರೆಕಂಡ ಮಂತ್ರಾಲಯ ಮಹಾತ್ಮೆ ಚಿತ್ರದಲ್ಲಿ "ಶ್ರೀ ರಾಘವೇಂದ್ರ ಸ್ವಾಮಿಗಳ ಪಾತ್ರ ಧನ್ಯತೆಯ ಭಾವ ತಂದಿದೆ" ಎಂದು ಹಲವಾರು ಬಾರಿ ಸಂದರ್ಶನಗಳಲ್ಲಿ ತಿಳಿಸಿದ್ದಾರೆ. 1968ರ ಜೇಡರ ಬಲೆ ಎಂಬ ಚಿತ್ರದ ಮೂಲಕ ಜೇಮ್ಸ್‌ಬಾಂಡ್ ಪಾತ್ರವನ್ನಾಧರಿಸಿದ ಚಿತ್ರಸರಣಿಗೆ ನಾಂದಿ ಹಾಡಿದರು. ಈ ಸರಣಿಯಲ್ಲಿ 'ಪ್ರಕಾಶ್' ಎಂಬ ಏಜೆಂಟ್ ಹೆಸರಿನಲ್ಲಿ ಆರಂಭಿಸಿ ಆಪರೇಷನ್ ಜಾಕ್‌ಪಾಟ್, ಸಿ.ಐ.ಡಿ. 999, ಗೋವಾದಲ್ಲಿ ಸಿ.ಐ.ಡಿ. 999 ಹಾಗು ಆಪರೇಷನ್ ಡೈಮಂಡ್ ರಾಕೆಟ್. ಸಿ.ಐ.ಡಿ. ರಾಜಣ್ಣ ಚಿತ್ರದಲ್ಲಿ ಅಭಿನಯಿಸಿದ್ದಾರೆ. ರಾಜ್‌ಕುಮಾರ್ ಅವರ ನೂರನೇ ಚಿತ್ರ 'ಭಾಗ್ಯದ ಬಾಗಿಲು' 1968ರಲ್ಲಿ ತೆರೆ ಕಂಡಾಗ ಇವರಿಗೆ 'ನಟಸಾರ್ವಭೌಮ' ಬಿರುದನ್ನು ನೀಡಿ ಗೌರವಿಸಲಾಯಿತು. ಅದೇ ಹೆಸರಿನ ಚಲನಚಿತ್ರವೂ ಕೂಡ ತಯಾರಾಯಿತು. ಈ ಚಿತ್ರವು ರಾಜ್‌ಕುಮಾರ್ ಅವರ ಹಿಂದಿನ ನೂರು ಚಿತ್ರಗಳ ತುಣುಕು ದೃಶ್ಯಗಳನ್ನು ಒಳಗೊಂಡಿತ್ತು.



1971ರಲ್ಲಿ ಬಿಡುಗಡೆಯಾದ ಕಸ್ತೂರಿ ನಿವಾಸ ಮತ್ತು ಸಾಕ್ಷಾತ್ಕಾರ ಚಿತ್ರಗಳು ರಾಜ್ ಅವರ ಜನಪ್ರಿಯ ಚಿತ್ರಗಳಲ್ಲಿ ಮುಖ್ಯವಾದವು.

ರಾಜ್‌ಕುಮಾರ್ ಅವರನ್ನು ಖ್ಯಾತಿಯ ಉತ್ತುಂಗಕ್ಕೇರಿಸಿದ ತೆರೆಕಂಡ "ಬಂಗಾರದ ಮನುಷ್ಯ" ಚಿತ್ರ 1971ರಲ್ಲಿ ಬಿಡುಗಡೆಗೊಂಡು ಚಿತ್ರಮಂದಿರದಲ್ಲಿ ಸತತವಾಗಿ ಎರಡು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಪ್ರದರ್ಶನಗೊಂಡು ಹೊಸ ದಾಖಲೆಯನ್ನು ನಿರ್ಮಿಸಿತು. ಈ ಚಿತ್ರವು, ಪಟ್ಟಣ ಸೇರಿದ್ದ ಯುವಕರು ಮತ್ತೆ ಹಳ್ಳಿಗಳಿಗೆ ಹಿಂತಿರುಗಿ ಕೃಷಿಯಲ್ಲಿ ತೊಡಗುವ ಸಾಮಾಜಿಕ ಪರಿವರ್ತನೆಯನ್ನೇ ತಂದಿತ್ತು.

1973ರಲ್ಲಿ ತೆರೆಕಂಡ ಅರಣ್ಯಾಧಿಕಾರಿಯ ಪಾತ್ರದ "ಗಂಧದ ಗುಡಿ" ಚಿತ್ರವು ಅವರ 150ನೇ ಚಿತ್ರವಾಗಿತ್ತು. ಹಾಗೂ ಅದರಲ್ಲಿನ 'ನಾವಾಡುವ ನುಡಿಯೇ ಕನ್ನಡ ನುಡಿ, ಸಿರಿ ಗಂಧದ ನುಡಿ' ಇಂದಿಗೂ ಕನ್ನಡದ ಮನೆ ಮನದ ಹಾಡಾಗಿದೆ. 1974ರಲ್ಲಿ ತೆರೆಕಂಡ ಭಕ್ತ ಕುಂಬಾರ ಚಿತ್ರದಲ್ಲಿನ ರಾಜ್ ಅಭಿನಯ ಮನೋಜ್ಞವಾಗಿತ್ತು. ಇದೇ ವರ್ಷ ಬಿಡುಗಡೆಯಾದ ಸಂಪತ್ತಿಗೆ ಸವಾಲ್ ಚಿತ್ರದ "ಯಾರೇ ಕೂಗಾಡಲಿ, ಊರೇ ಹೋರಾಡಲಿ" ಹಾಡಿನ ಮೂಲಕ ರಾಜ್ ಅವರು ಹಿನ್ನೆಲೆ ಗಾಯಕರಾಗಿ ಪ್ರಸಿದ್ಧರಾಗಿ ತಮ್ಮ ಮುಂದಿನ ಎಲ್ಲಾ ಚಿತ್ರಗಳಲ್ಲೂ ಹಾಡಲು ಪ್ರಾರಂಭಿಸಿದರು.

ರಾಜ್ ಅಭಿನಯದ "ಮಯೂರ" 1975ರಲ್ಲಿ ಬಿಡುಗಡೆಯಾಗಿದ್ದು ಕನ್ನಡ ನಾಡನ್ನು ಕಟ್ಟಿದ ಪ್ರಥಮ ಅರಸ ಕದಂಬ ಮಯೂರವರ್ಮನ ಚರಿತ್ರೆಯನ್ನಾಧರಿಸಿದ್ದಾಗಿತ್ತು.

ಮುಂದುವರಿಯುವುದು...

ಪ್ರೊ. ಗಂಜಾಂ ವೆಂಕಟಸುಬ್ಬಯ್ಯ : ಇಗೋ ಕನ್ನಡ ನಮನ

(23 ಆಗಸ್ಟ್ 1913 – 19 ಏಪ್ರಿಲ್ 2021)

– ರುದ್ರಪ್ಪ ಹನಗವಾಡಿ

ಕನ್ನಡ ಸಾರಸ್ವತ ಲೋಕದಲ್ಲಿ ಜಿ.ವಿ.ಎಂದೇ ಹೆಸರಾದ ವೆಂಕಟಸುಬ್ಬಯ್ಯನವರು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ಕೈಗೋನಹಳ್ಳಿಯಲ್ಲಿ ತಿಮ್ಮಣ್ಣಯ್ಯ ಮತ್ತು ಸುಬ್ಬಮ್ಮ ದಂಪತಿಗಳ ಮಗನಾಗಿ ಜನಿಸಿದರು. ವೆಂಕಟಸುಬ್ಬಯ್ಯನವರ ಪೂರ್ವಿಕರು ಬಹಳ ವರ್ಷ ನೆಲಸಿದ್ದು 'ಮುದಗುಂದೂರಿ'ನಲ್ಲಿ. ತದನಂತರ ಶ್ರೀರಂಗಪಟ್ಟಣದ ಉಪನಗರ, ಸೈನ್ಯ ವಲಯವಾಗಿದ್ದ ಗಂಜಾಂಗೆ ಬಂದು ನೆಲೆಸಿದ್ದರ ಕಾರಣ ಜಿ. ವೆಂಕಟಸುಬ್ಬಯ್ಯನವರೆಂದೇ ಪರಿಚಿತರು.

ವೆಂಕಟಸುಬ್ಬಯ್ಯನವರು ಕನ್ನಡದ ನಿಘಂಟುಶಾಸ್ತ್ರ, ಪ್ರಾಚೀನ ಸಾಹಿತ್ಯ ಅಧ್ಯಯನಕಾರರು ಮತ್ತು ಅನುವಾದ ತಜ್ಞರು. ಇವರಿಗೆ 1937ರಲ್ಲಿ ಮೈಸೂರು ಮಹಾರಾಜ ಕಾಲೇಜ್‌ನಿಂದ ಎಂ.ಎ. ಪದವಿಯಲ್ಲಿನ ಪ್ರಥಮ ಸ್ಥಾನಕ್ಕಾಗಿ ಸುವರ್ಣಪದಕವನ್ನು ಕೊಡಲಾಗಿತ್ತು. ಇವರು ಬಿ.ಟಿ.ಪದವಿಯನ್ನು ಪಡೆದರು. ನಂತರ 1939 ರಿಂದ ಸುಮಾರು 40 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದರು.

1876–1888 ರಲ್ಲಿ ಮೈಸೂರು ರಾಜ್ಯದಲ್ಲಿ ಕ್ಷಾಮ ತಲೆದೋರಿದಾಗ ಅವರ ಪರಿವಾರ ಗಂಜಾಂಗೆ ಬಂದು ನೆಲೆಸಿದರು. ಮಗ, ತಂದೆಗೆ 'ಅಮರಕೋಶ'ವನ್ನು ಕಂಠಪಾಠವಮಾಡಿ ಒಪ್ಪಿಸುತ್ತಿದ್ದ ಜೀವಿ ಅವರು ಕೆ. ಎಸ್ ನಾರಾಯಣಸ್ವಾಮಿ (ಗಾಂಧಿ ಸಾಹಿತ್ಯ ಸಂಪುಟದ ಸಂಪಾದಕ), ಕೆ.ಎಸ್ ಕೃಷ್ಣಸ್ವಾಮಿ ಅವರ ಸ್ನೇಹಸಂಪರ್ಕ ಹೊಂದಿದ್ದರು. ಜಿ.ವಿ ಅವರು 'ಬೆಂಗಳೂರು ಹೈಸ್ಕೂಲು ನಂತರ ಜಯನಗರದ ವಿಜಯ ಕಾಲೇಜಿನ ಅಧ್ಯಾಪಕರಾಗಿ ಸೇರಿ, ಅಲ್ಲಿಯೇ ಮುಂದೆ ಪ್ರಾಧ್ಯಾಪಕರಾಗಿ ಮತ್ತು ಪ್ರಾಂಶುಪಾಲರಾಗಿ ನಿವೃತ್ತರಾದರು. ಬೆಂಗಳೂರ ನಗರದ ವಿಶ್ವೇಶ್ವರಪುರದ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಿದ್ದರು. ಜಯನಗರದಲ್ಲಿ 'ಜಯರಾಮ ಸೇವಾ ಮಂಡಳಿ ಸಾರ್ವಜನಿಕ ಸಂಸ್ಥೆ'ಯನ್ನು ಸ್ಥಾಪಿಸಿದರು. ರೆವರೆಂಡ್ ಕಿಟ್ಟೆಲ್ ಅವರ ನೂರುವರ್ಷದ ಗೌರವಾರ್ಥವಾಗಿ ಪ್ರಥಮ ಕನ್ನಡ ನಿಘಂಟು ರಚಿಸಿದ (1993–94 ರಲ್ಲಿ) ಸಮಯದಲ್ಲಿಯೇ ಜಿ.ವಿಯವರ 'ಆಧುನಿಕ ಕನ್ನಡದ ಪ್ರಥಮ ನಿಘಂಟು' ಹೊರಬಂದಿತ್ತು. ಇಂಗ್ಲಿಷ್–ಕನ್ನಡ, ಇಂಗ್ಲೀಷ್–ಕ್ಲಿಷ್ಟ ಪದಕೋಶ, ಅಮೇರಿಕಾ ಮೂಲದ ಶೇಷಾದ್ರಿ ವಾಸು ಅವರ 'ಅಂತರ್ಜಾಲ ನಿಘಂಟು' ಜಿ.ವಿಯವರ ನಿಘಂಟನ್ನು ಆಧರಿಸಿಯೇ ರೂಪುಗೊಂಡಿವೆ. ಜಿ.ವಿ. ಅವರು 'ಇಗೋ ಕನ್ನಡ' ಪ್ರಜಾವಾಣಿಯಲ್ಲಿ ಅಂಕಣವಾಗಿ (12–05–91 ರಂದು) ಪ್ರಾರಂಭವಾಗಿತ್ತು. ಕನ್ನಡದ ಶಿಷ್ಟ ಬರವಣಿಗೆಯನ್ನು ಸಾರ್ವಜನಿಕರಿಗೆ ತಿಳಿಸಲು ಆರಂಭಿಸಿದ ಈ ಅಂಕಣ ಕೆಲವೇ ದಿನಗಳಲ್ಲಿ ಓದುಗರ ಮೆಚ್ಚುಗೆ ಪಡೆದಿತ್ತು.



ಇವರ ಸಾಹಿತ್ಯ ಸೇವೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಬೀದರನ ಪ್ರಥಮ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಬೆಂಗಳೂರಿನ ಅಖಿಲ ಭಾರತ 77ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ ಪುರಸ್ಕಾರಗಳು ಸಂದಿವೆ

ನಿತ್ಯ ಪಾರಾಯಣ ಶ್ಲೋಕಗಳು

ನಮಸ್ಕಾರ ಶ್ಲೋಕ

ತ್ವಮೇವ ಮಾತಾ ಚ ಪಿತಾ ತ್ವಮೇವ,
ತ್ವಮೇವ ಬಂಧುಶ್ಚ ಸಹಾ ತ್ವಮೇವ
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ,
ತ್ವಮೇವ ಸರ್ವಂ ಮಮ ದೇವದೇವ

ಸ್ನಾನ ಮಾಡುವಾಗ

ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತೀ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು

ದರ್ಶನ ಶ್ಲೋಕ

ಬಿಲ್ವಸ್ಯ ದರ್ಶನಂ ಪುಣ್ಯಂ ಸ್ಪರ್ಷನಂ ಪಾಪನಾಶನಂ
ಸೇವನಂ ರೋಗ ಶಮನಂ ಧಾರಣಂ ಮುಕ್ತಿ ಕಾರಣಂ

ಸಂಜೆ ದೀಪ ಹಚ್ಚುವಾಗ

ದೀಪಂ ಜ್ಯೋತಿ ಪರಬ್ರಹ್ಮ ದೀಪಂ ಜ್ಯೋತಿ ಪರಾಯಿನೇ
ದೀಪೇನ ಹರತೇ ಪಾಪಂ ಸಂಧ್ಯಾದೀಪಂ ನಮೋಸ್ತುತೇ

ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನಸಂಪದ:
ಶತ್ರು–ಬುದ್ಧಿ–ವಿನಾಶಾಯ ದೀಪಜ್ಯೋತಿರ್ನಮೋಸ್ತುತೇ

ಸಂಗ್ರಹ : ಪ್ರೊ. ಲೀಲಾ ವಾಸುದೇವ್

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಈ ಸಂಬಂಧದಿದಾಗಿ ಅವರ ಜೀವನದಲ್ಲಿ ಒಂದು ಹೊಸ ಪ್ರಕಾರದ ಮಾಧುರ್ಯವೂ, ಭ್ರಾತೃ ಭಾವವೂ ವಿಕಾಸಗೊಂಡಿತು. ಅದು ಅವರ ಜೀವನದ ಕೊನೆಯವರೆಗೂ ಸ್ಥಿರವಾಗಿ ಉಳಿಯಿತು. ಕೊನೆಯಲ್ಲಿ ಭಾರತಕ್ಕೆ ಹಿಂದಿರುಗಿ ಬಂದ ತರುವಾಯ, ಗಾಂಧಿ ಅವರ ಜೀವನವು ಇನ್ನಷ್ಟು ಜಟಿಲವೂ, ಸಂಕಟಮಯುವೂ ಆಯಿತು. ಆದರೂ ಕಸ್ತೂರ್‌ಬಾ ಅವರು ಪ್ರತಿಯೊಂದು ಆಪತ್ತಿನಲ್ಲಿಯೂ ಅವರಿಗೆ ಬೆಂಬಲವಾಗಿ ನಿಂತರು. ಅವರ ಪ್ರತಿಯೊಂದು ಹೊಸ ಆಗ್ರಹವನ್ನು ವಿಚಾರಪೂರ್ವಕ ಕೃತಿಯಲ್ಲಿ ಇಳಿಸಲು ಪ್ರಯತ್ನಪಟ್ಟರು. ಎಷ್ಟೋ ಬಾರಿ ಗಾಂಧಿ ಅವರ ಜೊತೆಯಲ್ಲಿಯೂ ಒಬ್ಬಂಟಿಗರಾಗಿಯೂ ಕಸ್ತೂರ್‌ಬಾ ಅವರು ಜೈಲಿನ ಶಿಕ್ಷೆಯನ್ನು ಅನುಭವಿಸಿದರು. ಅವರು ತಮ್ಮ ಆರೋಗ್ಯದಲ್ಲಿ ಏರುಪೇರಾಗಿದ್ದರೂ ಬಲಿಷ್ಠ ಆತ್ಮದ ಬಲದಿಂದ ಕಷ್ಟಗಳನ್ನು, ದುರಾಚಾರಗಳನ್ನೂ, ದಮನವನ್ನೂ ಎದುರಿಸಿದರು. ಕೊನೆಯವರೆಗೂ ಅವರ ಆತ್ಮಬಲವು ಅವರ ಬೆಂಬಲಕ್ಕೆ ಉಳಿಯಿತು.

ರಾಟೆಯಲ್ಲಿ ನೂತು ದಪ್ಪ ಖಾದಿಯನ್ನು ಧರಿಸುವುದು, ಆಶ್ರಮದಲ್ಲಿ ಹರಿಜನರನ್ನು ಆತ್ಮೀಯರಂತೆ ನಡೆಸಿಕೊಳ್ಳುವುದು, ಮುಂಬಯಿಯಲ್ಲಿ ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದು, ಉರಿಬಿಸಿಲಿನಲ್ಲಿಯೂ ಹಳ್ಳಿ ಹಳ್ಳಿ ತಿರುಗಿ ಹೆಣ್ಣು ಮಕ್ಕಳಲ್ಲಿ ಜಾಗೃತಿ, ಆತ್ಮವಿಶ್ವಾಸ ತುಂಬುವುದು, ಗಾಂಧಿ ಅವರು ಜೈಲಿನಲ್ಲಿ ಇರುವಾಗ ತಾವು ಹೊರಗೆ ಉಳಿದು ಅವರ ಕೆಲಸವನ್ನು ಮುಂದುವರಿಸುವುದು, ಆರೋಗ್ಯವು ಸರಿ ಇಲ್ಲದಿದ್ದಾಗಲೂ, ಸ್ವ ಇಚ್ಛೆಯಿಂದ ರಾಜಕೋಟಕ್ಕೆ ಹೋಗಿ ಸತ್ಯಾಗ್ರಹದಲ್ಲಿ ಭಾಗವಹಿಸುವುದು, ಗಾಂಧಿ ಅವರು ಉಪವಾಸ ಮಾಡಿದಾಗೆಲ್ಲಾ ಅವರ ಸೇವೆ ಮಾಡುತ್ತಿರುವುದು, ಇದೆಲ್ಲವೂ ಕಸ್ತೂರ್‌ಬಾ ಅವರ ಜೀವನಕ್ರಮವಾಗಿತ್ತು. ಅವರ



ಕ್ಷೀಣವಾದ ದುರ್ಬಲ ಶರೀರದಲ್ಲಿ ಎಷ್ಟೊಂದು ಬಲಿಷ್ಠವಾದ ಆತ್ಮವಿತ್ತು. ಇಷ್ಟೆಲ್ಲ ಕಷ್ಟಗಳನ್ನು ನಗೆಮೊಗದಿಂದಲೂ, ಸ್ನೇಹದಿಂದಲೂ ಸಹಿಸಿಕೊಳ್ಳುವ ಶಕ್ತಿ ಅವರಲ್ಲಿತ್ತು. ಗಾಂಧಿ ಅವರ ಶಿಸ್ತು ಹಾಗೂ ಕಠೋರ ವ್ಯವಹಾರಕ್ಕೆ ಗುರಿಯಾದ ಇನ್ನಿತರ ಜನರಿಗೆ ಸಹಾನುಭೂತಿ ತೋರಿಸುವ ಶಕ್ತಿ ಇತ್ತು. ನಿಜವಾಗಿಯೂ ನೋಡಿದರೆ ಗಾಂಧಿ ಅವರಿಗೆ ಕಸ್ತೂರ್‌ಬಾರಂಥಹ ಹೆಂಡತಿ ಸಿಕ್ಕಿರದಿದ್ದರೆ ಅವರಿಗೆ ಮಹಾತ್ಮರಾಗುವುದು ಶಕ್ಯವಿತ್ತೇ?

ಆದರೂ ಕಟ್ಟಕಡೆಗೆ ಇಂಥ ಕಷ್ಟಮಯ ಜೀವನದಿಂದ ಅವರ ಶರೀರದ ಮೇಲೆ ಪರಿಣಾಮವಾಗದೆ ಉಳಿಯಲಿಲ್ಲ. ಅವರ ಹೃದಯ ದುರ್ಬಲವಾಗುತ್ತಾ ಹೋಯಿತು. ಅವರಿಗೆ ದಮ್ಮು ಹೆಚ್ಚಾಯಿತು. ಇಷ್ಟಿದ್ದೂ ಅವರು ಏನೊಂದೂ ತಕರಾರು ಮಾಡುತ್ತಿರಲಿಲ್ಲ. ಮತ್ತು ಅವರ ಪ್ರೇಮದ ಸ್ವಭಾವದಲ್ಲಿ ಒಂದಿಷ್ಟೂ ಬದಲಾಗಲಿಲ್ಲ. ಯಾರೊಬ್ಬರಿಂದಲೂ ಸೇವೆಮಾಡಿಸಿಕೊಳ್ಳಬೇಕೆಂದು ಅವರು ಎಂದೂ ಬಯಸಲಿಲ್ಲ. ಹೀಗಾಗಿ ಪ್ರಸನ್ನ ಚಿತ್ತರಾಗಿಯೇ ಇರುತ್ತಿದ್ದರು.

ಮುಂದುವರಿಯುವುದು....

ಸಂಗ್ರಹ : ವಿ.ಎನ್. ತಿಪ್ಪನಗೌಡ, ಉಪಾಧ್ಯಕ್ಷರು, ಗಾಂಧಿ ಭವನ

ಕಸ್ತೂರಿ ನಾಡು

ಬಾನಿನಗಲಕೆ ನೆಲಸಿ ದೆಸೆದೆಸೆಗೆ ಕಟ್ಟಿ
ನಡೆ ನೋಟಕೆರಚಿರುವ ಕಸ್ತೂರಿ ನಾಡು
ಅಗೆದಲ್ಲ ಹೊಳೆಹೊನ್ನು, ನುಡಿಯು ದಾಂಗುಡಿ ಹಾಡು
ಅಡಿತಳದ ಅರಿಮೆಟ್ಟು, ಗಂಡುಮೆಟ್ಟು
ವೀರ ಸಿರಿ ಕಲೆಬೀಡು ಎನ್ನ ತಾಯ್ನಾಡು

–ಡಾ. ವಿ. ಸೀತಾರಾಮಯ್ಯ

ವಿಶ್ವ ತಾಯಂದಿರ ದಿನಾಚರಣೆ



ತಾಯಂದಿರ ದಿನಾಚರಣೆಯನ್ನು ಪ್ರಪಂಚದ ಹಲವೆಡೆ ಪ್ರತಿ ವರ್ಷ ಮೇ ತಿಂಗಳ ಎರಡನೆಯ ಭಾನುವಾರದಂದು ಆಚರಿಸಲಾಗುತ್ತದೆ. ಅಮೆರಿಕದ ಶಾಂತಿ ಕಾರ್ಯಕರ್ತೆ ಆಗಿದ್ದ ಅನಾ ಜಾರ್ವಿಸ್ ತನ್ನ ತಾಯಿಯ ಮೇಲಿದ್ದ ಅಪಾರ ಪ್ರೀತಿಯನ್ನು ವ್ಯಕ್ತಪಡಿಸಲು 1905ರಲ್ಲಿ ತಾಯಂದಿರ ದಿನವಾಗಿ ಆಚರಿಸಲು ಪ್ರಾರಂಭಿಸಿದಳು. ತಾಯಂದಿರ ದಿನವು ಪ್ರಪಂಚದಾದ್ಯಂತ ವಿವಿಧ ರೂಪಗಳಲ್ಲಿ ಆಚರಿಸಲಾಗುವ ಮತ್ತು ತಾಯ್ತನವನ್ನು ಗೌರವಿಸುವ ದಿನವಾಗಿದೆ. 1914 ರಲ್ಲಿ ಅಧಿಕೃತವಾಗಿ ಯು.ಎಸ್.ನಲ್ಲಿ ಆ ದಿನವನ್ನು ರಜಾದಿನವಾಗಿ ಘೋಷಿಸಲಾಯಿತು. ಆದರೆ ಜಾರ್ವಿಸ್ ಇದನ್ನು ರಜಾದಿನವಾಗಿ ಆಚರಿಸುವುದನ್ನು ಖಂಡಿಸುತ್ತಿದ್ದಳು ಮತ್ತು ತನ್ನ ಜೀವನದ ಕೊನೆಯ ಭಾಗವನ್ನು ಕ್ಯಾಲೆಂಡರ್‌ನಿಂದ ತೆಗೆದುಹಾಕಲು ಪ್ರಯತ್ನಿಸುತ್ತಿದ್ದಳು. ತಾಯಂದಿರು ಮತ್ತು ತಾಯ್ತನದ ಆಚರಣೆಗಳನ್ನು ಪ್ರಾಚೀನ ಗ್ರೀಕರು ಮತ್ತು ರೋಮನ್ನರು ಮಾತೃ ದೇವತೆಗಳಾದ ರಿಯಾ ಮತ್ತು ಸೈಬೆಲೆ ಅವರ ಗೌರವಾರ್ಥ ಹಬ್ಬಗಳನ್ನಾಗಿ ಆಚರಿಸುತ್ತಿದ್ದರು. ತಾಯಾಂದಿರ ದಿನವನ್ನು ಯುನೈಟೆಡ್ ಕಿಂಗ್ಡಮ್ ಮತ್ತು ಯುರೋಪಿನ ಕೆಲವು ಭಾಗಗಳಲ್ಲಿ ಒಂದು ಸಂಪ್ರದಾಯವಾಗಿ ಮತ್ತು ವಿಶ್ವದಾದ್ಯಂತ ಗೌರವಾರ್ಥಜ ದಿನವಾಗಿ ಆಚರಿಸಲಾಗುತ್ತಿದೆ.

ಸಂಗ್ರಹ : ಡಾ. ವಿ. ಪ್ರಶಾಂತ

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

– ಇಂದಿರಾ ಕೃಷ್ಣಪ್ಪ

ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಯ ಬೆಳಕಿನಲ್ಲಿ ಮಹಿಳಾ ಚಳುವಳಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಾನವಶಾಸ್ತ್ರದ ವಿಚಾರ ಸಂಕಿರಣದಲ್ಲಿ ಅಂಬೇಡ್ಕರ್ ಅವರು **"Castes in India, their mechanism genisis and development"** ಎಂಬ ಶೀರ್ಷಿಕೆಯಡಿಯಲ್ಲಿ ಮಂಡಿಸಿದ ಲೇಖನದಲ್ಲಿ ವಿವಾಹ ಪದ್ಧತಿಗಳನ್ನು ಕುರಿತು ವಿಶ್ಲೇಷಿಸುತ್ತಾರೆ. ಈ ಲೇಖನದಲ್ಲಿ "ಸ್ವಜಾತೀಯ ವೈವಾಹಿಕತೆ ಮೂಲಕ ಮಹಿಳಾ ಲೈಂಗಿಕತೆಯನ್ನು ಜಾತಿವ್ಯವಸ್ಥೆಗೆ ಹಸ್ತಾಂತರ ಮಾಡಲಾಗಿದೆ" ಎಂಬುದನ್ನು ಪ್ರತಿಪಾದಿಸಿದರು. ಇದು ಮುಂದೆ "ಭಾರತದಲ್ಲಿ ಜಾತಿಗಳು" ಎಂದು ಪುಸ್ತಕ ರೂಪದಲ್ಲಿ ಹೊರಬಂದಿತ್ತು. ಇದರಿಂದ ಅಂಬೇಡ್ಕರ್ ಅವರು ಮಾನವ ಶಾಸ್ತ್ರದ ಮೂಲಕ ಮಹಿಳೆಯರ ವೈವಾಹಿಕ ಸಮಸ್ಯೆಗಳ ಮೂಲವನ್ನು ಶೋಧಿಸುವ ಅಧ್ಯಯನ ಪ್ರಕಾರವೊಂದನ್ನು ರೂಪಿಸಿಕೊಟ್ಟದ್ದನ್ನು ಗಮನಿಸಬಹುದಾಗಿದೆ. ಇದರೊಂದಿಗೆ ಅವರು "ಹಿಂದೂ ಮಹಿಳೆಯರ ಏಳು ಬೀಳು" ಎಂಬ ಕೃತಿಯಲ್ಲಿ ಮಹಿಳೆಯರ ಪರಾಧೀನತೆಗೆ ಪುರೋಹಿತ ಶಾಹಿಯೇ ಮೂಲ ಕಾರಣ ಎಂದರು. ಅವರು ಬರೆದ ಲೇಖನಗಳಲ್ಲಿ

"ಪಿತೃತ್ವದಿಂದ ಮಾತೃತ್ವಕ್ಕೆ ಬದಲಾವಣೆ ಇದರಿಂದ ಬ್ರಾಹ್ಮಣರು ಗಳಿಸಲು ಬಯಸಿದ್ದೇನು".

ಬ್ರಾಹ್ಮಣ ದೇವರುಗಳನ್ನು ಪದಚ್ಯುತಗೊಳಿಸಿ, ದೇವಿಯರನ್ನೇಕೆ ಮೇಲೇರಿಸಿದರು?

"ಅಹಿಂಸೆಯ ದೇವರಿಗೆ ರಕ್ತ ಪಿಪಾಸು ದೇವತೆಯನ್ನು ಮದುವೆ ಮಾಡಿದ ಕತೆ,"

ಸ್ತ್ರೀ ಮತ್ತು ಪ್ರತಿಕ್ರಾಂತಿ'– ಪ್ರಮುಖವಾದುವುಗಳಾಗಿವೆ. ಇವುಗಳಲ್ಲಿ ಮನುಸ್ಮೃತಿಯನ್ನು ಕಟುವಾಗಿ ಖಂಡಿಸುತ್ತಾ, ಮನು ದಲಿತರನ್ನು ಮಾತ್ರವಲ್ಲ, ಭಾರತೀಯ ಮಹಿಳಾ ಸಮುದಾಯವನ್ನೇ, ದಾಸ್ಯ ಜೀವನಕ್ಕೆ ಗುರಿಮಾಡಿದ್ದಾನೆ. ಜಾತಿಶ್ರೇಣೀಕರಣವನ್ನು ಸಮಾಜದಲ್ಲಿ ಜಾರಿಗೊಳಿಸುವ ವಿಧಿವಿಧಾನಗಳನ್ನು ಪ್ರತಿಪಾದಿಸುವ ಮನು ಮಹಿಳೆಯರ ಘನತೆ, ಸ್ಥಾನಮಾನ, ಸವಲತ್ತುಗಳನ್ನು ನಿರಾಕರಿಸುತ್ತಾ, ಘೋರ ಅನ್ಯಾಯ ಎಸಗಿದ ಪರಿಯನ್ನು ನೇರವಾಗಿ ಪ್ರಶ್ನಿಸಿದರು. ಮನುಸ್ಮೃತಿಯು ಮಹಿಳೆಯರನ್ನು ಶೂದ್ರಾತಿಶೂದ್ರರಿಗಿಂತ ಕಡೆಯಾಗಿ ಸ್ಥಾನಕೊಟ್ಟದ್ದನ್ನು ವಿವರಿಸುತ್ತಾ, ಮನು ಹಾಗೂ ಹಿಂದೂ ಧರ್ಮ, ಪಿತೃ ಪ್ರಧಾನ ವ್ಯವಸ್ಥೆಯ ಸೂತ್ರಧಾರಿಗಳೆಂಬುದು ಅವರ "ಸ್ತ್ರೀ ಮತ್ತು ಪ್ರತಿಕ್ರಾಂತಿ" ಕೃತಿಯಲ್ಲಿ ಆಧಾರ ಸಹಿತವಾಗಿ ವಿಶ್ಲೇಷಿಸಿದರು. ಈವ್ಸ್ ವೀಕ್ಲಿ ಪತ್ರಿಕೆಯ 1950ರ ಸಂಚಿಕೆಯಲ್ಲಿ "ಭಾರತೀಯ ಮಹಿಳೆಯ ಅವನತಿಗೆ ಬುದ್ಧಕಾರಣ" ಎಂಬ ಲೇಖನ ಪ್ರಕಟಗೊಂಡಿತ್ತು. ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ "ಹಿಂದೂ ಮಹಿಳೆಯರ ಏಳು ಬೀಳು" ಲೇಖನ ಬರೆದರು. ಅದರಲ್ಲಿ ಬುದ್ಧ ಮಹಿಳೆಯರ ಅಧ್ಯಾತ್ಮಿಕ ಹಕ್ಕಿಗೆ ಮಾನ್ಯತೆ ನೀಡಿದ್ದನ್ನು, ಮಹಿಳೆಯರು, ಬೌದ್ಧಧರ್ಮದಲ್ಲಿ ಪರಿವ್ರಾಜಕರಾಗಬಹುದು, ಇದು ಭಾರತೀಯ ಮಹಿಳೆಯರ ಪಾಲಿಗೆ ಕ್ರಾಂತಿಕಾರಿ ಪರಿವರ್ತನೆ ತರುವ ಮಾರ್ಗವಾಗಿದೆ. ಮನು ಮಾಡಿದ್ದ ಜೀವ ವಿರೋಧಿ ಕೇಡನ್ನು ಬುದ್ಧ ಜೀವಪರವಾಗಿಸುವ ಮೂಲಕ ಮಾನವೀಯಗೊಳಿಸಿದ್ದಾನೆ. ಭಾರತದ ಮಹಿಳೆಯ ಅವನತಿಗೆ ಬುದ್ಧ ಕಾರಣನಲ್ಲ, ಮನು ಕಾರಣನಾಗಿದ್ದಾನೆ ಎಂದು ಪ್ರತಿಪಾದಿಸಿದರು.



ರೋಹಿದಾಸ ಶಿಕ್ಷಣ ಸಂಸ್ಥೆ, ರಾಜಕೋಟ್‌ನಲ್ಲಿ 1939ರಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡುತ್ತಾ, "ಪ್ರತಿಯೊಂದು ಸಮುದಾಯವೂ ಧರ್ಮಾಂತರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಕಾಲ ಒದಗಿ ಬಂದಿದೆ. ಜಾತಿ ನಿರ್ಮೂಲನೆಗೆ ಅಂತರ್‌ಜಾತೀಯ ವಿವಾಹ ಪರಿಣಾಮಕಾರಿಯಾದ ಮಾರ್ಗ ಎಂದು ನಾನು ಹಿಂದೂಗಳ ಮುಂದೆ ಮಂಡಿಸಿದ್ದೇನೆ. ಅಂತರ್‌ಜಾತೀಯ ವಿವಾಹ, ಸವರ್ಣೀಯರಿಗೆ ಕಠಿಣವಾಗುವ ಸವಾಲಾಗುವ ಹಾಗೆಯೇ, ಉಪಜಾತಿಗಳ ನಡುವಿನ ವಿಮಾಹವನ್ನು ಮಂತ್ರದಂಡ ಹಿಡಿದುಕೊಂಡು ಮಾಡಲು ಬರುವುದಿಲ್ಲ. ಅದಕ್ಕೆ ಮನಸ್ಸುಗಳು ಬೆರೆಯಬೇಕು" ಎಂದು ಜಾತಿಗೋಡೆಗಳನ್ನು ಒಡೆದು ಹೊರಬರಲು ಕರೆಯಿತ್ತರು. ಜಾತಿ ವ್ಯವಸ್ಥೆಯನ್ನು ನೈಸರ್ಗಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ವಿಶ್ಲೇಷಿಸಿದ ಅಂಬೇಡ್ಕರ್ ಅವರು "ಜಾತಿ ದೈವ ನಿಮಾಯಕವೆಂಬ ಹುಸಿ ತಳಹದಿಯ ಮೇಲೆ ಕಟ್ಟಲಾಗಿದೆ. ಈ ದೈವನಿಯಮ ಎಂಬುದನ್ನು ಮೊದಲು ಧ್ವಂಸಗೊಳಿಸಬೇಕಾಗಿದೆ. ಅಂತ್ಯದಲ್ಲಿ ವೈದಿಕ ಶಾಸ್ತ್ರಾದಿಗಳನ್ನು, ವೇದಗಳನ್ನು ಧ್ವಂಸಗೊಳಿಸಬೇಕಾಗಿದೆಯೆಂದು ಹೇಳುವಲ್ಲಿ, ಜಾತಿ ವ್ಯವಸ್ಥೆಯನ್ನು ತಳ ಮೂಲದಿಂದ ವೈಜ್ಞಾನಿಕವಾಗಿ ವಿಶ್ಲೇಷಿಸಿದ, ಅಸ್ಪೃಶ್ಯತೆ ಮತ್ತು ಲಿಂಗ ತಾರತಮ್ಯದ ಗುಲಾಮಗಿರಿಯ ಮೂಲೋಚ್ಚಾಟನೆಯೇ ವಿದೇಶಿ ಗುಲಾಮಗಿರಿಯ ಹೋರಾಟವೇ ನಿಜವಾದ ಸ್ವಾತಂತ್ರ್ಯ ಹೋರಾಟ ಎಂಬ ತಾತ್ವಿಕತೆಯನ್ನು ನಿರೂಪಿಸಿದ ಸಮಾಜ ವಿಜ್ಞಾನಿಯಾಗಿದ್ದಾರೆ. ಯಾವುದೇ ಸಮುದಾಯದ ಏಳ್ಗೆಯನ್ನು ಸ್ತ್ರೀಯರ ಏಳ್ಗೆಯಿಂದ ಪರಿಗಣಿಸಬೇಕು" ಎಂದು ಅಂಬೇಡ್ಕರ್ ಅವರು ಮಹಿಳಾ ಸಮುದಾಯದ ಘನತೆಯನ್ನು, ಸಮುದಾಯದ ಘನತೆಯ ಮಾನದಂಡವಾಗಿ ಪ್ರತಿಪಾದಿಸಿದರು. ಅವರು ಹೊರಡಿಸಿದ ಬಹಿಷ್ಕೃತ ಭಾರತ, ಮೂಕನಾಯಕ ಪತ್ರಿಕೆಗಳಲ್ಲಿ ಮಹಿಳಾಪರ ಚಿಂತನೆಗಳು ಪ್ರಕಟವಾಗುತ್ತಿದ್ದವು. ಅವರೇ ಸ್ಥಾಪಿಸಿದ ಬಹಿಷ್ಕೃತ ಹಿತಕಾರಿಣಿ ಸಭಾದ ವೇದಿಕೆಯಲ್ಲಿ ಸ್ತ್ರೀ ಸ್ವಾತಂತ್ರ್ಯದ ವಿಚಾರಗೋಷ್ಠಿಗಳನ್ನು ಪ್ರಬಲ ವಿರೋಧಗಳ ನಡುವೆಯೂ ನಡೆಸುತ್ತಿದ್ದರು.

ಮುಂದುವರಿಯುವುದು...

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸಮಾಜವಾದ : ಗಾಂಧೀ ದೃಷ್ಟಿಕೋನ

ಇದರಲ್ಲಿ ಒಂದು ಸಣ್ಣ ಗುಂಪು ಅಥವಾ ಸಮುದಾಯದ ಜನ ತಮಗೆ ಅಗತ್ಯವಾದ ಆಹಾರ, ಬಟ್ಟೆ ಮತ್ತು ತಮ್ಮ ಬದುಕುವ ಮಾರ್ಗವನ್ನು ಅವರೇ ಸೃಷ್ಟಿಸಿಕೊಳ್ಳುವ ಸಮೂಹ ವಾಸಕ್ಕೆ ಹೋಲಿಸಬಹುದು. ಆಶ್ರಮ ವಾಸದ ಪಥದಲ್ಲಿ ಸಮಾನತೆ ಮತ್ತು ಸಹಕಾರಗಳ ಮೌಲ್ಯಗಳನ್ನೂ ಹಾಗೂ ಧರ್ಮದರ್ಶಿತ್ವವನ್ನು ಗಾಂಧಿ ಅವರು, ಆಶ್ರಮದ ಪರಿಕಲ್ಪನೆಯಲ್ಲಿ, ಸ್ವಾವಲಂಬನೆಯ ಜೀವನಕ್ರಮ ಮತ್ತು ವೈಯಕ್ತಿಕ ಅಧ್ಯಾತ್ಮಿಕ ಅಭ್ಯುದಯವನ್ನು ರೂಢಿಸಿಕೊಂಡರು. ಗಾಂಧೀಜಿ ಅವರ ಜೀವನ ಚಕ್ರದ ಮೂಲ ಆಧಾರವೆಂದರೆ ಸತ್ಯ ಮತ್ತು ಅಹಿಂಸೆ. ಭಾರತದ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರಿಗೆ ವಿಭಿನ್ನವಾಗಿ ಗಾಂಧೀಜಿ ಅವರು ವರ್ಗ ಸಂಘರ್ಷ ಮತ್ತು ವರ್ಗಾಧಾರಿತ ಕ್ರಾಂತಿಯನ್ನು ನಿರಾಕರಿಸಿದರು. ಅವರಿಗೆ ಪ್ರಾಪಂಚಿಕ ಅಭಿವೃದ್ಧಿಗಿಂತ ಮಾನವರ ಘನತೆಯ ಸಂರಕ್ಷಣೆಯೇ ಅತ್ಯಂತ ಪ್ರಮುಖವಾದುದಾಗಿತ್ತು. ಗಾಂಧೀಜಿ ಅವರು ಅಹಿಂಸಾತ್ಮಕ ಮಾನವೀಯ ಸಮಾಜವಾದದಲ್ಲಿ ವಿಶ್ವಾಸ ಇಟ್ಟುಕಂಡಿದ್ದರು. 'ಯಾರೊಬ್ಬರ ಸಮ್ಮತವಿಲ್ಲದೆ ಏನನ್ನೂ ಮಾಡಲಾಗದು' ಎಂಬುದಾಗಿ ಅವರು ಅಪಾರವಾಗಿ ನಂಬಿದ್ದರು.

ಗಾಂಧೀಜಿ ಅವರು ಪ್ರಜಾಪ್ರಭುತ್ವವನ್ನು ಜೀವನ ವಿಧಾನವನ್ನಾಗಿ ಒಪ್ಪಿಕೊಂಡಿದ್ದರು. ಅವರಿಗೆ ಹಣಕ್ಕಿಂತ ಮನುಷ್ಯರು ಪ್ರಮುಖರಾಗುತ್ತಾರೆ. ಅವರ ಆರ್ಥಿಕ ಆಲೋಚನೆ ಸರಳ ಜೀವನದ ಸುತ್ತಲೇ ಸುತ್ತುವಂಥಹದು. ಎಲ್ಲ ರೀತಿಯ ಗ್ರಾಹಕತ್ವವನ್ನು ಅವರು ನಿರಾಕರಿಸಿದರು. ಗಾಂಧೀಜಿ ಅವರು ಬದುಕಿನ ಗುಣಮಟ್ಟದಲ್ಲಿ ಏರಿಕೆಯಾಗಬೇಕೆಂದು ಪ್ರತಿಪಾದಿಸಲಿಲ್ಲ. ಆದರೆ ಯಾವಾಗಲೂ ಜೀವದ ಗುಣಮಟ್ಟ ಮೇಲ್ದರ್ಜೆಗೇರಬೇಕೆಂದು ಮಾತನಾಡುತ್ತಿದ್ದರು. ಯಾವಾಗ ಗಾಂಧೀಜಿ ಅವರು ಆರ್ಥಿಕ ಸಮಾನತೆಯ ಬಗ್ಗೆ ಮಾತನಾಡಿದರೋ ಆಗ ಇರುವೆಗೂ, ಆನೆಗೂ ಸಮ ಪ್ರಮಾಣದ ಆಹಾರವನ್ನು ಕೊಡಲು ಸಾಧ್ಯವೇ? ಎಂದು ಕೇಳುತ್ತಿದ್ದರು. ಜನಸಂಖ್ಯೆಯಲ್ಲಿನ, ಅತ್ಯಂತ ತಳವರ್ಗದವರ ಪ್ರಮುಖ ಅಗತ್ಯಗಳ ಬಗ್ಗೆ ಅವರು ಅತಿ ಹೆಚ್ಚು ಗಮನಕೊಟ್ಟರು.

"ತನ್ನಲ್ಲಿರುವ ಸಾಧನವನ್ನು ಬಳಸುವ ಸಾಮರ್ಥ್ಯವುಳ್ಳವನು ಸಂಪಾದಿಸುವ ಹಕ್ಕನ್ನು ಹೊಂದುವನು" ಎಂದು ಹೇಳುವ 'ಸರ್ವೋದಯದ' ಕಲ್ಪನೆಯನ್ನು ಅವರು ವಿಶ್ವಕ್ಕೆ ಕೊಟ್ಟರು. ಇನ್ನೊಂದಾರ್ಥದಲ್ಲಿ "ಪ್ರತಿಯೊಬ್ಬರಿಗೂ ಅವರ ಅಗತ್ಯಕ್ಕೆ ತಕ್ಕಂತೆ" ಅಹಿಂಸಾತ್ಮಕ ಗ್ರಾಮೀಣ ಆರ್ಥಿಕತೆಯ ಮೇಲೆ ಕೇಂದ್ರೀಕೃತವಾಗಿತ್ತು ಎಂಬುದಾಗಿದೆ. ಅವರು ಪ್ರತಿಪಾದಿಸಿದ ನಾಲ್ಕು ಅಂಶಗಳೆಂದರೆ;

ಧರ್ಮದರ್ಶಿತ್ವ
ಆರ್ಥಿಕ ಚಟುವಟಿಕೆಯ ವಿಕೇಂದ್ರೀಕರಣ
ಕಾರ್ಮಿಕಾಧಿಕ್ಯದ ತಾಂತ್ರಿಕತೆ
ದುರ್ಬಲ ವರ್ಗದವರಿಗೆ ಪ್ರಾಧಾನ್ಯತೆ

ಉತ್ಪಾದನೆಯು ಸಾಮಾಜಿಕ ಅಗತ್ಯತೆಯನ್ನು ಅನುಸರಿಸಿ ಕೈಗೊಳ್ಳಬೇಕೆ ಹೊರತು ವೈಯಕ್ತಿಕ ದುರಾಸೆಯನ್ನು ಆಧರಿಸಿ ಅಲ್ಲ, ಎಂಬುದು ಗಾಂಧೀಜಿ ಅವರ ಅಭಿಪ್ರಾಯವಾಗಿತ್ತು.

ವರ್ಗ ಸಂಘರ್ಷದ ಹಾದಿ ಮತ್ತು ಪರಸ್ಪರ ದ್ವೇಷ, ಆತ್ಮಹತ್ಯಾ ಘಾತುಕವೆಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದರು. ಶೋಷಣಾ ರಹಿತ ಸಮಾಜವಾದದ ಬಗ್ಗೆ ಅವರು ಮಾತನಾಡಿದ್ದರು. ಅವರ ಪ್ರಕಾರ ಎಲ್ಲರೂ ಸಮಾನವಾಗಿ ಜನಿಸುವರು. ಸಮಾನ ಅವಕಾಶದ ಹಕ್ಕು, ಪ್ರತಿಯೊಬ್ಬರಿಗೂ ಇದೆ. ಪ್ರತಿಯೊಬ್ಬರು ಸಮಾನವಾದ ಸಾಮರ್ಥ್ಯವನ್ನು ಹೊಂದಿರುವುದಿಲ್ಲ, ಅಹಿಂಸೆ ಅಥವಾ ಹಿಂಸಾರಾಹಿತ್ಯವೇ ಸಮಾಜದ ಅತ್ಯಗತ್ಯವಾದ ಲಕ್ಷಣ. ಆರ್ಥಿಕ ಸಮಾನತೆಯ ಬಗ್ಗೆ ಮಾತನಾಡುವಾಗ ಪ್ರತಿಯೊಬ್ಬರೂ ಒಂದೇ ಸಮನಾದ ಹಣ ಹೊಂದಿರಬೇಕೆಂದಿಲ್ಲ ಎಂದು ಗಾಂಧೀಜಿ ಸ್ಪಷ್ಟಪಡಿಸಿದರು. 'ಸಮಾನ ಹಂಚಿಕೆ' ಮತ್ತು 'ನ್ಯಾಯಸಂಗತ ಹಂಚಿಕೆ'ಗಳಲ್ಲಿನ ವ್ಯತ್ಯಾಸದ ಬಗ್ಗೆ ಅವರು ಸ್ಪಷ್ಟೀಕರಿಸಿದರು. ಅವರ ಪ್ರಕಾರ ಸುಧಾರಣೆಗಳನ್ನು ಮಾಡುವಲ್ಲಿ ಆತುರ ಸಲ್ಲದು. 'ಉಳ್ಳವರು' ಮತ್ತು ಇಲ್ಲದವರು' ಇಬ್ಬರಿಗೂ ಶಿಕ್ಷಣ ಅಗತ್ಯವೆಂದು ಅವರು ಪ್ರತಿಪಾದಿಸಿದರು.

ರಾಷ್ಟ್ರೀಕರಣದ ಬಗ್ಗೆ ಗಾಂಧೀಜಿ ಅವರು ಸುಧೀರ್ಘವಾಗಿ ಮಾತನಾಡಿದ್ದರು. ಉತ್ಪಾದನೆ ಎಂದು ಅರ್ಥೈಸುವ ಎಲ್ಲವೂ ರಾಷ್ಟ್ರೀಕರಣ ಆಗಲೇಬೇಕೆಂದು ಅವರೆಂದೂ ಪ್ರತಿಪಾದಿಸಲಿಲ್ಲ. 'ಯೋಜಿತ ಉತ್ಪಾದನೆ' ಮತ್ತು 'ಖಾಸಗಿ ಉದ್ಯಮಶೀಲತೆ' ಎರಡನ್ನೂ ಅವರು ಬೆಂಬಲಿಸಿದರು ಕೇವಲ ಸರಕಾರದ ಉತ್ಪಾದನೆ ಮಾತ್ರ ಇರುವುದಾದರೆ, ಜನ ಬೌದ್ಧಿಕವಾಗಿಯೂ, ನೈತಿಕವಾಗಿಯೂ ದಿವಾಳಿಯಾಗುತ್ತಾರೆ ಎಂದರು. ಮುಂದುವರಿದು, ಬಂಡವಾಳಶಾಹಿಗಳು ಭೂಮಿಯನ್ನು ಉಳಿಸಿಕೊಳ್ಳುವಂತೆ ಬೆಂಬಲಿಸುತ್ತೇನೆ, ಆದರೆ ಅವರು ತಮ್ಮ ಆಸ್ತಿಗಳ ಧರ್ಮದರ್ಶಿಗಳಾಗುವಂತೆ ನಾನು ಮಾಡುತ್ತೇನೆ ಎಂದು ಅವರು ಹೇಳಿದರು.

ಗಾಂಧೀಜಿ ಅವರು ಬಡತನವನ್ನು ಮೆಚ್ಚಲಿಲ್ಲ ಪ್ರತಿಯೊಬ್ಬರೂ ತಮ್ಮ ಖರ್ಚುವೆಚ್ಚಗಳನ್ನು ಭರಿಸಲು ಶಕ್ಯವಾಗುವಂಥಹ ಸಾಕಷ್ಟು ಕೆಲಸವನ್ನು ಗಳಿಸಲು ಸಶಕ್ತರಾಗಿರಬೇಕೆಂದು ಅವರು ಪ್ರತಿಪಾದಿಸಿದರು. ಯಾವಾಗ ಅವರು ಯಂತ್ರಗಳು ಮತ್ತು ಬೃಹತ್ ಉದ್ದಿಮೆಗಳನ್ನು ವರ್ಜಿಸಬೇಕೆಂದು ಪ್ರತಿಪಾದಿಸಿರೋ, ಆಗ ಅವರಿಗೆ ಬೃಹತ್ ಉದ್ದಿಮೆಗಳು, ಸಾಮೂಹಿಕ ನಿರುದ್ಯೋಗಕ್ಕೆ ಕಾರಣವಾಗಬಾರದೆಂಬುದರ ಬಗ್ಗೆ ಸ್ಪಷ್ಟತೆ ಇದ್ದಿತ್ತು.

ಇಂದು ಬಂಡವಾಳಶಾಹಿಗಳು ಮತ್ತು ಕಮ್ಯುನಿಸ್ಟರು ಇಬ್ಬರೂ ಅಪೂರ್ಣರೆಂಬುದನ್ನು ಸಾಬೀತು ಮಾಡಿದ್ದಾರೆ. ಧರ್ಮದರ್ಶಿತ್ವದ ಮೂಲಕ ಸಮಾಜವನ್ನೂ ಬದಲಾವಣೆ ಮಾಡುವ ಗಾಂಧೀಜಿ ಅವರ ವಿಧಾನವೇ ಬಂಡವಾಳಶಾಹಿಗಳ ಅಸ್ತವ್ಯಸ್ತತೆ ಮತ್ತು ಕಮ್ಯುನಿಷ್ಟರುಗಳ ನಿಷ್ಠುರತೆಗಳ ನಡುವಿನ ಮಧ್ಯಮ ಮಾರ್ಗವಾಗಿದೆ.

ಮುಂದುವರಿಯುವುದು...

ನಾಡು ಕಟ್ಟಿದ ನಾಡಪ್ರಭು

ಇಂದಿರಾ ಕೃಷ್ಣಪ್ಪ

ಬೆಂಗಳೂರು ನಗರವನ್ನು ಇಂದು ಮಾಹಿತಿ ತಂತ್ರಜ್ಞಾನದ ಮಹಾನಗರ, ಕ್ಲೀನ್‌ಸಿಟಿ, ಗ್ರೀನ್‌ಸಿಟಿ, ಆರೋಗ್ಯ ನಗರ, ಪಿಂಚಣಿದಾರರ ಸ್ವರ್ಗ, ಜಗತ್ತಿನ ಶುದ್ಧ ಹವಾಮಾನದ ಸುಂದರ ನಗರವೆಂಬ ಘನತೆಗೆ ಬುನಾದಿ ಹಾಕಿದ ಕೀರ್ತಿ ನಾಡಪ್ರಭು ಹಿರಿಯ ಕೆಂಪೇಗೌಡ ಅವರಿಗೆ ಸಲ್ಲುತ್ತದೆ. ಸುಮಾರು 500 ವರ್ಷಗಳ ಹಿಂದೆ ಇಂಥಹ ದೂರದರ್ಶಿತ್ವವನ್ನು ನಾಡಪ್ರಭುಗಳು ಹೊಂದಿದ್ದರಿಂದಲೇ ಈ ದೇಶದ ಮಹಾನ್ ನಗರಗಳಾದ ಮುಂಬೈ, ಕಲ್ಕತ್ತಾ, ಚೆನ್ನೈಗಳಿಗಿಂತಲೂ ಪೂರ್ವದಲ್ಲಿಯೇ ಸುವ್ಯವಸ್ಥಿತ ಬೆಂಗಳೂರು ನಗರ ರೂಪುಗೊಂಡಿತ್ತು. ಮಾದರಿ ದೇಶ ಕಟ್ಟುವ ಪರಿಕಲ್ಪನೆಯಲ್ಲಿ ನಾಡಪ್ರಭುಗಳು, ಈ ದೇಶದ ರಾಜಮಹಾರಾಜರುಗಳ ಪಟ್ಟಿಯಲ್ಲಿ ಪ್ರಥಮರಾಗಿ ನಿಲ್ಲುತ್ತಾರೆ.


ಕೆಂಪೇಗೌಡರ ಆಳ್ವಿಕೆ ಆರಂಭವಾಗುವ ಪೂರ್ವದಲ್ಲಿಯೇ ತಲಕಾಡು ಗಂಗರು, ಚೋಳರು ಮತ್ತು ವಿಜಯನಗರದ ಅರಸರು ಈ ಪ್ರದೇಶವನ್ನು ಆಳಿದ್ದರು. ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜರಾಗಿ ಆಳುತ್ತಿದ್ದ ಈ ವಂಶಸ್ಥರು ಇಲ್ಲಿನ ಆಳ್ವಿಕೆಗೆ ಭದ್ರ ಬುನಾದಿ ಹಾಕಿದ್ದರಿಂದಲೇ ಬಾಲಕ ಕೇಂಪೇಗೌಡ ಹಂಪಿಯ ವಿಜಯದಶಮಿಯ ವಿಜೃಂಭಣೆಯ ಆಚರಣೆಯ ವೀಕ್ಷಣೆಯಿಂದಲೇ ಸುಂದರ ರಾಜ್ಯದ ಕನಸು ಹೃದಯಾಂತರಾಳದಲ್ಲಿ ಮೊಳೆಯುವಂತಾಯಿತು.

ರಾಜ್ಯ ಸೂತ್ರವನ್ನು ವಹಿಸಿಕೊಳ್ಳುವ ಮುನ್ನವೇ ದೇಶ ಸಂಚಾರ ಮಾಡಿ ಬಂದವರು. ಪಟ್ಟಕ್ಕೇರಿದ ನಂತರ ಬೆಂಗಳೂರನ್ನು ಯೋಜಿತ ನಗರವಾಗಿ ರೂಪಿಸಿ ರಾಜಧಾನಿಯನ್ನಾಗಿ ಮಾಡಿಕೊಳ್ಳುತ್ತಾರೆ. ಐವತ್ತೊಂಬತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿದ (1510–1569) ಕೆಂಪೇಗೌಡರು 200 ಚ.ಕಿ.ಮೀ. ವಿಸ್ತೀರ್ಣದ ಬೆಂಗಳೂರು ನಗರವನ್ನು ನಿರ್ಮಿಸಿದ್ದು, ಪ್ರಸ್ತುತ ನಾವೆಲ್ಲ ಹೆಮ್ಮೆ ಪಡುವಂತಾಗಿದೆ. ವಿಜಯನಗರದ ಅರಸ ಅಚ್ಯುತರಾಯ, ಕೆಂಪೇಗೌಡರ ಮಹದಾಶಯಗಳಿಗೆ ನೀರೆರೆದು ಪೋಷಿಸಿದರು. ಕೆಂಪೇಗೌಡರು ರಾಜ್ಯಭಾರ ವಹಿಸಿಕೊಂಡ ತಕ್ಷಣ, 12 ಹೋಬಳಿಗಳನ್ನು ವಹಿಸಿಕೊಡುವುದರ ಜೊತೆಗೆ ಐವತ್ತು ಸಾವಿರ ವರಹಗಳನ್ನು ಕೊಟ್ಟಿದ್ದರು. ರಾಜ್ಯದ ರಾಜಧಾನಿ ಹೇಗಿರಬೇಕೆಂಬ ಬಗ್ಗೆ ಇಂದಿಗೂ ಮಾದರಿ ಆಗಿರುವ ಕೆಂಪೇಗೌಡರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ರೂಡಿಸಿದವರಾಗಿದ್ದಾರೆ. ನಿಷ್ಠಾವಂತ ಸಾಮಂತ ರಾಜನಾಗಿಯೂ, ತನ್ನಾಡಳಿತ ಪ್ರದೇಶದ ಜನರ ಆಶಯಗಳಿಗೆ ಸಕಲ ಸೌಕರ್ಯಗಳನ್ನು ಒದಗಿಸುವವನಾಗಿಯೂ ಸುವ್ಯವಸ್ಥಿತ ರಾಜ್ಯ ನಿರ್ಮಿಸಿದ ಕೀರ್ತಿ ಇವರಿಗೇ ಸಲ್ಲುತ್ತದೆ. ಇವರ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಿಂತನೆಗಳು ಇಂದಿನ ಪ್ರಜಾಪ್ರತಿನಿಧಿಗಳಿಗೆ ಪಾಠದಂತಿದೆ.



ಸಾಮಂತರಾಜನ ಧೀಮಂತತನದ ಪ್ರತೀಕವಾಗಿ, ಬೆಂಗಳೂರೆಂಬ ಮಹಾನಗರವೇ ಮಹಾನ್ ಸಾಕ್ಷಿಯಾಗಿ ನಿಂತಿದೆ. ಅವರ 59 ವರ್ಷಗಳ ಆಳ್ವಿಕೆಯ ಪ್ರಮುಖ ಘಟ್ಟವೇ ಬೆಂಗಳೂರು ನಗರ ನಿರ್ಮಾಣವಾಗಿದೆ. ಮೊದಲ 25 ವರ್ಷಗಳಲ್ಲಿ ರಾಜ್ಯ ವಿಸ್ತರಣೆ, ರಾಜ್ಯ ಸುಭದ್ರತೆ, ರಾಜ್ಯ ರಕ್ಷಣಾ ವ್ಯವಸ್ಥೆಯನ್ನು ಮಾಡಿದರು. ಅದರಿಂದಲೇ ಈಗಲೂ ರಾಜ್ಯದ ಪ್ರಮುಖ ಐತಿಹಾಸಿಕ ಸ್ಥಳಗಳಾಗಿರುವ ಬೆಂಗಳೂರಿನ 4 ಕಡೆಯ ಸರಹದ್ದು ಗೋಪುರಗಳ ನಿರ್ಮಾಣಗಳು ಮೇಕ್ರಿ ವೃತ್ತದ ಬಳಿ, ಹನುಮಂತನಗರದ ಕೆಂಪಾಂಬುದಿ ಕೆರೆ, ಲಾಲ್‌ಬಾಗ್ ಉದ್ಯಾನದೊಳಗಿನ ಬಂಡೆಯ ಮೇಲೆ ಹಾಗೂ ಹಲಸೂರು ಕೆರೆಯ ಬಳಿ ಇರುವುದು ಮತ್ತು ಬೆಂಗಳೂರು, ರಾಮನಗರ, ಮಾಗಡಿ, ಹುಲಿಯೂರುದುರ್ಗ, ಶಿವಗಂಗೆ, ರಾಮದುರ್ಗಗಳಲ್ಲಿ ಕೋಟೆಗಳು, ಮದ್ದುಗುಂಡು ತಯಾರಿಕಾ ಕೋಠಿಗಳು ಇತ್ಯಾದಿಗಳು ಅವರ ದೂರದರ್ಶಿತ್ವ ಹಾಗೂ ರಾಜ್ಯ ಸಂರಕ್ಷಣೆಯ ಬುದ್ಧಿಮತ್ತೆಗೆ ನಿದರ್ಶನವಾಗಿದೆ.

ಮುಂದುವರಿಯುವುದು...



ಮಾಗಡಿ ಕೋಟೆ



ಸಾವನದುರ್ಗದ ಬಳಿಯಿರುವ ವೀಕ್ಷಣಾ ಗೋಪುರ

ಓ ಅಜ್ಞಾತ ಗುರುವೇ

ಗುರುವಿಲ್ಲದೆಡೆ ಜೀವನಕೆ ಬೆಳಕೆಲ್ಲಿ?
ಬಾಳಿನಲಿ ನೆಲೆ ಎಲ್ಲಿ ?
ತಾನು ಹಚ್ಚಿದ ದೀವಿಗೆಯ ಸೊಡರ ಕಂಡು
ಹಿರಿ ಹಿಗ್ಗುವುದೇ ಹೆಮ್ಮೆ ಅವಗೆ

ಮಾನವರ ಶಿಲ್ಪಿ ಅವನಿಹನು
ಅವನಿಗೆಲ್ಲಿಹುದು ಶಿಲಾಫಲಕ?
ಅವನ ಜಸ ಬಿತ್ತರಿಸಿ ಬಿರುದು ಬಾವಲಿ ಎಲ್ಲಿ?
ಅವನ ನಿಷ್ಕಾಮ ಕರ್ಮಕೆ ಬೆಲೆಯದೆಲ್ಲಿ?

ಶಿಶುಗಳಾ ಶಿಕ್ಷಣವೆ ಅವನ ಉಸಿರು
ದುಡಿದು ಬಡವಾದರೂ ಅವನಿಗೆಲ್ಲಿಹುದು
ಪೋಷಕರ ಮೆಚ್ಚಿಗೆಯ ಹಸಿರು?

ಹೊಗಳಿಕೆಯ ಕಂಡರಿಯ ಮೃದು ನುಡಿಯ ಕೇಳರಿಯ
ತಾಳ್ಮೆಗೆ ಅವ ತವರು ಮನವು ಸದಾ ನವುರು

ಅಜ್ಞಾತ ಶಿಕ್ಷಕನೆ ಬೆದರದಿರು
ಬೆಚ್ಚದಿರು ನೊಂದು ಬೇಸರಿಸದಿರು
ಜನರ ಮೆಚ್ಚುಗೆ ಬಯಸಿ ಬರಡಾಗದಿರು

ನೀನಿಲ್ಲದಿರೆ ಶಿಕ್ಷಣಕೆ ಉಸಿರಿಲ್ಲ
ನೀನಿಲ್ಲದಿರೆ ಶಾಲೆಯಲಿ ರಸವಿಲ್ಲ
ನೀನಿಲ್ಲದಿರೆ ಶಾಲೆಯದು ಘೋರಾಂಧಕಾರ ತೋರುತಿರು
ಮಕ್ಕಳಲಿ ಮಮತೆಯನು
ಮರೆಯದಿರು ಕಾಯಕವ ಓ ಅಜ್ಞಾತ ಗುರುವೆ

– ಎಂ.ಎಸ್. ರಾಜಮ್ಮ

ಮಹಾತ್ಮ

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ ಹೂ ಬಾಡಿತು
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಉತ್ತಮರ ಬಲಿ ಇಲ್ಲಿ ಬಾನಾಡಿತು

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು. ಒಲವು ತುಂಬಿದ ಎದೆಯು
ಛಲವನರಿಯದ ಬದುಕು ಇಷ್ಟೆ ಸಾಕು

ಅಂತೆ ತವಕದಿ ಬಂದೆ ಮನದ ಮಮತೆಯತಂದೆ
ಹಗೆಯ ಕಾಳೋರಗವ ತವಿಪೆನೆಂದೆ
ಇತ್ತ ಹಾಲಾಹಲವು ಅತ್ತ ಕೋಲಾಹಲವು
ಅಮೃತಹಾಸವ ಬೀರಿ ನಡೆದೆ ಮುಂದೆ

ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು.
ಶಾಂತಿ–ಸಮರಸಕೆ ಇದು ಮೊದಲೆನಿಸಿತು.
ಕಲ್ಲೆದೆಯ ಸೀಮೆಯಲು ಹೂ–ಕೊಸರು.
ಆಹಾ ಇದು ಬರುವ ಭಾಗ್ಯದ ಯುಗದ ತೊದಲೆನಿಸಿತು.

ನರನ ಕಾಡಿನ ನಡತೆ ಇನ್ನೂ ಮುಗಿದಿರಲಿಲ್ಲ
ನಿನ್ನ ಬೇಟೆಗೆ ತಾಯಿ–ಮಣ್ ನಡುಗಿತು
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಇಂಥ ಬಲೆ ಇನ್ನೇಸೋ! ಬಾನ್ ಗುಡುಗಿತು.

– ಗಂಗಾಧರ ಚಿತ್ತಾಲ

ಸಾವಿರಾರು ನದಿಗಳು

ಡಾ. ಸಿದ್ದಲಿಂಗಯ್ಯ

ನೆನ್ನೆ ದಿನ ನನ್ನ ಜನ
ಬೆಟ್ಟದಂತೆ ಬಂದರು.

ಕಪ್ಪು ಮುಖ ಬೆಳ್ಳಿಗಡ್ಡ
ಉರಿಯುತಿರುವ ಕಣ್ಣುಗಳು

ಹಗಲುರಾತ್ರಿಗಳನ್ನು ಸೀಳಿ
ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು
ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು
ಅವರು ಕುಣಿದ ಹುಚ್ಚಿಗೆ

ಇರುವೆಯಂತೆ ಹರಿವ ಸಾಲು
ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ

ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರಗಳು
ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿಮೆಳೆಯ ಮರೆಗಳಲ್ಲಿ

ಯಜಮಾನರ ಹಟ್ಟಿಯಲ್ಲಿ
ಧಣಿ ಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ
ನೀರಿನಂತೆ ನಿಂತರು.

ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು.
ಕ್ರಾಂತಿಯ ಬಿರುಗಾಳಿಯಲ್ಲಿ
ಕೈಬೀಸಿದ ನನ್ನ
ಛಡಿಯ ಏಟು ಹೊಡೆದವರ।
ಕುತ್ತಿಗೆಗಳ ಹಿಡಿದರು

ಪೋಲಿಸರ ದೊಣ್ಣೆಗಳು
ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ
ಬಂದೂಕದ ಗುಡಾಣ
ತರಗೆಲೆಕಸಕಡ್ಡಿಯಾಗಿ
ತೇಲಿತೇಲಿ ಹರಿದವು

ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು.

ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ನುಡಿಗಳು

– ಡಾ. ವೂಡೇ ಪಿ. ಕೃಷ್ಣ

ಕರ್ನಾಟಕದ ಗಡಿಭಾಗವಾದ ರಾಯದುರ್ಗದಲ್ಲಿ ಆಯೋಜಿಸಿದ್ದ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ **ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ** ಅವರ ಅಧ್ಯಕ್ಷೀಯ ಭಾಷಣದ ಆಯ್ದ ಭಾಗಗಳು. ಕನ್ನಡ ಸಾಹಿತ್ಯ ಪರಿಷತ್ತು ಆರಯೋಜಿಸಿದ 4ನೇ ಕನ್ನಡ ಸಾಹಿತ್ಯ ಸಮ್ಮೇಳನವು ಫೆಬ್ರವರಿ 2014ರಲ್ಲಿ ನಡೆದಿತ್ತು.

ಎಲ್ಲರಿಗೂ ನಮಸ್ಕಾರಗಳು

ಒಂದು ಕಾಲದಲ್ಲಿ ಅಚ್ಚ ಕನ್ನಡದ ಭಾಗವಾಗಿ, ಈಗ ಆಂಧ್ರದ ಭಾಗವಾಗಿರುವ ಕನ್ನಡ ಸಹೃದಯ ಬಂಧುಗಳೇ, ಕರ್ನಾಟಕದ ಗಡಿಭಾಗವಾದ ರಾಯದುರ್ಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಸಲುವಾಗಿ ಇಲ್ಲಿ ಸೇರಿರುವ ಎಲ್ಲ ಕನ್ನಡಾಭಿಮಾನಿಗಳೇ, ಈ ಕನ್ನಡ ಉತ್ಸವದ ತೇರಿಗೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿರುವ ನಿಮ್ಮೆಲ್ಲರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮಡಕಶಿರಾದಲ್ಲಿ ನಡೆದ ಮೊದಲನೇ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಕುಂ. ವೀರಭದ್ರಪ್ಪನವರು ಆಂಧ್ರ–ಬಳ್ಳಾರಿ ಗಡಿಭಾಗದಲ್ಲಿ ಕನ್ನಡ ಅಧ್ಯಾಪಕರಾಗಿದ್ದುಕೊಂಡು, ಈ ಭಾಗದ ತುಳಿತಕ್ಕೊಳಗಾದವರ ದನಿಯನ್ನು ಪಾತ್ರಗಳನ್ನಾಗಿಸಿ ಕಥೆ, ಕಾದಂಬರಿಗಳ ಮೂಲಕ, ಕನ್ನಡ ಸಾಹಿತ್ಯಕ್ಕೆ ಹೊಸ ನುಡಿಗಟ್ಟು ಕಟ್ಟಿಕೊಟ್ಟವರು. ಅಮರಾಪುರದಲ್ಲಿ ನಡೆದ ಎರಡನೇ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಎಚ್.ಕೆ. ಅನಂತರಾವ್ ಅವರು ತೆಲುಗು ನೆಲದಲ್ಲಿದ್ದುಕೊಂಡು ಕನ್ನಡ ಸಾಹಿತ್ಯ ಕೃಷಿಗೈದ ಹೆಸರಾಂತ ಕಾದಂಬರಿಕಾರರೂ, ಹಿರಿಯ ಲೇಖಕರು, ಚಲನಚಿತ್ರ ಕಥೆಗಾರರೂ ಆಗಿದ್ದಾರೆ. ಹಾಗೆಯೇ ವಲಸೆ ಗ್ರಾಮದಲ್ಲಿ ನಡೆದ ಮೂರನೇ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು ಜೀ.ಶಂ.ಪ. ಜಾನಪದ ತಜ್ಞ ಪ್ರಶಸ್ತಿ ಪುರಸ್ಕೃತರಾಗುವುದರೊಂದಿಗೆ ಜಾನಪದ ಸಾಹಿತ್ಯಕ್ಕೆ ತಮ್ಮ ವಿಶಿಷ್ಟ ಸಂಶೋಧನೆಯ ಮೂಲಕ ಮಹತ್ವದ ಕೊಡುಗೆ ನೀಡಿದ್ದಾರೆ. ಇಂತಹ ದಿಗ್ಗಜರು ಪಡೆದ ಸಮ್ಮೇಳನಾಧ್ಯಕ್ಷರ ಸಾಲಿನಲ್ಲಿ ನನ್ನನ್ನು ನಿಲ್ಲಿಸಿರುವುದು ನನಗೆ ಸಂಭ್ರಮವನ್ನು ಉಂಟುಮಾಡುತ್ತಿದೆ.

ಕನ್ನಡ ಸಾಹಿತ್ಯ ಪರಿಷತ್ತು ಆಂಧ್ರ ಗಡಿನಾಡ ಘಟಕದ ಅಧ್ಯಕ್ಷರಾದ ಪ್ರೊ. ವಿ. ಅಗ್ರಹಾರಂ ಎಚ್.ಬಿ. ಶಿವಕುಮಾರ್, ಉತ್ಸಾಹಿ ಯುವಕರೂ, ಚತುರ ಸಂಘಟನಾಕಾರರೂ, ಕನ್ನಡ ನಾಡುನುಡಿಯ ಬಗ್ಗೆ ಅಪಾರ ಪ್ರೀತಿ, ಗೌರವಗಳನ್ನಿಟ್ಟುಕೊಂಡವರೂ ಜೊತೆಗೆ ಕನ್ನಡ ಪ್ರಾಧ್ಯಾಪಕರೂ ಆಗಿರುವ ಇವರ ನೇತೃತ್ವದಲ್ಲಿ ಕ.ಸಾ.ಪ. ಆಂಧ್ರ ಗಡಿನಾಡು ಘಟಕ ಕ್ರಿಯಾಶೀಲವಾಗಿದ್ದು ಗಡಿಭಾಗದ ಕನ್ನಡಿಗರ ಆಶೋತ್ತರಗಳಿಗೆ ಗಟ್ಟಿದನಿಯಾಗುವ, ಹಾಗೂ ಪ್ರಭುತ್ವದ ಗಮನ ಸೆಳೆಯುವ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿರುವುದು ಸ್ತುತ್ಯರ್ಹವಾಗಿದೆ. ಬಂಧುಗಳೇ, ನಾನೂ ಗಡಿಭಾಗದವನು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ನನ್ನ ಕುಟುಂಬದ ಮೂಲಬೇರುಗಳಿರುವುದೇ ಆಂಧ್ರ ಗಡಿಭಾಗದ ವೂಡೇ ಗ್ರಾಮದಲ್ಲಿ, ನಮ್ಮ ಪೂರ್ವಿಕರು ಹಿಂದೊಮ್ಮೆ ವೂಡೇ ಗ್ರಾಮದಲ್ಲಿ ನೆಲೆಸಿದ್ದು, ನಂತರದ ದಿನಗಳಲ್ಲಿ ಬದುಕನ್ನು ಅರಸುತ್ತಾ ಪಟ್ಟಣದ ಕಡೆ ಬಂದರು. ಕಾರಣಾಂತರಗಳಿಂದ ಈ ಊರಿನ ಜನ 'ವಲಸೆ' ಹೋಗಿ ಕಾಲಗತಿಯಲ್ಲಿ ವೂಡೇ ಗ್ರಾಮ 'ಬೇಚರಕ್' ಆಯಿತು. ಆ ವೂಡೇ ಗ್ರಾಮದ ಮನೆತನಕ್ಕೆ ಸೇರಿದವನು ನಾನು, ನಮ್ಮ ಊರಿನ ಮಮಕಾರ ಬಲವಾದದ್ದರಿಂದ ನಮ್ಮ ಪೂರ್ವಿಕರ ಕಾಲದಿಂದಲೂ ನಮ್ಮೆಲ್ಲರ ಹೆಸರಿನ ಮುಂದೆ ನಮ್ಮ ಊರಿನ ಹೆಸರಾದ 'ವೂಡೇ' ಹೆಸರು ಸೇರ್ಪಡೆಯಾಗಿದೆ. ನಮ್ಮ ಪೂರ್ವಿಕರಾದ ಡಬ್ಲ್ಯೂ.ಎಚ್. ಹನುಮಂತಪ್ಪ (ಸೀನಿಯರ್), ಡಬ್ಲ್ಯೂ.ಎಚ್. ಹನುಮಂತಪ್ಪ (ಜೂನಿಯರ್) ಹಾಗೂ ನನ್ನ ತಂದೆ ಡಬ್ಲ್ಯೂಎಚ್. ಪುಟ್ಟಯ್ಯ ಇವರೆಲ್ಲರೂ ಗಾಂಧೀವಾದಿಗಳಾಗಿ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡವರು. ಇಂತಹ ಮನೆತನಕ್ಕೆ ಸೇರಿದ ನಾನು ಸಹಜವಾಗಿಯೇ ಇವರಿಂದ ಪ್ರೇರಣೆಗೊಂಡು ಸಮಾಜಸೇವಾ ಕಾರ್ಯಗಳಲ್ಲಿ ಕಿಂಚಿತ್ ತೊಡಗಿಸಿಕೊಂಡಿದ್ದೇನೆಂದು ವಿನಮ್ರವಾಗಿ ತಿಳಿಸಬಯಸುತ್ತೇನೆ.

ಕನ್ನಡಕ್ಕಾಗಿ ದನಿಎತ್ತಿದ, ರಾಜ್ಯವ್ಯಾಪಿ ಚಳುವಳಿಯಾದ ಗೋಕಾಕ್ ಚಳುವಳಿಯ ಕಾಲದಲ್ಲಿ ಬೆಂಗಳೂರಿನ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ನಾನು ಕಾಲೇಜಿನ 'ಕನ್ನಡ ಸಂಘ'ದ ಸಂಸ್ಥಾಪಕ ಅಧ್ಯಕ್ಷನಾಗಿದ್ದೆ. ಈ ಚಳುವಳಿಗೆ ಬೆಂಬಲ ನೀಡುವ ಸಲುವಾಗಿ ಕನ್ನಡ ಸಂಘದ ಇಂಜಿನಿಯರಿಂಗ್ ವಿದ್ಯಾರ್ಥಿ ಸಂಘಟನೆಯ ನೇತೃತ್ವ ವಹಿಸಿ ನಾವೆಲ್ಲರೂ ಧರಣಿ ಕುಳಿತೆವು. ಸೆಕ್ಷನ್ 144 ಜಾರಿಯಲ್ಲಿದ್ದುದರಿಂದ ನಮ್ಮೆಲ್ಲರನ್ನೂ ದಸ್ತಗಿರಿ ಮಾಡಿ, ವ್ಯಾನುಗಳಲ್ಲಿ ತುಂಬಿಕೊಂಡು ಬಂದು ಕೆಂಗೇರಿಯ ಬಳಿ ಬಿಟ್ಟರು. ಅಂದಿನ ಕಾಲಕ್ಕೆ ತಾಂತ್ರಿಕ ವಿದ್ಯಾರ್ಥಿಗಳೂ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದೇ ವಿಶೇಷವಾಗಿತ್ತು. ಅದರಲ್ಲಿ ನನ್ನದು ಪಾಲಿದೆ ಎಂದು ಹೆಮ್ಮೆಯಿಂದ ನೆನೆಯುತ್ತೇನೆ. ಇದರೊಂದಿಗೆ ಕನ್ನಡ ಸಾಹಿತ್ಯ ಕ್ಷೇತ್ರದ ಮಹಾನ್ ಚೇತನವಾದ ಕುವೆಂಪು ಅವರಿಂದ ಹಾಗೂ ಆಧ್ಯಾತ್ಮ ಕ್ಷೇತ್ರದ ಅವಧೂತರಾದ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿಯವರ ತತ್ವ ಚಿಂತನೆಗಳಿಂದ ಪ್ರಭಾವಿತನಾಗಿ ಶಿಕ್ಷಣ, ಸಮಾಜ ಸೇವೆಗಳಲ್ಲಿ ತೊಡಗಿಕೊಂಡಿದ್ದೇನೆ. ಸ್ನೇಹಿತರೆ, ಗಡಿಭಾಗದಲ್ಲಿ ಬಂದ ಅನೇಕ ಪ್ರತಿಭೆಗಳು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಜ್ವಲವಾಗಿ ಬೆಳಗಿವೆ. ಈ ಕ್ಷಣದಲ್ಲಿ ನೆನಪಿಸಿಕೊಳ್ಳಬೇಕಾದ ಹೆಸರುಗಳಲ್ಲಿ ರಾಜಕೀಯ ವಿಚಾರ ತಜ್ಞ ಪ್ರೊ ಎಚ್.ಆರ್. ದಾಸೇಗೌಡ ಮತ್ತು ವಿಜ್ಞಾನಿ ಡಾ. ಹೆಚ್. ಸಂಕೇಗೌಡರು ಮುಖ್ಯರು. ಗಡಿಗ್ರಾಮವಾದ ಹಿರೇತುರ್ಪಿಯವರಾದ ದಿವಂಗತ ಪ್ರೊ. ಎಚ್.ಆರ್. ದಾಸೇಗೌಡರು ಹಿರಿಯ ಗಾಂಧಿವಾದಿಗಳಾಗಿ, ಶ್ರೇಷ್ಠ ರಾಜಕೀಯ ಚಿಂತಕರೂ, ಶ್ರೇಷ್ಠ ಮಾನವತಾವಾದಿಗಳೂ ಆಗಿದ್ದವರು. ಬೆಂಗಳೂರು ವಿಶ್ವವಿದ್ಯಾಲಯದ ಜವಾಬ್ದಾರಿಯುತ ಹುದ್ದೆಯಲ್ಲಿದ್ದವರು, ಡಾ. ಸಂಕೇಗೌಡರು: ವಿಜ್ಞಾನ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದು ಲಂಡನ್ ಒಳಗೊಂಡಂತೆ, ಅನೇಕ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಸತ್ವಯುತ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿ ವಿದ್ವತ್ತನ್ನು ಮೆರೆದಿದ್ದಾರೆ.

ಮುಂದುವರಿಯುವುದು...

ವಿಶ್ವ ಕಾರ್ಮಿಕರ ದಿನಾಚರಣೆ

ಮಹೇಶ್

1886ರ ವರ್ಷದ ಮೇ 4ರಂದು ಚಿಕಾಗೋದ, ಇಲಿನಾಯ್ಸ್ ಪ್ರದೇಶದ ಹೇ ಮಾರ್ಕೆಟ್ ಎಂಬಲ್ಲಿ ಕಾರ್ಮಿಕರ ಮೇಲೆ ನಡೆದ ದಮನಕಾರಿ ಘಟನೆಯನ್ನು ಈ ಆಚರಣೆ ಹಿನ್ನೆಲೆಯಾಗಿ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳು ಮತ್ತು ಸಮಾಜವಾದಿ ಪಕ್ಷಗಳ ಮುಖ್ಯವಾಗಿ ಆಚರಿಸುವ ಸಂಭ್ರಮದ ಸಾರ್ವಜನಿಕ ಉತ್ಸವವೇ ಮೇ ದಿನ ಅಥವಾ 'ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯಾಗಿದೆ. ಪ್ರತಿ ವರ್ಷದ ಮೇ 1ನೇ ದಿನಾಂಕದಂದು ಈ ದಿನಾಚರಣೆಯನ್ನು ಹಲವು ದೇಶಗಳಲ್ಲಿ ಆಚರಿಸಲಾಗುತ್ತದೆ.


ಕಾರ್ಮಿಕ ಪ್ರಭುತ್ವದ ಶುಭಯುಗದ ಉದಯದ ಕುರುಹಾಗಿ ಮೇ 1ರಂದು ಉತ್ಸವಾಚರಣೆ ಮಾಡಬೇಕೆಂದು ರಾಬರ್ಟ್ ಓವೆನ್ ಸೂಚಿಸಿದ್ದನ್ನು ಪ್ಯಾರಿಸಿನಲ್ಲಿ ಸಮಾವೇಶಗೊಂಡ ಸಮಾಜವಾದಿ ಅಂತರರಾಷ್ಟ್ರೀಯ ಪ್ರಥಮ ಅಧಿವೇಶನದಲ್ಲಿ ಮೇ 1ನೆಯ ದಿನಾಂಕವನ್ನು ವಾರ್ಷಿಕ ಅಂತರ ರಾಷ್ಟ್ರೀಯ ಉತ್ಸವದಿನವೆಂದು ಆಚರಿಸಬೇಕೆಂದು ನಿರ್ಧರಿಸಲಾಗಿತ್ತು. ಮತ್ತು ಮೇ 1ನೇ ದಿನಾಂಕವನ್ನು ಸಾರ್ವಜನಿಕ ರಜಾದಿನವಾಗಿ ಘೋಷಿಸಬೇಕೆಂದು ನಿರ್ಣಯಿಸಲಾಯಿತು.

ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ದಿನವನ್ನು ಮೇ ತಿಂಗಳ ಮೊದಲ ದಿನದಂದು ಆಚರಿಸಲಾಗುತ್ತದೆ. ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಕೆನಡಗಳಲ್ಲಿ ಕಾರ್ಮಿಕ ದಿನವನ್ನಾಚರಿಸುವುದಿಲ್ಲ. ಇಟಲಿಯಲ್ಲಿ ಮೇ ದಿನಾಚರಣೆಯನ್ನು ನಿಷೇಧಿಸಲಾಗಿತ್ತಲ್ಲದೆ, ಬದಲು ರೋಮ್ ಸ್ಥಾಪನೆಯ ದಿನಾಚರಣೆ ಮಾಡಲಾಗುತ್ತದೆ. ಸೋವಿಯತ್ ದೇಶದಲ್ಲಿ ಮೇ 1, ಸಾರ್ವಜನಿಕ ರಜಾ ದಿನವಾಗಿದೆ. 1890ರ ದಶಕದಿಂದ ಯೂರೋಪಿನ ಅನೇಕ ರಾಷ್ಟ್ರಗಳು ಮೇ ತಿಂಗಳ 1ರಂದು ಕಾರ್ಮಿಕ ದಿನವನ್ನಾಚರಿಸಲಾಗುತ್ತಿವೆ. ಅಂದು ಸಾಮಾನ್ಯವಾಗಿ ಕಾರ್ಮಿಕರಿಗೆ ರಜಾದಿನ. ಸೋವಿಯತ್ ಮುಂತಾದ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಈ ದಿನಾಚರಣೆ ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಮಾಸ್ಕೋದಲ್ಲಿ ನಡೆಯುವ ಮೇ ದಿನದ ಉತ್ಸವ-ಕವಾಯಿತು ವಿಶ್ವವಿಖ್ಯಾತವಾದದ್ದಾಗಿದೆ. ಬ್ರಿಟನಿನಲ್ಲಿ ಕಾರ್ಮಿಕ ದಿನವನ್ನು ಮೇ ದಿನದ ಅನಂತರದ ಪ್ರಥಮ ಭಾನುವಾರದಂದು ಲಂಡನ್ನಿನಲ್ಲಿ ಹೈಡ್ ಪಾರ್ಕಿನಲ್ಲಿ ಉತ್ಸವ ಏರ್ಪಡಿಸಲಾಗುವುದು.

ಬ್ರಿಟನಿನಲ್ಲಿ 1928 ರಿಂದ 1934ರ ವರೆಗಿನ ಉತ್ಸವಾಚರಣೆಯ ಸಂದರ್ಭದಲ್ಲಿ ಕಾರ್ಮಿಕರ ಅನೇಕ ಮುಷ್ಕರಗಳು ನಡೆದುವು. ಅಲ್ಲಿಯೂ ಸಹ 1892 ರಿಂದ ಕಾರ್ಮಿಕ ದಿನಾಚರಣೆಯನ್ನಾಚರಿಸಲಾಗುತ್ತಿದೆ.

ಭಾರತದಲ್ಲಿ ಮೇ 1ನೇ ದಿನದಂದೇ ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತದೆ. 20ನೆಯ ಶತಮಾನದ ಎರಡನೆಯ ದಶಕದ ದ್ವಿತೀಯಾರ್ಧದಲ್ಲಿ ಕಾರ್ಮಿಕ ಸಂಘಟನೆಗಳ ಚಳವಳಿಯ ಪ್ರಭಾವದಿಂದಾಗಿ ಈ ಆಚರಣೆ ಆರಂಭವಾಯಿತು. ಮೇ ದಿನಾಚರಣೆಯಲ್ಲಿ ಭಾಗವಹಿಸಿದ ಮೊಟ್ಟಮೊದಲ ಭಾರತೀಯ ಕಾರ್ಮಿಕರೆಂದರೆ ಇಂಗ್ಲೆಂಡಿನ ಭಾರತೀಯ ನಾವಿಕರಾಗಿದ್ದಾರೆ. 1925ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂಬ ಘೋಷಣಾ ಫಲಕಗಳನ್ನು ಹಿಡಿದು ಮೆರವಣಿಗೆಯಲ್ಲಿ ಹೈಡ್ ಪಾರ್ಕಿನ ಮೇ ಉತ್ಸವ ಸಭೆಗೆ ಹೋಗಿದ್ದರು. ಭಾರತದಲ್ಲಿ ಕಾರ್ಮಿಕ ದಿನಾಚರಣೆಯಂದು ಕಾರ್ಮಿಕ ಸಂಘದವರು, ಸಮಾಜವಾದಿಗಳು, ಸಾರ್ವಜನಿಕರು ಭಾಗವಹಿಸುವರು. ಅದೇ ವರ್ಷ ಕಲ್ಕತ್ತಾದಲ್ಲಿ ಬಂಗಾಳದ ಕಾರ್ಮಿಕ ಸಂಘ ಮತ್ತು ಕಾಂಗ್ರೆಸ್ ಮೇ ದಿನವನ್ನಾಚರಿಸಿದಾಗ ಪೋಲೀಸರು ಅನೇಕ ನಿರ್ಬಂಧಕಾಜ್ಞೆಗಳನ್ನು ವಿಧಿಸಿದರೆಂದು ತಿಳಿದು ಬರುತ್ತದೆ. ಎರಡನೆಯ ಮಹಾಯುದ್ಧದ ನಂತರ ಈ ದಿನವನ್ನು ಹೆಚ್ಚು ವ್ಯಾಪಕವಾಗಿ ಆಚರಿಸಲಾಗುತ್ತಿದೆ.

ಅಂತರಾಷ್ಟ್ರೀಯ ಯೋಗ ದಿನ



ವಿಶ್ವ ಸಂಸ್ಥೆಯು ಜೂನ್ 21 ಅನ್ನು ಅಂತರಾಷ್ಟ್ರೀಯ ಯೋಗದಿನವೆಂದು ಘೋಷಿಸಿದೆ. ಭಾರತೀಯ ಮೂಲದ ಯೋಗವು 6,000 ವರ್ಷ ಪುರಾತನವಾದ ಆರೋಗ್ಯ ಮತ್ತು ಧೃಡಕಾಯದ ಮಾರ್ಗದರ್ಶಿ ಸೂತ್ರವಾಗಿದೆ ಮತ್ತು ಭೌತಿಕ, ಮಾನಸಿಕ, ಮತ್ತು ಆಧ್ಯಾತ್ಮಿಕ ಅಭ್ಯಾಸವಾಗಿದೆ. ಪ್ರಥಮ ಅಂತಾರಾಷ್ಟ್ರೀಯ ಯೋಗ ದಿನವನ್ನು ಹೊಸದಿಲ್ಲಿಯ ರಾಜಪಥ್‌ನಲ್ಲಿ ನೆಡೆಸಲು ಭಾರತ ಸರಕಾರ ಕಾರ್ಯಕ್ರಮ ರೂಪಿಸಿತ್ತು. ಆ ದಿನದ ಆರಂಭಕ್ಕೆ ಅನೇಕ ವಿಶ್ವ ನಾಯಕರಿಂದ ಸಹಕಾರ ದೊರೆತಿತ್ತು. ಅಮೇರಿಕ, ಕೆನಡಾ, ಚೀನಾ ಸೇರಿ, 177ಕ್ಕೊ ಹೆಚ್ಚಿನ ದೇಶಗಳು ಈ ಪ್ರಸ್ತಾವನೆಗೆ ತಮ್ಮ ಬೆಂಬಲವನ್ನು ಸೂಚಿಸಿದ್ದವು. ಅವುಗಳಲ್ಲಿ 175 ದೇಶಗಳು ಈ ನಿರ್ಧಾರವನ್ನು ಪುರಸ್ಕರಿಸಿದ್ದವು. ವಿಶ್ವ ಸಂಸ್ಥೆಯ ಘೋಷಣೆಗೂ ಮೊದಲು, ಅನೇಕ ಯೋಗ ಸಂಸ್ಥೆಗಳು, ಸಮೂಹಗಳು, ಶಿಕ್ಷಕರು ಮತ್ತು ಉತ್ಸಾಹಿಗಳು, ವಿಶ್ವ ಯೋಗದಿನವನ್ನು ಬೇರೆದಿನಗಳಲ್ಲಿ ಆಚರಿಸುತ್ತಿದ್ದರು. ಡಿಸೆಂಬರ್ 2011ರಲ್ಲಿ, ಯೋಗಗುರು ಶ್ರೀ ರವಿಶಂಕರ್ ಗುರೂಜಿ ಅವರು ಮತ್ತು ಯೋಗ ಶಿಕ್ಷಕರು, ಪೋರ್ಚುಗೀಸ್ ಯೋಗ ಮಹಾಒಕ್ಕೂಟದಿಂದ ವಿಶ್ವಸಂಸ್ಥೆಗೆ ವಿಶ್ವ ಯೋಗದಿನಾಚರಣೆ ಘೋಷಿಸುವಂತೆ ಕರೆ ಕೊಟ್ಟಿದ್ದರು ಎಂಬುದನ್ನು ಸ್ಮರಿಸಬಹುದು.

ಸಂಗ್ರಹ : ಡಾ. ಪೂರ್ಣಿಮಾ ಜೋಗಿ, ರಾ.ಸೇ.ಯೋ. ಅಧಿಕಾರಿ

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ವ್ಯಕ್ತಿ ನಿರೀಕ್ಷಿತ ಕಿಕ್ ಪಡೆಯಲು ಸೇವನೆಯ ಪ್ರಮಾಣವನ್ನು ಅತಿ ವೇಗದಲ್ಲಿ ಹೆಚ್ಚಿಸುತ್ತಾ ಹೋಗುತ್ತಾನೆ. ಹಾಗೆಯೇ ಅವನು ಮಾದಕ ವಸ್ತುವನ್ನು ಕೊಳ್ಳಲು ಖರ್ಚು ಮಾಡುವ ಹಣ ವಿಷದಂತೆ ಏರುತ್ತಾ ಹೋಗುತ್ತದೆ. ಹೀಗೆ ಅಫೀಮನ್ನು ಸೇವಿಸುವ ಬಹುತೇಕ ಮಂದಿ ಅತ್ಯಲ್ಪ ಕಾಲದಲ್ಲಿ ಚಟಕ್ಕೆ ಒಳಗಾಗುತ್ತಾರೆ. ದೇಹದೊಳಕ್ಕೆ ಸೇರಿದ ಹೆರಾಯಿನ್, ಮಾರ್ಫಿನ್ ಆಗಿ ಬದಲಾವಣೆ ಹೊಂದಿ ಯಕೃತ್ತುವಿನಲ್ಲಿ ಜೀರ್ಣವಾಗುತ್ತದೆ. 24 ಗಂಟೆಗಳೊಳಗಾಗಿ, ಮೂತ್ರ, ಪಿತ್ತರಸದ ಮೂಲಕ ದೇಹದಿಂದ ಹೊರಬರುತ್ತದೆ. ಹೆರಾಯಿನ್‌ಗೆ ತಾಳಿಕೆ ಕಂಡುಬಂದಾಗ, ವ್ಯಕ್ತಿ ಇತರ ಯಾವುದೇ ಮಾದಕ ವಸ್ತುವಿಗೆ – ಅದನ್ನು ಈ ಮೊದಲು ಆತ ಸೇವಿಸದೇ ಇದ್ದಾಗ್ಯೂ, ತಾಳಿಕೆಯನ್ನು ಪ್ರದರ್ಶಿಸುತ್ತಾನೆ. ಅಂದರೆ ಹೆರಾಯಿನ್ ಚಟವಿರುವ ವ್ಯಕ್ತಿ, ಅತಿ ಹೆಚ್ಚು ಪ್ರಮಾಣದಲ್ಲಿ ಮದ್ಯಸಾರ ಅಥವಾ ನಿದ್ರೆಗುಳಿಗೆಗಳನ್ನು ತಿಂದರೆ ಮಾತ್ರ, ಅವುಗಳಿಂದ ನಿರೀಕ್ಷಿತ 'ಕಿಕ್' ಪಡೆಯುತ್ತಾನೆ. ಈ ರೀತಿ ಅಫೀಮು ಎರಡು ರೀತಿಯಲ್ಲಿ ಅಪಾಯಕಾರಿ ಆಗುತ್ತದೆ. ಅಫೀಮನ್ನು ಯಾವುದೇ ರೂಪದಲ್ಲಿ ಒಂದು ದಿನ ತಿನ್ನದಿದ್ದರೆ ಏನಾಗುತ್ತದೆ? ಅತಿ ಹಿಂಸಾದಾಯಕವಾದ ಸಹಿಸಲಸಾಧ್ಯವಾದ 'ಹಿಂದೆಗೆತದ ಚಿಹ್ನೆಗಳು' (ವಿತ್ ಡ್ರಾಯಲ್ ಸಿಂಪ್ಟಮ್ಸ್) ಕಾಣಿಸಿಕೊಂಡು ವ್ಯಕ್ತಿಯ ಸ್ಥಿತಿ ಚಿಂತಾಜನಕವಾಗುತ್ತದೆ. ಕಣ್ಣು, ಮೂಗಿನಲ್ಲಿ ಧಾರಾಕಾರವಾಗಿ ನೀರು ಸೋರತೊಡಗುತ್ತದೆ (ವಿಪರೀತ ನೆಗಡಿಯಾದಂತೆ), ವಿಪರೀತ ಆಕಳಿಕೆ, ಬೆವರು, ನಡುಕ, ಸುಸ್ತು, ವಾಕರಿಕೆ, ವಾಂತಿ ಭೇದಿ, ನಿದ್ರಾಹೀನತೆ, ಹೊಟ್ಟೆಯೊಳಗೆ, ದೇಹದ ಮಾಂಸ ಖಂಡಗಳಲ್ಲಿ ಅಸಾಧ್ಯ ನೋವು, ನುಲಿತ, ತಾಳಲಾಗದ ಮಾನಸಿಕ ತಳಮಳ ಮತ್ತು ಸಂಕಟ ಕಾಣಿಸಿಕೊಳ್ಳುತ್ತವೆ. ವ್ಯಕ್ತಿ ನೋವಿನಿಂದ ಒದ್ದಾಡಿಬಿಡುತ್ತಾನೆ. ಒಂದು ಡೋಸ್ ಅಫೀಮನ್ನು ಸೇವಿಸಿದ ಕೂಡಲೇ, ಯಕ್ಷಿಣಿ ಮಾಡಿದಂತೆ, ಈ ಹಿಂದೆಗೆತದ ಚಿಹ್ನೆಗಳು ಮಾಯವಾಗುವುದರಿಂದ ವ್ಯಕ್ತಿಗೆ ಅಫೀಮು ದೇವರಂತೆ' ಕಾಣುತ್ತದೆ. ಅಫೀಮಿಗಾಗಿ ಆತ ಎಂತಹ ಹೀನ ಕೃತ್ಯ ಮಾಡಲೂ ತಯಾರಾಗುತ್ತಾನೆ. ಇಂತಹವರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲು, ಸಮಾಜಘಾತುಕ ಶಕ್ತಿಗಳು ಮುಂದಾಗುತ್ತವೆ. ಅಫೀಮು ಚಟಕ್ಕೆ ಬಿದ್ದ ವ್ಯಕ್ತಿ ಸಮಾಜಕಂಟಕನಾಗಿ, ಅಪಾಯಕಾರಿಯಾಗುತ್ತಾನೆ. ಅಲ್ಲದೆ ಆತನಿಗೆ ತಾನು ತನ್ನವರು ಎಂಬ ಮಮಕಾರ ಹೋಗಿ ಅಮಾನವೀಯತೆಯಿಂದ ರಾಕ್ಷಸನಾಗುತ್ತಾನೆ.

ಅಪಾಯಕಾರಿ ರೋಗಗಳು : ಏಯ್ಡ್ಸ್, ಇತರ ಲೈಂಗಿಕ ರೋಗಗಳು, ಲಿವರ್ ಉರಿಯೂತ, ಷಂಡತನ, ಬಂಜೆತನ ಬುದ್ಧಿ ಭ್ರಮಣೆಯಂತಹ ರೋಗಗಳು ಮಾದಕ ವಸ್ತುಗಳ ಚಟವಿರುವವರಲ್ಲಿ ಹೆಚ್ಚು. ಸಲಿಂಗ ಕಾಮ, ವಿಕೃತ ಕಾಮ, ಬಹುಮಂದಿಯೊಂದಿಗೆ ಲೈಂಗಿಕ ಚಟುವಟಿಕೆ, ವೈಯಕ್ತಿಕ ಸ್ವಚ್ಛತೆ ಇಲ್ಲದಿರುವುದು ಈ ಅಪಾಯಕಾರಿ ರೋಗಗಳು ಬರಲು ಕಾರಣವಾಗುತ್ತವೆ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಜೈವಿಕ ಆಹಾರ : ಬಯೋಡೈನಾಮಿಕ್ ಎನ್ನುವ ಲೇಬಲ್ ಇರುವ ಆಹಾರ ಪದಾರ್ಥಗಳು ಹೇಗೆ ಸಿದ್ಧವಾಗಿವೆ ಎಂದು ಕೃಷಿ ಸ್ವರೂಪದ ಕುರಿತು ಪ್ರಶ್ನೆ ಎಬ್ಬಿಸುತ್ತವೆ. ಈ ಆಹಾರದ ಕೃಷಿಯಲ್ಲಿ ಸಾವಯವ ಮಾದರಿಯಲ್ಲಿಯೇ ತತ್ವಗಳನ್ನು ಬಳಸಿರುವುದಾಗಿ ಹೇಳಲಾಗುತ್ತದೆ. ಆದರೆ ಕೆಲವು ಹೆಚ್ಚುವರಿ ನಿಯಂತ್ರಣಗಳನ್ನು ಕೈಗೊಳ್ಳಲಾಗುತ್ತದೆ. ಬಯೋಡೈನಾಮಿಕ್ ಕೃಷಿಯಲ್ಲಿ ಸಂಪೂರ್ಣ ಹೊಲವನ್ನು ಮುಚ್ಚಿದ ವ್ಯವಸ್ಥೆಯನ್ನಾಗಿ ಮಾಡಲಾಗುತ್ತದೆ. ಹೀಗಾಗಿ ಕೃಷಿ ಭೂಮಿಯ ಒಂದು ಭಾಗದ ತ್ಯಾಜ್ಯವನ್ನು ಅದೇ ಕೃಷಿ ಭೂಮಿಯ ಮತ್ತೊಂದು ಭಾಗದಲ್ಲಿ ಪ್ರಾಕೃತಿಕವಾಗಿ ಪುನರ್‌ಬಳಕೆ ಮಾಡಲಾಗುತ್ತದೆ. ಸಾಮಾನ್ಯವಾಗಿ ಗೊಬ್ಬರಕ್ಕೆ ಕಂಪೋಸ್ಟ್ ಆಗಿ ಬಳಕೆಯಾಗುತ್ತದೆ. ಬಯೋಡೈನಾಮಿಕ್ ಪದ್ಧತಿಯಲ್ಲಿ ಪರಿಸರದ ಕುರಿತಾಗಿ ಅತೀವ ಕಾಳಜಿ ವಹಿಸಲಾಗುತ್ತದೆ.

ಕುಲಾಂತರಿ ಆಹಾರ: ಜನೆಟಿಕಲೀ ಮಾಡಿಫೈಡ್ ಅಥವಾ ಕುಲಾಂತರಿ ಆಹಾರಗಳು ಸಸ್ಯ ಅಥವಾ ಪ್ರಾಣಿಯ ಮೇಲೆ ಹೊಸ ವಂಶವಾಹಿನಿಯನ್ನು ತೂರಿಸುವ ಮೂಲಕ ಅವುಗಳಿಗೆ ಹೊಸ ಗುಣ ಲಕ್ಷಣಗಳನ್ನು ನೀಡಿ ಸೃಷ್ಟಿಸಲಾಗುತ್ತದೆ. ಮುಖ್ಯವಾಗಿ ವಂಶವಾಹಿನಿಯನ್ನು ಸುಧಾರಿಸಿ ಈ ಆಹಾರ ಪದಾರ್ಥಗಳು ರೋಗ ಮುಕ್ತವಾಗುವಂತೆ ಮಾಡಲಾಗುತ್ತದೆ. ಮುಖ್ಯವಾಗಿ ಸೋಯಾಬಿನ್, ಹತ್ತಿ ಮತ್ತು ಕನೋಲಗಳನ್ನು ಕಳೆಯನ್ನು ಕೊಲ್ಲುವಂತಹ ರೀತಿಯಲ್ಲಿ ಬೆಳೆಯಲಾಗುತ್ತದೆ. ಹೀಗಾಗಿ ಈ ಬೆಳೆಗಳು ಸ್ವತಃ ಕಳೆಗಳನ್ನು ಕೊಲ್ಲುವ ಅತಿಯಾದ ಸಬಲ ಬೆಳೆಗಳಾಗಿ ಕೃಷಿ ಭೂಮಿಯಲ್ಲಿ ಏಕಸ್ವಾಮ್ಯ ಪಡೆದುಕೊಳ್ಳುತ್ತವೆ. ಕೆಲವರು ಕುಲಾಂತರಿ ಬೆಳೆಗಳು ಆರೋಗ್ಯಕ್ಕೆ ಹಾನಿಕರ ಎನ್ನುವ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಾರೆ. ಕುಲಾಂತರಿ ಬೆಳೆಗಳಲ್ಲಿ ಕಳೆಗಳನ್ನು ಕೊಲ್ಲುವ ಗುಣಗಳು ಅತಿಯಾಗಿ ತುಂಬಿಕೊಂಡಿರುವ ಸಾಧ್ಯತೆಯನ್ನೂ ಅಲ್ಲಗಳೆಯಲು ಸಾಧ್ಯವಿಲ್ಲ. ಈ ಗುಣಗಳು ಆಹಾರಗಳಲ್ಲೂ ಬಾಕಿ ಉಳಿಯುವ ಕಾರಣದಿಂದಾಗಿ ಆಕಸ್ಮಿಕ ಅಲರ್ಜಿಗಳು ಕಾಣಿಸಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಪರಿಸರ ಕಾರಣಗಳಿಗಾಗಿಯೂ ಇವುಗಳನ್ನು ಆರೋಗ್ಯಕ್ಕೆ ಹಾನಿಕರ ಎಂದು ಪರಿಗಣಿಸಲಾಗುತ್ತದೆ. ಇವುಗಳು ಸ್ವತಃ ಕಳೆಗಳಾಗಿ ಬೆಳೆದಲ್ಲಿ ಸಸ್ಯಗಳಲ್ಲಿ ಇರುವ ನಿರೋಧಕ ಶಕ್ತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಿಲ್ಲ ಎನ್ನಲಾಗುತ್ತದೆ.

ಮುಂದುವರಿಯುವುದು...

ವಾಯುವಿಕಾರಗಳಿಗೆ (ಗ್ಯಾಸ್ಟ್ರೈಟಿಸ್)ಗೆ ಉತ್ತಮ ಚಿಕಿತ್ಸೆ

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ವಾಯುವಿಕಾರ ಪ್ರತಿಯೊಬ್ಬರಲ್ಲೂ ಕಂಡುಬರುವ ಸರ್ವೇ ಸಾಮಾನ್ಯ ಕಾಯಿಲೆಯಾಗಿದೆ. ಇದಕ್ಕೆ ಗ್ರಾಸ್ಟ್ರೈಟಿಸ್ ಎಂದು ಇಂಗ್ಲೀಷಿನಲ್ಲಿ ಹೇಳುತ್ತಾರೆ. ಹೊಟ್ಟೆ ತೊಳೆಸುವುದು ಹೊಟ್ಟೆಯಲ್ಲಿ ಉರಿ ಬರುವುದು, ಉಬ್ಬರಿಕೆ, ಮಲಬದ್ಧತೆ, ಹಸಿವಾಗದೇ ಇರುವುದು, ಇವು ಈ ಕಾಯಿಲೆ ಬರುವ ಮುನ್ಸೂಚನೆಯಾಗಿವೆ. ಮುಂದಿನ ದಿನಗಳಲ್ಲಿ ದೇಹದಲ್ಲಿ ಹೊಟ್ಟೆ ಹುಣ್ಣು, ಅರತಲೆ ನೋವು (ಮೈಗ್ರೇನ್) ನಿದ್ರಾಹೀನತೆ ಇತ್ಯಾದಿಗಳಾಗಿ ಪರಿವರ್ತನೆಗೊಳ್ಳುತ್ತದೆ. ಅಷ್ಟೇಕೆ? ಗ್ರಾಸ್ಟ್ರಿಕ್ ನೋವೇ ಅಥವಾ ಹೃದಯ ಸ್ತಂಭನ ಎನ್ನುವಂತೆ ಗೊಂದಲಕ್ಕೆ ಬೀಳುವಂತಹ ಪ್ರಸಂಗವೂ ಸಹ ವೈದ್ಯರುಗಳಿಗೆ ಬಂದೊದಗುತ್ತದೆ. ಇದರ ಬಗ್ಗೆ ಅಂತರ್ ರೋಗನಿಧಾನ ಪದ್ಧತಿಯಲ್ಲಿ ಮಾಹಿತಿ ಇವೆ. ಇಷ್ಟೊಂದು ಖತರ್ನಾಕ್ ಕಾಯಿಲೆಯಾಗಿದೆ ಈ ಗ್ಯಾಸ್ಟ್ರಿಕ್ ಸಮಸ್ಯೆ, ಆದ್ದರಿಂದ ಎಲ್ಲರೂ ಜಾಗ್ರತರಾಗಿರಲೆಂಬುದೇ ಈ ಲೇಖನದ ಉದ್ದೇಶ.

ಚಿಕಿತ್ಸೆಗಳು

1. ಪ್ರತಿದಿನ 3 ರಿಂದ 4 ಲೀಟರಿನಷ್ಟು ನೀರನ್ನು ಸೇವಿಸಬೇಕು.
2. ಊಟದಲ್ಲಿ ತರಕಾರಿ ಹೆಚ್ಚಾಗಿ ಬಳಸಬೇಕು. ಇದರಿಂದ ಮಲಮೂತ್ರ ವಿಸರ್ಜನಾ ಕ್ರಿಯೆಯು ಸುಲಭವಾಗಿ ನಡೆದು ಗ್ಯಾಸ್ ಆಗುವುದಿಲ್ಲ.
3. ಹೊಟ್ಟೆಗೆ ಗ್ಯಾಸ್ ಆಗುವಂತಹ ಆಹಾರಗಳಾದ ಆಲೂಗಡ್ಡೆ, ಅತಿಯಾಗಿ ಅನ್ನ, ಬೇಳೆ ಕಾಳುಗಳ ಸೇವನೆಯನ್ನು ಮಿತಗೊಳಿಸಬೇಕು. ಎಣ್ಣೆಯಲ್ಲಿ ಕರಿದ ಪದಾರ್ಥಗಳು ಮತ್ತು ಮೈದಾಹಿಟ್ಟನ್ನು ಉಪಯೋಗಿಸಬಾರದು.
4. ಬೀಡಿ, ಸಿಗರೇಟು, ಮದ್ಯಪಾನ, ತಂಬಾಕು ಸೇವನೆ ಮಾಡಬಾರದು.
5. ನಿಯಮಿತವಾದ ವ್ಯಾಯಾಮ, ಯೋಗಾಸನಗಳನ್ನು ನಿತ್ಯ ಮಾಡಬೇಕು.
6. ವಾರಕ್ಕೊಂದು ದಿನ ಹಣ್ಣುಗಳ ಮೇಲೆಯೇ ಉಪವಾಸ ಮಾಡಬೇಕು.
7. ಊಟದ ನಂತರ ಮಜ್ಜಿಗೆಯಲ್ಲಿ ಒಂದು ಚಿಟಿಕೆಯಷ್ಟು ಇಂಗು ಬೆರೆಸಿ ಎರಡು ಹೊತ್ತು ಕುಡಿಯಬೇಕು.

ಹೊಟ್ಟೆಗೆ ಮಣ್ಣಿನ ಲೇಪನ, ಮಣ್ಣಿನ ಪಟ್ಟಿ ಅಥವಾ ಉದರ ಪಟ್ಟಿಯನ್ನೂ ಚಿಕಿತ್ಸೆಗೆ ಬಳಸುತ್ತಾರೆ.

ಚಿಕಿತ್ಸೆಗೆ ಬೇಕಾಗುವ ವಸ್ತುಗಳು

80 ಅಂಗುಲ ಉದ್ದ, 12 ಅಂಗುಲ ಅಗಲದ ಅಳತೆಯ ಹತ್ತಿ ಬಟ್ಟೆಯ ಒಂದು ಅಂಚಿಗೆ 60 ಇಂಚಿನ ಉದ್ದದ ಲಾಡಿಯನ್ನು ಹೊಲಿದಿರಬೇಕು. ಅಷ್ಟೇ ಅಳತೆಯ ವುಲನ್ ಬಟ್ಟೆಯೂ ಇರಬೇಕು. ಮೊದಲಿಗೆ ಹತ್ತಿ ಬಟ್ಟೆಯನ್ನು ನೀರಿನಲ್ಲಿ ನೆನಸಿ ಹಿಂಡಿ, ಹೊಟ್ಟೆಯ ಸುತ್ತ ಸುತ್ತಬೇಕು. ಕೊನೆಯ ಅಂಚಿನಲ್ಲಿದ್ದ ಲಾಡಿಯನ್ನು ಬಟ್ಟೆಯ ಮೇಲೆ ಗಟ್ಟಿಯಾಗಿ ಸುತ್ತಬೇಕು. ಸುತ್ತಿದ ಹಸಿ ಬಟ್ಟೆಯ ಮೇಲೆ ಮತ್ತೊಂದು ತುಂಡು ಒಣಗಿದ ವುಲ್ಲನ್ ಬಟ್ಟೆಯನ್ನು ಸುತ್ತಬೇಕು. ಅದರ ಅಂಚಿನ ಲಾಡಿಯನ್ನು ಸುತ್ತಿದ ವುಲನ್ ಬಟ್ಟೆಯ ಮೇಲೆ ಲಾಡಿಯನ್ನು ಗಟ್ಟಿಯಾಗಿ ಸುತ್ತಿ ಕಟ್ಟಬೇಕು. 30 ರಿಂದ 40 ನಿಮಿಷ ಬಿಡಬೇಕು. ಈ ಸಮಯದಲ್ಲಿ ಓಡಾಡಬಾರದು. ಈ ರೀತಿಯ ಚಿಕಿತ್ಸೆಯಿಂದ ಹೊಟ್ಟೆಯಲ್ಲಿ ಉಷ್ಣಾಂಶ ಕಡಿಮೆಯಾಗಿ ರಕ್ತದ ಚಲನೆಯು ಸರಾಗವಾಗಿ, ಮಲಬದ್ಧತೆ ನಿವಾರಣೆಯಾಗುತ್ತದೆ. ಈ ರೀತಿ ಅನುಸರಿಸುವುದರಿಂದ ವಾಯುವಿಕಾರ ಕಾಯಿಲೆ ನಿವಾರಣೆಯಾಗುತ್ತದೆ. ಈ ರೀತಿಯ ಉದರಪಟ್ಟಿ ಬೇಕಾದಲ್ಲಿ ಬೆಂಗಳೂರಿನ ಗಾಂಧಿ ಭವನದ ಆರೋಗ್ಯಧಾಮವನ್ನು ಸಂಪರ್ಕಿಸಬಹುದು.

ಜಾನಪದ ಹಾಡುಗಳ ಕಣಜ – ಹನುಮಜ್ಜಿ ಅವರಿಗೆ ಶರಣು ಶರಣು

ನಳಿನಾ ಡಿ.



ನೋವು, ಸವಾಲುಗಳೇ ಜೀವನ ತುಂಬೆಲ್ಲಾ ಹಾಸುಹೊಕ್ಕಾಗಿದ್ದರೂ "ಹಾಡುವುದು ನನಗೆಂದು, ಎದೆಯ ಭಾರ ಇಳಿಯಲೆಂದು" ಎನ್ನುತ್ತಾ ಸಾವಿರಕ್ಕೂ ಹೆಚ್ಚು ಜಾನಪದ ಹಾಡುಗಳನ್ನು ಮನದಲ್ಲಿಟ್ಟುಕೊಂಡು ಸಾಧನೆಯ ಹಾದಿಯಲ್ಲಿ ಹೆಜ್ಜೆಹಾಕಿದ್ದವರು ಗ್ರಾಮೊಕ್ಕಲ ಸಮಾಜದ ಹೆಮ್ಮೆಯ ಜಾನಪದಶ್ರೀ ಹನುಮಿ ಗೌಡರು. ಇವರು ದಿ.ಗಣಪಿ ಮತ್ತು ದಿ.ನಾರಾಯಣ ಗೌಡರ ಮಗಳಾಗಿ ಹೊನ್ನಾವರ ತಾಲೂಕಿನ ಅಳ್ಳಂಕಿ ಯರ್ಜಿನಮೂಲೆ ಗ್ರಾಮದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಮದುವೆಯಾಗಿ ಮಾಳಕೋಡಿನ ಮನೆ ಸೇರಿದ್ದರು. ಆರು ಮಕ್ಕಳನ್ನು ಸಾಕುತ್ತಾ ಹೆತ್ತವ್ವಳ ಬಳುವಳಿಯ ಜಾನಪದ ಹಾಡುಗಳನ್ನು ಗುನುಗುನಿಸುತ್ತಾ, ನೆರೆ ಹೊರೆಯ ಹಿರಿಯರ ಹಾಡುಗಳನ್ನು ಕೇಳಿ ನೆನಪಿಟ್ಟುಕೊಂಡು ಊರುಕೇರಿಯ ಶುಭ ಸಂದರ್ಭದಲ್ಲಿ ಹನುಮಜ್ಜಿಯ ಬಳಗದ ಹಾಡಿನ ಸುಗ್ಗಿ ನಡೆಯುತ್ತಿತ್ತು. ಹನುಮಜ್ಜಿ ಕೇವಲ ಜಾನಪದ ಹಾಡುಗಳಿಗೆ ಸೀಮಿತವಾಗಿರಲಿಲ್ಲ. ಗ್ರಾಮೀಣ ಗುಡಿಗಾರಿಕೆ, ಕುಶಲ ಕಲೆಯಲ್ಲಿಯೂ ನಿಷ್ಣಾತರಾಗಿದ್ದು, ಗೋಡೆಯ ಮೇಲೆ ಚಿತ್ತಾರಗಳನ್ನು ಸೃಷ್ಟಿಸುವ ಕಲೆಯನ್ನೂ ಕರಗತ ಮಾಡಿಕೊಂಡಿದ್ದರು. ಎಲೆಮರೆಯ ಕಾಯಿಯಂತಿದ್ದ ಹನುಮಜ್ಜಿಯ ಜಾನಪದ ಪ್ರತಿಭೆಯನ್ನು ಹೊರ ಜಗತ್ತಿಗೆ ಪರಿಚಯಿಸಿದ್ದು, ಖ್ಯಾತ ಜಾನಪದ ವಿದ್ವಾಂಸ ಡಾ.ಎನ್.ಆರ್. ನಾಯಕ ಮತ್ತು ಡಾ. ಶಾಂತಿ ನಾಯಕ ದಂಪತಿಗಳು. 2002ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜ್ಞಾನ ವಿಜ್ಞಾನ ಪ್ರಶಸ್ತಿ, ಕರ್ನಾಟಕ ಸರ್ಕಾರದ ಜಾನಪದ ಶ್ರೀ ಗೌರವಗಳು ಸಂದಿವೆ. ಈಶಾನ್ಯ ರಾಜ್ಯ ಮೇಘಾಲಯದ ಶಿಲ್ಲಾಂಗ್‌ನ ರಾಷ್ಟ್ರೀಯ ಜಾನಪದ ಉತ್ತೇಜನ ಕೇಂದ್ರದ ಕಾರ್ಯಕ್ರಮದಲ್ಲಿಯೂ ಕರ್ನಾಟಕದ ಗ್ರಾಮೊಕ್ಕಲ ಜಾನಪದ ಲೋಕದ ವೈಭವವನ್ನು ಮೆರೆದವರು. ಜೂನ್ 21, 2021ರಂದು ನಮ್ಮನ್ನಗಲಿದ ಹನುಮಜ್ಜಿಗೆ ಶ್ರದ್ಧಾಂಜಲಿಗಳು.

ಡೆಲ್ಟಾ ವಿಶ್ವದೆಲ್ಲೆಡೆ ಮತ್ತೆ ಲಾಕ್‌ಡೌನ್ ಭೀತಿ

ವಿಶ್ವದೆಲ್ಲೆಡೆ ಈಗ ಡೆಲ್ಟಾ ವೈರಸ್‌ನಿಂದಾಗಿ ಮತ್ತೊಮ್ಮೆ ಕೊರೋನಾ ಸೋಂಕು ಹರಡುವ ಭೀತಿ ಎದುರಾಗಿದೆ. ಈಗಾಗಲೇ 92 ದೇಶಗಳಲ್ಲಿ ಡೆಲ್ಟಾ ವೈರಸ್ ಹಬ್ಬಿದೆ. ಬ್ರಿಟನ್, ಆಸ್ಟ್ರೇಲಿಯಾ, ರಷ್ಯಾ ಸೇರಿದಂತೆ ಲಾಕ್ ಡೌನ್ ರೀತಿಯ ಹಲವು ನಿರ್ಬಂಧಗಳನ್ನು ಜಾರಿ ಮಾಡಲಾಗುತ್ತಿದೆ. ವಿಶ್ವದ ಹಲವು ದೇಶಗಳಲ್ಲಿ ಸೋಂಕು ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಡೆಲ್ಟಾ ಎನ್ನುವುದು ಭಾರತದಲ್ಲಿ ಪತ್ತೆ ಆದ ಕೊರೋನಾ ವೈರಸ್‌ನ ರೂಪಾಂತರಿ ಪ್ರಭೇದವಾಗಿದೆ. ಭಾರತದಲ್ಲಿ ಕಳೆದ ವರ್ಷ ಡಿಸೆಂಬರ್ ವೇಳೆಗೆ ಈ ವೈರಸ್ ಪತ್ತೆ ಆಗಿತ್ತು. ಈ ವೈರಸ್ ಅತಿ ವೇಗವಾಗಿ ಒಬ್ಬರಿಂದ ಒಬ್ಬರಿಗೆ ಹರಡುವ ಸಾಮರ್ಥ್ಯ ಹೊಂದಿದೆ.

ಆಸ್ಟ್ರೇಲಿಯಾ ನಿರ್ಬಂಧ

ಕೊರೋನಾವನ್ನು ನಿಯಂತ್ರಿಸುವಲ್ಲಿ ಆಸ್ಟ್ರೇಲಿಯಾ ಬಹುತೇಕ ಯಶಸ್ವಿ ಆಗಿತ್ತು. ಆದರೆ, ಡೆಲ್ಟಾ ವೈರಸ್‌ನಿಂದಾಗಿ ಆಸ್ಟ್ರೇಲಿಯಾದಲ್ಲಿ ಮತ್ತೊಮ್ಮೆ ಕೊರೋನಾ ಸೋಂಕು ಹೆಚ್ಚುವ ಆತಂಕ ತುಂಬಿದೆ. ಆಸ್ಟ್ರೇಲಿಯಾದಲ್ಲೀಗ 1.8 ಕೋಟಿ ಮಂದಿ ಅಂದರೆ ಸುಮಾರು ಶೇ.70ರಷ್ಟು ಮಂದಿ ಲಾಕ್‌ಡೌನ್ ರೀತಿಯ ಒಂದಿಲ್ಲೊಂದು ನಿರ್ಬಂಧಗಳನ್ನು ಎದುರಿಸುತ್ತಿದ್ದಾರೆ. ಕ್ವೀನ್ಸ್‌ಲ್ಯಾಂಡ್, ಬ್ರಿಸ್ಬೇನ್, ಮೆಲ್ಬೋರ್ನ್‌ನಲ್ಲಿಯೂ ಜನರ ಓಡಾಟ, ಗುಂಪುಗೂಡುವಿಕೆ ನಿಷೇಧಿಸಲಾಗಿದೆ.

ಬ್ರಿಟನ್‌ನಲ್ಲಿ ನಿರ್ಬಂಧ ವಿಸ್ತರಣೆ

ಬ್ರಿಟನ್‌ನಲ್ಲಿ ಈಗ ಪತ್ತೆ ಆಗುತ್ತಿರುವ ಕೊರೋನಾ ಪ್ರಕರಣಗಳ ಪೈಕಿ ಶೇ.95ರಷ್ಟು ಪ್ರಕರಣಗಳು ಡೆಲ್ಟಾ ವೈರಸ್ ಕೇಸ್‌ಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಕೊರೋನಾ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಪ್ರತಿನಿತ್ಯ 20 ಸಾವಿರಕ್ಕೂ ಅಧಿಕ ಕೇಸ್‌ಗಳು ಪತ್ತೆ ಆಗುತ್ತಿದ್ದು, 3ನೇ ಅಲೆಯ ಭೀತಿ ಹಿನ್ನೆಲೆಯಲ್ಲಿ ಲಾಕ್‌ಡೌನ್‌ನ್ನು ಜು.19ರವರೆಗೂ ಮುಂದುವರಿಸಲು ಸರ್ಕಾರ ತೀರ್ಮಾನಿಸಿದೆ ಹಾಗೂ ಬ್ರಿಟನ್‌ನಿಂದ ಆಗಮಿಸುವ ಎಲ್ಲಾ ಪ್ರಯಾಣಿಕ ವಿಮಾನಗಳಿಗೆ ಜು.1ರಿಂದ ನಿಷೇಧ ಹೇರುವುದಾಗಿ ಹಾಂಕಾಂಗ್ ಘೋಷಿಸಿದೆ. ಕೊರೊನಾಆರಂಭವಾದ ಬಳಿಕ ಬ್ರಿಟನ್ ವಿಮಾನಕ್ಕೆ ಹಾಂಕಾಂಗ್ ನಿಷೇಧ ಹೇರುತ್ತಿರುವುದು ಇದು ಎರಡನೇ ಬಾರಿಯಾಗಿದೆ.

ರಷ್ಯಾದಲ್ಲಿ ಲಸಿಕೆ

ರಷ್ಯಾದಲ್ಲಿಯೂ 3ನೇ ಅಲೆ ಭೀತಿ ಎದುರಾಗಿದ್ದು, ದಿನನಿತ್ಯ 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ರಷ್ಯಾದ ಪ್ರಮುಖ ನಗರ ಸೇಂಟ್ ಪೀಟ್ಸ್‌ಬರ್ಗ್‌ನಲ್ಲಿ ಸಾವಿನ ಸಂಖ್ಯೆ ದಿಢೀರ್ ಏರಿಕೆ ಆಗಿರುವ ಹಿನ್ನೆಲೆಯಲ್ಲಿ ಫುಡ್ ಕೋರ್ಟ್‌ಗಳನ್ನು ಮುಚ್ಚಲಾಗಿದೆ. ರಾಜಧಾನಿ ಮಾಸ್ಕೋದ ಬಾರ್, ರೆಸ್ಟೋರೆಂಟ್, ಕೆಫೆಗಳಲ್ಲಿ ಲಸಿಕೆ ಹಾಕಿಸಿಕೊಂಡವರಿಗೆ ಮಾತ್ರವೇ ಪ್ರವೇಶ ನೀಡಲಾಗುತ್ತಿದೆ.

ಜರ್ಮನಿ ನಿಷೇಧ

ಡೆಲ್ಟಾ ವೈರಸ್ ಹಬ್ಬುವ ಭೀತಿಯಿಂದಾಗಿ ಪೋರ್ಚುಗಲ್ ಮತ್ತು ರಷ್ಯಾದಿಂದ ಆಗಮಿಸುವವರಿಗೆ ಜರ್ಮನಿ ನಿಷೇಧ ಹೇರಿದೆ. ಈ ಎರಡು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಅಧಿಕ ಪತ್ತೆ ಆಗುತ್ತಿರುವ ಹಿನ್ನೆಲೆಯಲ್ಲಿ ಜರ್ಮನಿ ಈ ಕ್ರಮ ಕೈಗೊಂಡಿದೆ.

ಇಂಡೋನೇಷ್ಯಾ ಆಸ್ಪತ್ರೆಗಳು ಭರ್ತಿ

ಇಂಡೋನೇಷ್ಯಾದಲ್ಲಿ ಕೋವಿಡ್ ಪ್ರಕರಣಗಳು ಭಾರೀ ಏರಿಕೆ ಅಂದರೆ ದಿನನಿತ್ಯ 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಬಹುತೇಕ ಆಸ್ಪತ್ರೆಗಳು ರೋಗಿಗಳಿಂದ ಭರ್ತಿ ಆಗಿದ್ದು, ಆರೋಗ್ಯ ವ್ಯವಸ್ಥೆ ಕುಸಿಯುವ ಆತಂಕ ಎದುರಾಗಿದೆ. ಉತ್ತರ ಸುಮಾತ್ರ ಪ್ರಾಂತ್ಯದಲ್ಲಿ 1800ಕ್ಕೂ ಹೆಚ್ಚು ಮಕ್ಕಳಲ್ಲಿ ಕೊರೋನಾಸೋಂಕು ಕಾಣಿಸಿಕೊಂಡಿದ್ದು, 14 ಮಂದಿ ಮೃತಪಟ್ಟಿದ್ದಾರೆ. ಮೂರನೇ ಒಂದರಷ್ಟು ಪ್ರಕರಣಗಳು ಮಕ್ಕಳಲ್ಲೇ ಕಾಣಿಸಿಕೊಳ್ಳುತ್ತಿರುವುದು ಆತಂಕ ಸೃಷ್ಟಿಸಿದೆ.

ಬಾಂಗ್ಲಾದಲ್ಲಿ ಜು.1ರಿಂದ ಲಾಕ್‌ಡೌನ್

ಬಾಂಗ್ಲಾದೇಶದಲ್ಲಿ ಪ್ರತಿನಿತ್ಯ 8 ಸಾವಿರಕ್ಕೂ ಅಧಿಕ ಕೊರೋನಾ ಪ್ರಕರಣಗಳು ದಾಖಲಾಗುತ್ತಿದ್ದು, ಸಾವಿನ ಪ್ರಮಾಣದಲ್ಲಿಯೂ ಏರಿಕೆಯಾಗಿದೆ. ಪಾಸಿಟಿವಿಟಿ, ಪ್ರಮಾಣ ಶೇ.20ಕ್ಕಿಂತ ಹೆಚ್ಚು ದಾಖಲಾಗುತ್ತಿದೆ. ಕೊರೋನಾ ನಿಯಂತ್ರಣಕ್ಕಾಗಿ ಗುರುವಾರ ದಿಂದ ದೇಶಾದ್ಯಂತ ಕಟ್ಟುನಿಟ್ಟಿನ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಜನರು ತೀರಾ ಅಗತ್ಯವಿದ್ದರೆ ಮಾತ್ರವೇ ಮನೆಯಿಂದ ಹೊರಬರುವುದಕ್ಕೆ ಅವಕಾಶ ನೀಡಲಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ನಿರ್ಬಂಧ

ಕಳೆದ ವರ್ಷ ರೂಪಾಂತರಿ ವೈರಸ್‌ನಿಂದ ಆಂತಕಕ್ಕೀಡಾಗಿದ್ದ ದಕ್ಷಿಣ ಆಫ್ರಿಕಾದಲ್ಲಿ ಈಗ ಡೆಲ್ಟಾ ವೈರಸ್ ಕಾಲಿಟ್ಟಿದೆ. ಈಗ ಕೊರೋನಾ ಸೋಂಕು ಹರಡದಂತೆ ತಡೆಯಲು ನಿರ್ಬಂಧಗಳನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ದೀರ್ಘಾವಧಿ ಕರ್ಫ್ಯೂ, ಜನರು ಗುಂಪುಗೂಡುವುದರ ನಿಷೇಧ, ರಾತ್ರಿ ಕರ್ಫ್ಯೂ ಸೇರಿದಂತೆ ವಿವಿಧ ಹಂತಗಳ ಲಾಕ್‌ಡೌನ್ ನಿರ್ಬಂಧಗಳನ್ನು ಪಾಲನೆ ಮಾಡಲಾಗುತ್ತಿದೆ.

ಸಂಗ್ರಹ : ಡಾ. ವಸುಂಧರಾ ಭೂಪತಿ



ಕೋವಿಡ್ ಶೀಲ್ಡ್ ಸಂಶೋಧಕಿ ಡೇಮ್ ಸಾರಾ ಕ್ಯಾಥರಿನ್ ಗಿಲ್ಬರ್ಟ್

– ಡಾ. ರಾಮಲಿಂಗೇಶ್ವರ (ಸಿಸಿರಾ)



ಈ ಬಾರಿಯ ವಿಂಬಲ್ಡನ್ ಟೆನ್ನಿಸ್ ಟೂರ್ನಿಗೆ ಆಗಮಿಸಿದ್ದ ವಿಜ್ಞಾನಿ ಡೇಮ್ ಸಾರಾ ಗಿಲ್ಬರ್ಟ್ ಅವರಿಗೆ ಪ್ರೇಕ್ಷಕರೆಲ್ಲ ಸೇರಿ ಟೆನ್ನಿಸ್ ಅಂಗಳದಲ್ಲಿ ನಿಂತು ಗೌರವ ಸಲ್ಲಿಸಿದ ಹೃದಯಸ್ಪರ್ಶಿ ಘಟನೆ ನಡೆಯಿತು. ಗಿಲ್ಬರ್ಟ್ ಅವರು ಕರೋನಾ ಪಿಡುಗಿಗಾಗಿ ಅಧ್ಯಯನ–ಸಂಶೋಧನೆ ನಡೆಸಿ ಆಕ್ಸ್‌ಫರ್ಡ್ **'ಅಸ್ಟ್ರಾಜೆನೆಕಾ (ಕೋವಿಶೀಲ್ಡ್)'** ಲಸಿಕೆ ಅಭಿವೃದ್ಧಿಪಡಿಸಿದವರಲ್ಲಿ ಒಬ್ಬರಾಗಿದ್ದಾರೆ. ದೇಶದಲ್ಲಿ ಕೋವಿಡ್ ವಿರುದ್ಧ ಸೇವೆ ಸಲ್ಲಿಸಿದವರನ್ನು ಕ್ರೀಡಾಕೂಟಕ್ಕೆ ಆಹ್ವಾನಿಸಲಾಗಿದೆ ಎಂದು ಘೋಸಿಸುತ್ತಿದ್ದಂತೆಯೇ ನೆರೆದಿದ್ದ ಪ್ರೇಕ್ಷಕರೆಲ್ಲ ನಿಂತು ಚಪ್ಪಾಳೆ ಹೊಡೆದು ಗೌರವ ಸೂಚಿಸಿದರು.

ಡೇಮ್ ಸಾರಾ ಕ್ಯಾಥರೀನ್ ಗಿಲ್ಬರ್ಟ್ ಬ್ರಿಟಿಷ್ ವ್ಯಾಕ್ಸಿನಾಲಜಿಸ್ಟ್ ಆಗಿದ್ದು, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಕ್ಸಿನಾಲಜಿಯ ಪ್ರೊಫೆಸರ್ ಮತ್ತು ವ್ಯಾಕ್ಸಿಟೆಕ್‌ನ ಸಹ–ಸಂಸ್ಥಾಪಕರಾಗಿದ್ದಾರೆ. ಗಿಲ್ಬರ್ಟ್, ಇನ್‌ಫ್ಲುಯೆಂಜಾ ಮತ್ತು ವೈರಲ್ ರೋಗಕಾರಕಗಳ ವಿರುದ್ಧ ಲಸಿಕೆಗಳ ಅಭಿವೃದ್ಧಿಯಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ಅವರು, ಫ್ಲೂ ಲಸಿಕೆಯ ಅಭಿವೃದ್ಧಿ ಮತ್ತು ಪರೀಕ್ಷೆಯ ನೇತೃತ್ವ ವಹಿಸಿದ್ದರು.

30ನೇ ಡಿಸೆಂಬರ್ 2020 ರಂದು ಆರಂಭಿಸಿದ ಆಕ್ಸ್ ಫರ್ಡ್–ಆಸ್ಟ್ರಾಜೆನೆಕಾ ಕೋವಿಡ್–19 ಲಸಿಕೆಯನ್ನು ಬಳಸುವ ಆಕ್ಸ್‌ಫರ್ಡ್ ಲಸಿಕೆ ವಿಜ್ಞಾನಿಗಳ ತಂಡದಲ್ಲಿ ಒಬ್ಬರಾಗಿದ್ದರು. ಡಾಕ್ಟರಲ್ ಪದವಿ ನಂತರ ಗಿಲ್ಬರ್ಟ್, ಲೀಸೆಸ್ಟರ್ ಬಯೋಸೆಂಟರ್‌ಗೆ ತೆರಳುವ ಮುನ್ನಾ ಬ್ರೂವಿಂಗ್ ಇಂಡಸ್ಟ್ರಿ ರಿಸರ್ಚ್ ಫೌಂಡೇಶನ್‌ನ ಉದ್ಯಮದಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧಕರಾಗಿದ್ದರು. 2004 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಕ್ಸಿನಾಲಜಿಯಲ್ಲಿ ರೀಡರ್ ಆಗಿ ಆಯ್ಕೆಯಾಗಿದ್ದರು. ಗಿಲ್ಬರ್ಟ್ ವಿನೂತನ ಇನ್ ಫ್ಲುಯೆನ್ಸಾ ಲಸಿಕೆಗಳ ವಿನ್ಯಾಸ ಮತ್ತು ಸಂಶೋಧನೆ ಮತ್ತು ವೈರಲ್ ಲಸಿಕೆಗಳ ಅಭಿವೃದ್ಧಿ ಮತ್ತು ಪ್ರಿಕ್ಲಿನಿಕಲ್ ಪರೀಕ್ಷೆಯನ್ನು ಆರಂಭಿಸಿದ್ದರು. ಅವರು ಕೋವಿಡ್–19 ಸಾಂಕ್ರಾಮಿಕ ಪ್ರಾರಂಭವಾದಾಗಿನಿಂದಲೂ, ಇದಕ್ಕೆ ಕಾರಣವಾಗುವ ವೈರಸ್‌ನಿಂದ ರಕ್ಷಿಸಲು ಹೊಸ ಲಸಿಕೆಯ ಅಭಿವೃದ್ಧಿಯಲ್ಲಿ ತೊಡಗಿದ್ದರು. ಗಿಲ್ಬರ್ಟ್ ಅವರು ಆಂಡ್ರ್ಯೂ ಪೊಲಾರ್ಡ್, ತೆರೇಸಾ ಲ್ಯಾಂಬೆ, ಸ್ಯಾಂಡಿ ಡೌಗ್ಲಾಸ್, ಕ್ಯಾಥರೀನ್ ಗ್ರೀನ್ ಮತ್ತು ಆಡ್ರಿಯನ್ ಹಿಲ್ ಅವರೊಂದಿಗೆ ಈ ಲಸಿಕೆಯ ಸಂಶೋಧನೆಯಲ್ಲಿ ತೊಡಗಿದ್ದರು. ಈ ಲಸಿಕೆಯ ಸಂಶೋಧನೆಗಾಗಿ ದಿ ಟೈಮ್ಸ್ ಪತ್ರಿಕೆಯ ಮೇ 2020ರ ಸಂಚಿಕೆಯ 'ಸೈನ್ಸ್ ಪವರ್ ಲಿಸ್ಟ್' ನಲ್ಲಿ ಗಿಲ್ಬರ್ಟ್ ಹೆಸರು ಶೋಭಿಸಿತು.





ASIA'S NEWSPAPER TO ENTER 100th YEAR

Asia's oldest newspaper - Mumbai Samachar-will enter into the 200th year of its publication on July 1. The newspaper has seen the transformation of Bombay to Mumbai-and has covered all the historic events involving the financial capital and India. Over the years, the Gujarati daily has carved a niche for itself with its office in Red House at the SA Brelvi Road, off the Horniman Circle in the Fort area of Mumbai. Earlier known as Bombay Samachar, the Parsi-family owned newspaper has played an important role in India's freedom struggle. 'Hicky's Bengal Gazette or the Original Calcutta General Advertiser was the first newspaper printed in Asia, and was published only for two years, between 1780 and 1782. The first edition of Bombay Samachar came out on 1 July 1822 It was the second non-English newspaper published in India - the first being Samachar Darpan, that came out on May 23, 1818, from Serampore in Hooghly. The first Hindi newspaper Udant Martand came out on May 30, 1826, published from erstwhile Calcutta. The Bombay Samachar was established in 1822 by Parsi scholar and priest Fardunjee Marzban who was a pioneer not only of journalism in Western India but of all Gujarati printed literature. He founded the first native press in 1812 and in 1814 brought out a Gujarati Calendar, fully six years before the first Bengali calendar was printed and published in Calcutta. Initially, the paper consisted of three small quarto sheets and a half sheet supplement, published in a 10x8 inch I format, containing overall 14 pages of printed matter. The newspaper, born as a weekly, was published till 1832; post which it transformed into a bi-weekly till 1855 and a daily after that till date. The Mumbai Samachar is now owned by the Cama family, which took over in 1933. One copy of the daily newspaper is priced at Rs 10, the highest in India.

Courtesy : Deccan Herald, 24.06.2021

Married couples in Japan to adopt one surname



TOKYO, AP/PTI: Japan's Supreme Court ruled on Wednesday that laws requiring married couples to have the same surname are constitutional dismissing a challenge by three couples seeking to keep their original names. The decision to affirm a 2015 Supreme Court ruling was a major disappointment for rights activists who say the laws violate the constitution's guarantee of gender equality since women almost always sacrifice their surnames.

Courtesy : Deccan Herald, 24.06.2021

ಮೌಂಟ್ ಎವರೆಸ್ಟ್ ಏರಿದ ಏಷ್ಯಾದ ಮೊದಲ ಅಂಧ ವ್ಯಕ್ತಿ



ಚೀನಾದ 46 ವರ್ಷದ ಝಾಂಗ್ ಹೊಂಗ್ ಜಗತ್ತಿನ ಅತಿ ಎತ್ತರದ ಪರ್ವತ ಶಿಖರ ಮೌಂಟ್ ಎವರೆಸ್ಟನ್ನು ಏರಿದ ಏಷ್ಯಾದ ಮೊದಲ ಹಾಗೂ ಜಗತ್ತಿನ ಮೂರನೇ ಅಂಧ ವ್ಯಕ್ತಿಯಾಗಿ ದಾಖಲೆ ನಿರ್ಮಿಸಿದ್ದಾರೆ. ಅವರು 8,849 ಮೀಟರ್ ಎತ್ತರದ ಹಿಮಾಚ್ಛಾದಿತ ಶಿಖರವನ್ನು ಮೇ 24ರಂದು ನೇಪಾಳದ ಕಡೆಯಿಂದ ಏರಿ ಮರಳಿದ್ದಾರೆ. ನೈರುತ್ಯ ಚೀನಾದ ಚೊಂಗ್‌ಕಿಂಗ್ ನಗರದಲ್ಲಿ ಜನಿಸಿದ ಝಾಂಗ್, 21ನೇ ವರ್ಷದಲ್ಲಿ ಗ್ಲುಕೋಮಾದಿಂದ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದರು.

ಕೃಪೆ : ವಾರ್ತಾಭಾರತಿ, 31.05.2021

US to lift oil sanctions iran



Iran said on Wednesday the US had agreed to remove all sanctions on Iran's oil and E shipping, although Germany cautioned that major issues remained at talks between Tehran and world powers to revive a 2015 nuclear deal. The Iranian remarks, by outgoing President Has san Rouhani's chief of staff Mahmoud Vaezi, echoed previous assertions by officials in Rouhani's pragmatist camp that Washington is prepared to make major concessions at the talks, which have been underway since April in Vienna. The talks adjourned on Sunday for consultations in capitals, two days after Iran held a presidential election won by hardliner Ebrahim Raisi, the Iranian judiciary chief who is on a US blacklist. Raisi is due to replace Rouhani in August. "An agreement has been reached to remove all insurance, oil and shipping sanctions that were imposed by (Former US President Donald Trump),"Vaezi said. Like other Western and Iranian negotiators who have said the talks remain a long way from conclusion, German Foreign Minister Heiko Maas said on Wednesday that Tehran and the powers still had to overcome significant hurdles.

Courtesy : Deccan Herald, 24.06.2021

ಸಿರಿಯಾದಲ್ಲಿ ಬಾಹ್ಯ ಶಕ್ತಿಗಳ ಶಾಮೀಲಾತಿ ವಿಶ್ವ ಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಆಕ್ಷೇಪಿಸಿದ ಭಾರತ



ಸಿರಿಯಾದಲ್ಲಿ ಬಾಹ್ಯ ಶಕ್ತಿಗಳ ಶಾಮೀಲಾತಿಯಿಂದ ಹೆಚ್ಚುತ್ತಿರುವ ಉಗ್ರ ಚಟುವಟಿಕೆಗಳ ಕುರಿತು ಭಾರತ ಶುಕ್ರವಾರ ಕಳವಳ ವ್ಯಕ್ತಪಡಿಸಿದೆಯಲ್ಲದೇ ಆ ದೇಶದಲ್ಲಿ ದೀರ್ಘಕಾಲಿಕ ಭದ್ರತೆ ಮತ್ತು ಸ್ಥಿರತೆ ಮಾತ್ರ ಅಲ್ಲಿನ ಸಾರ್ವಭೌಮತೆ ಹಾಗೂ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಬಹುದು ಎಂದು ಹೇಳಿದೆ.

ಶುಕ್ರವಾರ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಕಾಶ್ ಗುಪ್ತಾ, ಸಿರಿಯಾದಲ್ಲಿ ಆಫ್ರಿಕಾದ ಸೈನಿಕರ ಉಪಸ್ಥಿತಿ ಕಳವಳಕಾರಿ, ಭದ್ರತಾ ಮಂಡಳಿ ಸೂಚಿಸಿದಂತೆ ಸಿರಿಯಾದಲ್ಲಿ ಉಗ್ರವಾದ ಹಾಗೂ ಉಗ್ರ ಸಂಘಟನೆಗಳ ವಿರುದ್ಧದ ಹೋರಾಟದಲ್ಲಿ ಎಲ್ಲಾ ಸಂಬಂಧಿತರು ತಮ್ಮ ಅಂತರ್‌ರಾಷ್ಟ್ರೀಯ ಬದ್ಧತೆಗಳಿಗೆ ನಿಷ್ಠರಾಗಿರಬೇಕು ಎಂದು ಹೇಳಿದರು, ಸಿರಿಯಾದ ವಿಶೇಷ ರಾಯಭಾರಿ ಗೀರ್ ಓ ಪಡರ್ಸನ್ ಎಪ್ರಿಲ್‌ನಲ್ಲಿ ಮುಂದಿಟ್ಟಿದ್ದ 'ಬ್ರಿಡ್ಜಿಂಗ್ ಪ್ರಪೋಸಲ್' ಕುರಿತು ಚರ್ಚೆಗಳು ಮುಂದುವರಿಯಬೇಕು ಎಂದು ಅವರು ಸಲಹೆ ನೀಡಿದರು.

ಇತ್ತೀಚೆಗೆ ಉತ್ತರ ಸಿರಿಯಾದ ಆಫ್ರಿನ್ ನಗರದಲ್ಲಿ ಆಸ್ಪತ್ರೆಯೊಂದರ ಮೇಲೆ ನಡೆದ ದಾಳಿಯನ್ನು ಖಂಡಿಸಿದ ಭಾರತ ಸಿರಿಯದಾದ್ಯಂತ ಕದನವಿರಾಮದ ಅಗತ್ಯವನ್ನು ಒತ್ತಿ ಹೇಳಿದೆ,

ಸೌಜನ್ಯ : ವಾರ್ತಾಭಾರತಿ –27.06.2021



ವಿಶ್ವದ ಅತೀ ದೊಡ್ಡ ಮೆಡಲ್ ನಿರ್ಮಾಣ ಅಬುದಾಭಿ ವಿದ್ಯಾರ್ಥಿಗಳ ಗಿನ್ನೆಸ್ ದಾಖಲೆ


ಅಬುದಾಭಿ,ಜೂ.26: ಜಗತ್ತಿನ ಅತಿ ದೊಡ್ಡ ಪದಕವನ್ನು ನಿರ್ಮಿಸುವ ಮೂಲಕ ಇಲ್ಲಿನ ಇಂಟರ್‌ನ್ಯಾಶನಲ್ ಇಂಡಿಯನ್ ಸ್ಕೂಲ್‌ನ ವಿದ್ಯಾರ್ಥಿಗಳು ಗಿನ್ನೆಸ್ ದಾಖಲೆ ಸೃಷ್ಟಿಸಿದ್ದಾರೆ. 450 ಕೆ.ಜಿ.ಭಾರದ ಈ ಪದಕವು ಉಕ್ಕಿನಿಂದ ನಿರ್ಮಿಸಲ್ಪಟ್ಟಿದ್ದು, 5.93 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಶಾಲಾ ಕಟ್ಟಡದ ಹಜಾರದಲ್ಲಿ ಇರಿಸಲಾಗಿರುವ ಬೃಹತ್ ಪದಕದ ವಿಸ್ತೀರ್ಣವನ್ನು ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಸಂಸ್ಥೆಯ ತೀರ್ಪುಗಾರರು ಶನಿವಾರ ಮಾಪನ ನಡೆಸಿದರು. ಶಾಲಾ ಪ್ರಾಂಶುಪಾಲ ಡಾ. ಬೆನೊ ಕುರಿಯನ್ ಹಾಗೂ ಶಾಲಾ ಆಡಳಿತ ನಿರ್ದೇಶಕ ಮುನೀರ್ ಅನ್ಸಾರಿ, ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಸಿಬ್ಬಂದಿ ಮತ್ತಿತರರು ಕೋವಿಡ್ ಶಿಷ್ಟಾಚಾರಗಳ ಪಾಲನೆಯೊಂದಿಗೆ ಉಪಸ್ಥಿತರಿದ್ದರು. ಯುಎಇ ಸಾಧನೆಗಳಿಗೆ ಶ್ಲಾಘನೆಯಾಗಿ ವಿದ್ಯಾರ್ಥಿಗಳು ಅಪಾರಕ್ರಮ ವಹಿಸಿ ವಿಶ್ವದ ಅತಿ ದೊಡ್ಡ ಪದಕವನ್ನು ರಚಿಸಿದ್ದಾರೆಂದು ಶಾಲಾ ಪ್ರಾಂಶುಪಾಲ ಡಾ.ಕುರಿಯನ್ ತಿಳಿಸಿದರು. ಈ ಮೊದಲು ಗಿನ್ನೆಸ್ ದಾಖಲೆ ನಿರ್ಮಿಸಿದ್ದ ಪದಕವು 68.5 ಕೆ.ಜಿ. ಭಾರದ್ದಾಗಿತ್ತು ಹಾಗೂ 2.56 ಚ.ಕಿ.ಮೀ.ವಿಸ್ತೀರ್ಣವಿತ್ತು ಮತ್ತು ಅದನ್ನು ಕೂಡಾ ಅಬುದಾಭಿಯಲ್ಲೇ ನಿರ್ಮಿಸಲಾಗಿತ್ತು.

ಸೌಜನ್ಯ : ವಾರ್ತಾಭಾರತಿ –27.06.2021

ಪರಿಸರದೊಂದಿಗೆ ನಾವು


ಸಂಗ್ರಹ : ಡಾ. ಮುನಿಯಪ್ಪ

ಭೂಮಾತೆಯ ವಿಶ್ವರೂಪ



ಭೂಮಿ ಅಯಸ್ಕಾಂತ ಆಕರ್ಷಣೆ ಶಕ್ತಿಯುಳ್ಳ ಘನೀಭೂತ ಲೋಹ ಸಂಬಂಧಿತ ಜಡವಸ್ತು. ಇದರ ತೂಕ 5.882x10x1 ಟನ್‌ಗಳಷ್ಟು ; ಸಾಂದ್ರತೆ ನೀರಿಗಿಂತ 5.517ರಷ್ಟು ಹೆಚ್ಚು; ಗಾತ್ರ 1,083, 208, 840,000 ಘನ ಕಿ.ಮೀ. ವಿಶ್ವದ ಆರು ಖಂಡಗಳು. ಅನೇಕ ರಾಷ್ಟ್ರಗಳು, ಸಾಗರ, ಸಮುದ್ರ ಪರ್ವತಗಳಿವೆಯೋ ಅದನ್ನು ಲಿಥೋಸ್ಪಿಯರ್ ಎನ್ನುತ್ತಾರೆ. ಘನೀಭೂತ ಪ್ರದೇಶದಲ್ಲಿ 30ರಿಂದ 50 ಕಿ.ಮೀ.ನಷ್ಟು : ಸಮುದ್ರ, ಸಾಗರ ಗಳಿರುವ ಕಡೆ 6–12 ಕಿ.ಮೀ.ನಷ್ಟು ಆಳವಿರುತ್ತದೆ. ಇಲ್ಲಿಯ ತಾಪಮಾನ 2000 – 5000 ಡಿಗ್ರಿ ಸೆಂಟಿಗ್ರೇಡ್. ಪೃಥ್ವಿಯ ವಿಸ್ತೀರ್ಣ 510,066,100 ಚ.ಕಿ.ಮೀ. ಇದರಲ್ಲಿ ಜಲಮಂಡಲ 70.92 ಶೇಕಡಾ. ಭೂಭಾಗ 29.08 ಶೇಕಡಾ. ಜಲಮಂಡಲದ ಸರಾಸರಿ ಆಳ 3,554 ಮೀಟರ್, ಭೂಮಿಯ ಮೇಲ್ಮೈಯಲ್ಲಿ 5 ಮಹಾಸಾಗರಗಳು, 75,000 ಚ.ಕಿ.ಮೀ. ಗೂ ಹೆಚ್ಚು ವಿಸ್ತೀರ್ಣವಿರುವ 20 ಸಮುದ್ರಗಳೂ, 4,222 ಚ.ಕಿ.ಮೀ.ಗೂ ಹೆಚ್ಚು ವಿಸ್ತೀರ್ಣವಿರುವ 38 ಸರೋವರಗಳು, 1,899 ಕಿ.ಮೀ.ಗೂ ಹೆಚ್ಚು ಉದ್ದವಿರುವ 54 ನದಿಗಳು, 7,660 ಮೀ.ಗೂ ಎತ್ತರವಿರುವ 50 ಪರ್ವತಗಳು, 90 ಮೀ. ಗೂ ಎತ್ತರವಿರುವ 40 ಜಲಪಾತಗಳು, 3,308 ಮೀ.ಗೂ ಅಧಿಕ ಎತ್ತರವಿರುವ 25 ಅಗ್ನಿಪರ್ವತ ಗಳು, 30 ಮಾನವ ನಿರ್ಮಿತ ಬೃಹತ್ ಜಲಾಶಯಗಳೂ ಇವೆ. ಇವುಗಳಲ್ಲದೆ, ವಿಶ್ವದಲ್ಲಿ ಗಣನೆಗೆ ಬಾರದ ನದಿಗಳೂ ಕೆರೆ, ಕಟ್ಟೆ, ಕಾಲುವೆಗಳೂ ಅಸಂಖ್ಯಾತವಾಗಿವೆ.

ಭೂಮಿಯ ಬಿಸಿ ತಣಿಸಲು ನೂರೆಂಟು ಯತ್ನ



ಭೂಮಂಡಲದ ಬಿಸಿ ತಣ್ಣಗಾಗಿಸುವ ನಿಟ್ಟಿನಲ್ಲಿ ಅತ್ಯುತ್ತಮ ಹಾಗೂ ಸಫಲತೆಯನ್ನು ಸಾಬೀತು ಪಡಿಸುವ ಪ್ರಯೋಗಗಳಿಗೆ ವಿಶ್ವದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಏರುತ್ತಿರುವ ಭೂಮಿಯ ತಾಪಮಾನ ಇನ್ನೂ ಏರದಂತೆ ತೆಗೆದುಕೊಳ್ಳಬಹುದಾದ ವೈಯಕ್ತಿಕ, ಸಾಮಾಜಿಕ ಹಾಗೂ ಅಂತರರಾಷ್ಟ್ರೀಯ ನಿಲುವು ನಿರ್ಧಾರಗಳ ಚರ್ಚೆ ನಡೆದಿದೆ. ಇನ್ನೊಂದೆಡೆ ಈ ವಿಷಯವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿ ಹಣ ಮಾಡುವುದು ಹೇಗೆಂಬ ಹವಣಿಕೆ, ಕರಗುತ್ತಿರುವ ಹಿಮಗಲ್ಲುಗಳು, ಬೋಳಾಗುತ್ತಿರುವ ಹಿಮಚ್ಛಾದಿತ ಪರ್ವತಗಳು, ವಲಸೆ ಹೋಗುತ್ತಿರುವ ಪ್ರಾಣಿಗಳು ಹಾಗೂ ಲೆಕ್ಕ ತಪ್ಪಿಸುತ್ತಿರುವ ಮಳೆ, ಚಂಡ ಮಾರುತಗಳು ಭೂಮಂಡಲದ ಬಿಸಿಯ ಭೀಕರತೆಯನ್ನು ಹೆಚ್ಚಿಸುತ್ತಿವೆ. ಇದೇ ವೇಳ ಭೂಮಿಯ ತಾಪಮಾನವನ್ನು ತಗ್ಗಿಸುವ ಪ್ರಯತ್ನದಲ್ಲಿ ಜಗತ್ತಿನಾದ್ಯಂತ ವಿಜ್ಞಾನಿಗಳು ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ಭೂಮಿಯ ವಾತಾವರಣವನ್ನು ಸೇರಿರುವ, ಸೇರುತ್ತಿರುವ ನೀರಿನ ಆವಿ, ಕಾರ್ಬನ್ ಡೈ ಆಕ್ಸೈಡ್, ಮಿಥೇನ್ ಹಾಗೂ ಸಾರಜನಕದ ಆಕ್ಸೈಡ್‌ಗಳು. ಇವುಗಳನ್ನು 'ಹಸಿರು ಮನೆ' ಅನಿಲಗಳು ಎಂದು ಕರೆಯುತ್ತಾರೆ ಈಗ ಭೂಮಿಯನ್ನು ತಣ್ಣಗಾಗಿಸಬೇಕೆಂದರೆ ಈ ಹಸಿರು ಅನಿಲಗಳನ್ನು ವಾತಾವರಣದಲ್ಲಿ ಕಡಿಮೆ ಮಾಡಬೇಕು ಎನ್ನುವುದು ತಜ್ಞರ ಅಭಿಮತವಾಗಿದೆ.

ವಿಶ್ವದ ಶ್ವಾಸಕೋಶಕ್ಕೆ ಬೆಂಕಿ



ಅಮೆಜಾನ್ ಮಳೆಕಾಡುಗಳಿಗೆ ಮನುಷ್ಯನ ಪ್ರವೇಶದಿಂದಾಗಿ ಭೀಕರ ಕಾಳ್ಗಿಚ್ಚು ವಿಶ್ವವನ್ನು ಆತಂಕಕ್ಕೊಡ್ಡಿದೆ. ಏಕೆಂದರೆ ಈ ಕಾಡುಗಳು ಬ್ರೆಜಿಲ್‌ಗೆ ಮಾತ್ರವಲ್ಲ, ಇಡೀ ವಿಶ್ವ ಪರಿಸರವನ್ನು ಸಮತೋಲನದಲ್ಲಿಡಲು ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಮೆಜಾನ್ ವಿಶ್ವದ ಪಾಲಿಗೆ ಶ್ವಾಸಕೋಶವಿದ್ದಂತೆ. ಅದನ್ನು ರಕ್ಷಿಸಲು ವಿಶ್ವ ಸಮುದಾಯ ಬ್ರೆಜಿಲ್ ಮೇಲೆ ಒತ್ತಡ ಹೇರಬೇಕು ಹಾಗು ಬ್ರೆಜಿಲ್‌ನ ಪರಿಸರ ಕಾಳಜಿಯ ಕ್ರಮಗಳಿಗೆ ಇಡೀ ವಿಶ್ವ ಒತ್ತಾಸೆಯಾಗಿ ನಿಲ್ಲಬೇಕಿದೆ. ಅಮೆಜಾನ್ ಕಾಡುಗಳು ಪ್ರಾಕೃತಿಕವಾಗಿ ಬೆಂಕಿ ನಿರೋಧಕ ಶಕ್ತಿಗೆ ಪ್ರಸಿದ್ಧವಾದವು. ಅಲ್ಲಿನ ಸಹಜ ತಂಪು ಹವೆ ಕಿಚ್ಚನ್ನು ತಡೆಗಟ್ಟುವ ಶಕ್ತಿಯನ್ನು ಹೊಂದಿದೆ. ಆದರೆ ಕಾಡಿನಲ್ಲಿ ಮನುಷ್ಯರ ನಡಿಗೆಗಳು ಹೆಚ್ಚಾಗತೊಡಗಿದಂತೆ ಪ್ರಕೃತಿಯ ಗತಿಯೂ ಏರುಪೇರಾಗತೊಡಗಿತು. ಬರಗಾಲಗಳು ಕೂಡ ಕಾಡಿನ ಚಹರೆಯನ್ನು ಬದಲಿಸಿದವು. ಅಭಿವೃದ್ಧಿಯ ಹೆಸರಲ್ಲಿ ಕಾಡಿನ ವಿನಾಶ ಹೆಚ್ಚಾದಂತೆ, ವಿಕೋಪಗಳೂ ಹೆಚ್ಚಾಗುತ್ತಲಿವೆ. 2019ರಲ್ಲಿ 39194 ಬೆಂಕಿಯ ಪ್ರಕರಣಗಳು ವರದಿಯಾಗಿವೆ. "ಪ್ರತಿನಿತ್ಯ" ಕಾಡು ನಾಶವಾಗುವುದನ್ನು ನೋಡುವಾಗ ಅತೀವ ದುಃಖವಾಗುತ್ತದೆ ಎಂದು ಬುಡಕಟ್ಟು ಸಾಹಸಿಗರು, ಕಾಡು ಉಳಿಸಲು ಶತಪ್ರಯತ್ನ ಮಾಡುತ್ತಿದ್ದಾರೆ.

ಕನ್ನಡ ನಾಡಿನ ಸಾಮಾಜಿಕ ಸಾಂಸ್ಕೃತಿಕ ಪುಟಗಳು

ಸಿಮೆಂಟ್ ಶಿಲ್ಪಗಳಲ್ಲಿ ಗಾಂಧೀಜಿ



ಈ ಸಿಮೆಂಟ್ ಶಿಲ್ಪಗಳು ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿವೆ. ಗಾಂಧಿ. ಜೀವನದ ಅಪರೂಪದ ಸನ್ನಿವೇಶಗಳು, ರವೀಂದ್ರನಾಥ ಟ್ಯಾಗೂರರ ಜೊತೆ ಮಾತುಕತೆ, ದಂಡೀಯಾತ್ರೆ, ಚರಕದಲ್ಲಿ ನೂಲುತ್ತಿರುವುದು, ಮಗುವಿನೊಂದಿಗೆ ಆಟ, ಕಸ್ತೂರ್‌ಬಾ ಅವರೊಂದಿಗೆ, ಧ್ಯಾನಮಗ್ನರಾಗಿ ಗಾಂಧಿ, ಅಭಾ ಮತ್ತು ಮನುಬೆನ್ ಜೊತೆಗೆ ಬರುತ್ತಿರುವುದು ಹೀಗೆ ಗಾಂಧೀಜಿ ಅವರನ್ನು ನೆನಪಿಸುವ ಹಲವು ಸಿಮೆಂಟ್ ಶಿಲ್ಪಗಳು ಕಲಾವಿದರ ಕೈಯಲ್ಲಿ ರೂಪುಗೊಂಡಿವೆ.

ಕೆಳದಿಯ ಶಿವಪ್ಪ ನಾಯಕ ಕಾಲದ ಅಳತೆಪಟ್ಟಿ



ಕೆಳದಿಯ ಅರಸರ ಅಳತೆ ಪಟ್ಟಿಯನ್ನು ಈ ಕೆತ್ತನೆಯಲ್ಲಿ ಕಾಣಬಹುದು. ಶಿವಮೊಗ್ಗ ಜಿಲ್ಲೆಯ ಕೆಳದಿಯ ವೀರಭದ್ರ ದೇಗುಲದ ಹೊರಾಂಗಣದ ಪ್ರತೀಕವಾಗಿ ವಾಸ್ತುಪುರುಷನ ಶಿಲ್ಪಕೆತ್ತನೆಯನ್ನಾಧರಿಸಿದೆ. ಕೆಳದಿಯ ಪ್ರಸಿದ್ಧ ಅರಸನಾಗಿದ್ದ ಶಿವಪ್ಪ ನಾಯಕನ ಆಡಳಿತದಲ್ಲಿ ವ್ಯಾಪಾರಿಗಳನ್ನು, ಕುಶಲಕರ್ಮಿಗಳನ್ನು ಆಕರ್ಷಿಸಿ ವ್ಯಾಪಾರ, ವಾಣಿಜ್ಯವನ್ನು ಉತ್ತಮಪಡಿಸಿದ್ದನು. ಸುಧಾರಿತ ಅಳತೆ, ತೆರಿಗೆ ಪದ್ಧತಿಗೆ ಒತ್ತು ಕೊಟ್ಟದ್ದಕ್ಕೆ ನಿದರ್ಶನವಾಗಿದೆ. ಈ ವಾಸ್ತುಪುರುಷನ ಬಲಭಾಗದ ಕಂಬದ ಬಲಪಕ್ಕದಲ್ಲಿ ಅಳತೆ ಪಟ್ಟಿಯ ಕೆತ್ತನೆಯನ್ನು ಕಾಣಬಹುದು.

ಹಂಪಿಯಂಥ ಕಲ್ಲಿನ ರಥ



ಇದು ಹಂಪಿಯ ಕಲ್ಲಿನ ರಥ ಎಂದು ತಿಳಿದರೆ ನಿಮ್ಮ ಊಹೆ ತಪ್ಪು. ಇದು ಮಂಡ್ಯ ಜಿಲ್ಲೆಯ ಕೆ.ಆರ್.ಎಸ್. ಹಿನ್ನೀರಿಗೆ ಹೊಂದಿಕೊಂಡಿರುವ ಹೊಸ ಕನ್ನಂಬಾಡಿಯ ವೇಣುಗೋಪಾಲಸ್ವಾಮಿ ದೇವಸ್ಥಾನದ ಆವರಣದಲ್ಲಿನ ಕಲ್ಲಿನ ರಥ, ಹೊಯ್ಸಳ ಸಂಪ್ರದಾಯದ ಪುರಾತನ ವೇಣುಗೋಪಾಲಸ್ವಾಮಿ ದೇಗುಲ ಕೃಷ್ಣರಾಜಸಾಗರದ ಹಿನ್ನೀರಿನಲ್ಲಿ ಮುಳುಗಡೆಯಾಗಿತ್ತು. ಈ ದೇಗುಲವನ್ನು ಯಥಾವತ್ತಾಗಿ ಈಗಿನ ಸ್ಥಳಕ್ಕೆ ಸ್ಥಳಾಂತರಿಸಿ ಸುತ್ತಲೂ ಶಿಲಾಮಯ ದೇಗುಲದ ಸಂಕೀರ್ಣವನ್ನು ನಿರ್ಮಿಸಿದ ಶ್ರೇಯಸ್ಸು ಖೋಡೆ ಫೌಂಡೇಶನ್‌ಗೆ ಸಲ್ಲುತ್ತದೆ.

ಸಂಗ್ರಹ : ಡಾ. ಪ್ರಶಾಂತ, ವೈ.ಎನ್.ಕೆ

---

112 ವರ್ಷದ ಎಮಿಲಿಯೊ ಫ್ಲೋರ್ಸ್ : ವಿಶ್ವದ ಹಿರಿಯ ವ್ಯಕ್ತಿ




ವಿಶ್ವದ ಹಿರಿಯ ವಯಸ್ಸಿನ ವ್ಯಕ್ತಿಯೆಂಬ ದಾಖಲೆ ಅಮೆರಿಕದ ಪೋರ್ಟೋರಿಕೋ ನಿವಾಸಿ, 112 ವರ್ಷದ ಎಮಿಲಿಯೊ ಫ್ಲೋರ್ಸ್ ಮಾರ್ಕೆಝ್ ಅವರ ಪಾಲಾಗಿದೆ. ಫ್ಲೋರ್ಸ್ ಅವರಿಗೆ 112 ವರ್ಷ, 326 ದಿನಗಳು ತುಂಬಿರುವುದಾಗಿ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ತಿಳಿಸಿದೆ.

ಮಾರ್ಕೆಝ್ ಅವರು ಅಮೆರಿಕಾದ ಕ್ಯಾರೋಲಿನಾ ರಾಜ್ಯದಲ್ಲಿ 1908ರಲ್ಲಿ ಜನಿಸಿದ್ದರು. ಹುಟ್ಟೂರಿನಿಂದ ಕೆಲವೇ ಮೈಲುಗಳ ದೂರದಲ್ಲಿರುವ ಸ್ವಗೃಹದಲ್ಲಿ ಅವರನ್ನು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಪ್ರತಿನಿಧಿಗಳು ಜಗತ್ತಿನ ಅತ್ಯಂತ ಹಿರಿಯ ವ್ಯಕ್ತಿಯೆಂಬ ಪ್ರಮಾಣಪತ್ರವನ್ನು ನೀಡಿದರು. ತನ್ನ ಬಂಧು-ಮಿತ್ರರಿಂದ 'ಡಾನ್ ಮಿಲೋ' ಎಂದೇ ಕರೆಯಲ್ಪಡುವ ಮಾರ್ಕೆಝ್ "ದಯಾಪರತೆ, ಕಾರುಣ್ಯ ಮತ್ತು ಪ್ರೀತಿ, ಗುಣಸ್ವಭಾವಗಳೇ ನನ್ನ ಧೀರ್ಘಾಯುಷ್ಯಕ್ಕೆ ಕಾರಣ" ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಭಾವುಕರಾಗಿ ಹೇಳಿದರು. ಇವರು ಜೀವಮಾನದ ಹೆಚ್ಚಿನ ದಿನಗಳನ್ನು ಕುಟುಂಬದ ಕಬ್ಬಿನ ಗದ್ದೆಯ ಕೆಲಸ ಮಾಡುವುದರಲ್ಲೇ ಕಳೆದರು. ಸುಮಾರು 75 ವರ್ಷಗಳ ದಾಂಪತ್ಯ ಜೀವನ ನಡೆಸಿದ್ದರು.

ಸಂಗ್ರಹ : ಎ.ಎನ್. ತಿಪ್ಪನಗೌಡ


ನಾಡಿನ ಸಾಕ್ಷಿಪ್ರಜ್ಞೆ - ಡಾ. ಎಚ್.ಎಸ್. ದೊರೆಸ್ವಾಮಿ ಅವರಿಗೆ ಚಿತ್ರನಮನ




ಡಾ.ಎಚ್.ಎಸ್.ಡಿ. ಅವರು ಮಂಡೂರು ಕಸ ವಿಲೇವಾರಿ ಹೋರಾಟದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಅವರೊಂದಿಗೆ ಮಾತುಕತೆಯ ಸಂದರ್ಭದಲ್ಲಿ



ಡಾ.ಎಚ್.ಎಸ್.ದೊರೆಸ್ವಾಮಿ ದಂಪತಿಗಳು ಚಿತ್ರ ಸಂಪದ ವೀಕ್ಷಣೆಯಲ್ಲಿ



ಗ್ರಾಮಸೇವಾ ಸಂಘದ, ಖಾದಿ-ಕೈಮಗ್ಗ ಪ್ರಚಾರದ ದಿ.2.10.2020ರಲ್ಲಿನ ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತ ಕೈಮಗ್ಗ ಸಂಘದ ಸಂಚಾಲಕಿ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಹಾಗೂ ದೊರೆಸ್ವಾಮಿ ಅವರಿದ್ದಾರೆ.



ಗಾಂಧಿ ಭವನದಲ್ಲಿ ನಡೆದ ಬಾ-ಬಾಪು 150ರ ಸಮಾರೋಪದಲ್ಲಿ ದಿ. 2.10.2020ರಲ್ಲಿ ಎಚ್.ಎಸ್.ಡಿ. ಅವರು ಮತ್ತು ಗಾಂಧಿ ಭವನದ ಅಧ್ಯಕ್ಷರು, ಡಾ. ವೂಡೇ ಪಿ. ಕೃಷ್ಣ ಮತ್ತೆಲ್ಲರು



ಗಾಂಧಿ ಭವನದಲ್ಲಿ ಡಾ. ಎಚ್.ಎಸ್.ಡಿ ಅವರು ಅಣ್ಣಾ ಹಜಾರೆ, ಡಾ. ಸಂತೋಷ್ ಹೆಗ್ಡೆ, ಸ್ವಾತಂತ್ರ್ಯ ಡಾ. ವಿ. ಪ್ರಶಾಂತ ಅವರೊಂದಿಗಿನ ಸಾಂದರ್ಭಿಕ ಚಿತ್ರ



ಡಾ.ಎಚ್.ಎಸ್.ಡಿ ಅವರು ಗಾಂಧಿ ಭವನದ ಹಿಂದಿನ ಅಧ್ಯಕ್ಷರಾದ ಡಾ. ಹೋ. ಶ್ರೀನಿವಾಸಯ್ಯ, ವಿ.ಎನ್. ತಿಪ್ಪನಗೌಡ ಹಾಗೂ ನರೇಂದ್ರ ಅವರೊಂದಿಗೆ



ದಿ.06.08.2019ರಂದು ಬೆಂಗಳೂರು ವಿಭಾಗದ ಗಾಂಧಿ ವಿಚಾರ ಸಂಸ್ಕಾರ್ ಪರೀಕ್ಷಾ ಘಟಿಕೋತ್ಸವದಲ್ಲಿ ಎಚ್.ಎಸ್.ಡಿ., ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಡಾ. ಅಬೀದಾ ಬೇಗಂ, ಪ್ರೊ. ಬರಗೂರು ರಾಮಚಂದ್ರಪ್ಪ, ವಿ.ಎನ್. ತಿಪ್ಪನಗೌಡ, ಇಂದಿರಾ ಕೃಷ್ಣಪ್ಪ, ಡಾ. ಗಣನಾಥಶೆಟ್ಟಿ ಎಕ್ಕಾರು



ದಿ. 30.11.2018ರಂದು ನಡೆದ ಗಾಂಧಿ ಅಂಗಳದಲ್ಲಿ ಗಾಂಧಿ ಚಿಂತಕರು ಕಾರ್ಯಕ್ರಮದಲ್ಲಿಡಾ.ಎಚ್.ಎಸ್.ದೊರೆಸ್ವಾಮಿ,ಗಾಂ.ಭವನಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಸಂವಾದಕರಾದ ಡಾ. ಬೇಗೂರು ರಮೇಶ್

ಮಾಧ್ಯಮಗಳಲ್ಲಿ ಎಚ್.ಎಸ್. ದೊರೆಸ್ವಾಮಿ

Doreswamy remembered


Artistes from the Bengaluru ... pay their respects to the freedom fighter who taught them the value of right ... protest



With Nagathihalli Chandrashekhar



With Chetan Ahimsa



Kavitha Lankesh

'He was a selfless man'



H S Doreswamy: Gandhian with a twinkle in his eye

Teacher, journalist and freedom fighter, he championed people's causes passionately till his last breath, say prominent Bengalureans

NEVER HANKERED AFTER POWER OR POSITION


CONSCIENCE KEEPER OF KARNATAKA




ದೊರೆಸ್ವಾಮಿ ಸಾತ್ವಿಕ ಸಿಟ್ಟಿಗೆ ಎಷ್ಟೋ ಬಾರಿ ಬೆ...

ನನ್ನದು–ಅವರದು ರಾಜಕೀಯ ಮೀರಿದ ಸಂಬಂಧ | ತಪ್ಪು ಕಂಡಾಗ ನಿರ್ದಾಕ್ಷಿಣ್ಯವಾಗಿ ಎಚ್ಚರಿಸುತ್ತಿದ್ದರು | ಸರಿ ಇದ್ದಾಗ ಬೆಂಡೆಗಲ್ಲಂತ...

ಕೊಡಗಿನಲ್ಲಿ ಭೂಮಾಲೀಕರು ಆದಿವಾಸಿಗಳ ಒಕ್ಕಲೆಬ್ಬಿಸಿದಾಗ ನನ್ನ ವಿರುದ್ಧ ಜಗಳಕ್ಕೆ ನಿಂತಿದ್ದರು | ನಕ್ಸಲರು ಹಿಂಸೆ ತ್ಯಜಿಸುವಲ್ಲಿ ಮಹತ್ವ...




ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ




ಕಡಣಕಲ


ಜನರಿಂದ, ಜನರಿಗಾಗಿ ಬದುಕಿದ ದೊರೆಸ್ವಾಮಿ



ಡಾ. ವೆಂಕಟೇಶ ನಲ್ಲುಕುಂಟೆ



ನ್ಯಾಯ, ನಿಷ್ಠುರತೆಯ ದೊರೆ



ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ನಿಧನ

ಹೃದಯಾಘಾತದಿಂದ ಸಾವು | ಮರಣ ಬಳಿಕ ಸೋಂಕು ಪತ್ತೆ



1918 - 2021

ಸಿದ್ದರಾಮಯ್ಯ

Doreswamy, a tireless fighter for rights


BENGALURU, DHNS

Keeping the conscience of Karnataka till the end and actively taking part in movements against the oppression of people's rights until last year, centenarian freedom fighter and an untiring activist H S Doreswamy was indeed a force to reckon with. Remaining at the forefront of several citizens' struggles, the 103-year-old Gandhian, who died of cardiac arrest on Wednesday in Bengaluru, was close to the hearts of many in Karnataka. Strongly influenced by

Often coming under attack by the ruling leaders, Doreswamy always said, "I do not belong to any political party and my struggle is only for the welfare of the people." Perhaps it was this life of struggle that historian Ramachandra Guha described Doreswamy as the 'conscience of Karnataka'.

Born in Harohalli on the outskirts of Bengaluru, Doreswamy lived much of his life in Mavalli and Jayanagar and saw Bengaluru evolve into a global city from a small town then.

Though Doreswamy, with a degree in science from the



H S Doreswamy
1918-2021

ಶ್ರದ್ಧಾಂಜಲಿ

ಎಂ.ವಿ. ಸುಬ್ಬರಾವ್ (16.04.2021)

ಹಿರಿಯ ಸ್ವಾತಂತ್ರ್ಯ ಹೋರಟಗಾರ ಎಂ.ವಿ. ಸುಬ್ಬರಾವ್ (97) ಅವರು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಮೂಲತಃ ಗೌರಿಬಿದನೂರು ತಾಲೂಕು ಮಂಚೇನಹಳ್ಳಿಯವರಾದ ಸುಬ್ಬರಾವ್ ಅವರು ತಮ್ಮ 23ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಅಪ್ಪಟ ಗಾಂಧೀವಾದಿಯಾಗಿದ್ದ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಗಾಂಧೀ ತತ್ವ, ಸಿದ್ದಾಂತಗಳನ್ನು ಮೈಗೂಡಿಸಿಕೊಂಡು, ಅದರ ಪ್ರಚಾರದಲ್ಲಿಯೂ ಸಕ್ರಿಯರಾಗಿದ್ದರು.

ಕರೆ ರಂಗಜ್ಜ (09.06.2021)



ಹುಳಿಯಾರು ಹೋಬಳಿಯ ತಮ್ಮಡಿ ಹಳ್ಳಿಯ ಸ್ವಾತಂತ್ರ್ಯ ಹೋರಾಟಗಾರ ಕರೆರಂಗಜ್ಜ ಅವರು ಸ್ವಗೃಹದಲ್ಲಿ ವಯೋಸಹಜ ಸಾವನ್ನಪ್ಪಿದ್ದಾರೆ. ಗಾಂಧೀಜಿ ಅವರ ಸರಳ ಜೀವನ, ತತ್ವ ಸಿದ್ಧಾಂತಗಳನ್ನು ಚಾಚೂ ತಪ್ಪದೆ ಪಾಲಿಸಿ ಪ್ರತಿಪಾದಿಸಿದ್ದ ಕರೆರಂಗಜ್ಜ ಅವರು ಅನೇಕ ಚಳುವಳಿಯಲ್ಲಿ ಪಾಲ್ಗೊಂಡಿದ್ದರು.

ಪಂ. ನಾರಾಯಣ ಭಟ್ (04.07.2021)



ಮಹಾತ್ಮ ಗಾಂಧಿ, ವಿನೋಭಾ ಬಾವೆ ಮತ್ತು ಲೋಕನಾಯಕ ಜಯಪ್ರಕಾಶ್ ಅವರ ತತ್ವಾದರ್ಶಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡ ಸಂತ ಹಾಗೂ ನಡೆದಾಡುವ ಗಾಂಧಿ ಎಂದೇ ಹೆಸರಾಗಿದ್ದ ಪಂ. ನಾರಾಯಣ ಭಟ್ ಅವರು 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಹೊಸಪೇಟೆಯ ಸರ್ದಾರ್ ಪಟೇಲ್ ಹೈಸ್ಕೂಲಿನಲ್ಲಿ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸಿದ್ದರು. ತಮ್ಮ ಸ್ವಂತ ಹಣದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಭವನ ನಿರ್ಮಿಸಿ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರು ಸಾಹಿತಿ ಮತ್ತು ವಾಗ್ಮಿಗಳಾಗಿದ್ದರು. ಅವರ ಕರುಣಾ ಪ್ರಕಾಶನದಿಂದ ಹಲವಾರು ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಬಹುಮುಖ ವ್ಯಕ್ತಿತ್ವ ಹೊಂದಿದ್ದ ಅವರು ಸರ್ವಧರ್ಮ ಸಮ್ಮೇಳನವನ್ನು ನಡೆಸಿದ್ದರು.


ಸುಧೀಂದ್ರ ಹಾಲ್ದೊಡ್ಡೇರಿ (01.07.2021)



ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ ಕಾರ್ಯನಿರ್ವಹಿಸಿದ್ದವರೂ, ರಕ್ಷಣಾ ಇಲಾಖೆಯ ವಿಜ್ಞಾನಿ ಹಾಗೂ ಕನ್ನಡದ ಖ್ಯಾತ ವಿಜ್ಞಾನ ಬರಹಗಾರ ಸುಧೀಂದ್ರ ಹಾಲ್ದೊಡ್ಡೇರಿ ಅವರಾಗಿದ್ದಾರೆ. ಬಾಹ್ಯಾಕಾಶ ಕ್ಷೇತ್ರದ ಬಗ್ಗೆ ಅಪಾರ ಒಲವು ಹೊಂದಿದ್ದ ಸುಧೀಂದ್ರ ಅವರು ಅತ್ಯಂತ ಕ್ಲಿಷ್ಟಕರ ವಿಜ್ಞಾನದ ವಿಷಯಗಳನ್ನು ಬಹು ಸರಳವಾಗಿ ಬರೆಯುತ್ತಾ ಕನ್ನಡಿಗರನ್ನು ವಿಚಾರವಂತರನ್ನಾಗಿಸುತ್ತಿದ್ದಾರೆ.

ಏರೋಸ್ಪೇಸ್ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದ ಇವರು ಕೇಂದ್ರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿ.ಆರ್.ಡಿ.ಒ.)ಯಲ್ಲಿ ವಿಜ್ಞಾನಿಯಾಗಿ 33 ವರ್ಷ ಕಾರ್ಯನಿರ್ವಹಿಸಿದ್ದರು. ಈ ಸೇವಾವಧಿಯಲ್ಲಿ ಎಚ್.ಎ.ಎಲ್.ನಲ್ಲಿ ತೇಜಸ್, ಜಾಗ್ವಾರ್, ಕಿರಣ್ ಹಾಗೂ ಚೇತಾ ವಿಮಾನ ಹಾಗೂ ಸೀ ಕಿಂಗ್ ಹೆಲಿಕಾಪ್ಟರ್‌ಗಳ ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸುವ ತಾಂತ್ರಿಕ ಸಮಿತಿಯ ಸದಸ್ಯರಾಗಿದ್ದರು. ರಾಜ್ಯ ಸರ್ಕಾರದ 'ಅತ್ಯುತ್ತಮ ವಿಜ್ಞಾನ ಸಂವಹನಕಾರ' ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಪಾತ್ರರಾಗಿದ್ದರು. ಇವರು ಸ್ವಯಂ ನಿವೃತ್ತಿ ಪಡೆದು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಕನಕ ಮೂರ್ತಿ (15.05.2021)



ಮೈಸೂರಿನ ಟೀ. ನರಸೀಪುರದಲ್ಲಿ 1942ರಲ್ಲಿ ಕನಕ ಅವರು ಜನಿಸಿದ್ದರು. ಮೈಸೂರಿನ ದೇವಾಲಯ ಶಿಲ್ಪದಿಂದ ಆಕರ್ಷಿತರಾದರು. ಮಹಿಳೆಯರು ಶಿಲ್ಪಕಲಾ ಕ್ಷೇತ್ರದಲ್ಲಿ ತೊಡಗಿಕೊಳ್ಳುವುದೇ ಅಪರೂಪವಾಗಿದ್ದ ಕಾಲವದು. ಛಲಬಿಡದ ಇವರು ಗುರು ದೇವಲಕುಂಡ ವಾದಿರಾಜ್ ಅವರಿಂದ ಶಿಲ್ಪಕಲೆಯನ್ನು ಕಲಿತರು ಶಿಲ್ಪಕಲೆಯಲ್ಲಿ ಸಾಧನೆ ಮಾಡುತ್ತಾ ಪ್ರಖ್ಯಾತ ಶಿಲ್ಪಕಲಾಕಾರರಾದರು. ಇವರು ಕೆತ್ತಿದ ಶಿಲ್ಪಕಲಾಕೃತಿಗಳು, ಮೂರ್ತಿಗಳು ಬೆಂಗಳೂರಿನ ಲಾಲ್ ಬಾಗ್ ವೆಸ್ಟ್‌ಗೇಟ್‌ನಲ್ಲಿರುವ ಕುವೆಂಪು ಪ್ರತಿಮೆ ಸೇರಿದಂತೆ, 200ಕ್ಕೂ ಹೆಚ್ಚು ಶಿಲಾಮೂರ್ತಿಗಳು ದೇಶಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಇದಲ್ಲದೆ 'ಶಿಲ್ಪಕಲೆಯ ಕಲೆ' ಕೃತಿಯನ್ನೂ ಮತ್ತು ತಮ್ಮ ಆತ್ಮಚರಿತ್ರೆಯನ್ನು ರಚಿಸಿದ್ದಾರೆ. ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಜಕಣಾಚಾರಿ ಪ್ರಶಸ್ತಿ ಇನ್ನೂ ಮುಂತಾದ ಪ್ರಶಸ್ತಿಗಳು ಪ್ರಧಾನ ಮಾಡಲ್ಪಟ್ಟಿವೆ.

ಶ್ರದ್ಧಾಂಜಲಿ

ಸಿ.ಎಂ. ಉದಾಸಿ (09.06.2021)




ಹಿರಿಯ ರಾಜಕಾರಣಿ ಮಾಜಿ ಸಚಿವ ಸಿ ಎಂ ಉದಾಸಿ ಅವರು ವಯೋಸಹಜ ಅನಾರೋಗ್ಯದ ಕಾರಣ 85ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅವರು ಹಾವೇರಿ ಜಿಲ್ಲೆಯ ಹಾನಗಲ್ ಅಸೆಂಬ್ಲಿ ಕ್ಷೇತ್ರವನ್ನು 9ಬಾರಿ ಪ್ರತಿನಿಧಿಸಿದ್ದರು. 1983ರಲ್ಲಿ ಹಾನಗಲ್‌ನಿಂದ ಪಕ್ಷೇತರ ಶಾಸಕರಾಗಿ ಆಯ್ಕೆಯಾದರು ಮತ್ತು 1985 ರಲ್ಲಿ ಜನತಾ ಪಕ್ಷ, 1999 ರಲ್ಲಿ ಜನತಾದಳ ಮತ್ತು ಜನತಾದಳ (ಯುನೈಟೆಡ್‌ದಿಂದಲೂ) ವಿಧಾನಸಭಾ ಸದಸ್ಯರಾಗಿದ್ದರು. ನಂತರ, ಜೆಡಿಯು (ಯು) ಜೊತೆಗಿದ್ದರು. 2004ರಲ್ಲಿ ಅವರು ಬಿಜೆಪಿಗೆ ಸೇರಿದರು. ಉದಾಸಿ ಅವರು 2008 ರಲ್ಲಿ ಲೋಕೋಪಯೋಗಿ ಸಚಿವರಾಗಿ ಸೇವೆಸಲ್ಲಿಸಿದ್ದರು.

ಎಚ್.ಎಂ. ಮಹೇಶ್ವರಯ್ಯ (13.06.2021)




ಡಾ. ಎಚ್.ಎಂ. ಮಹೇಶ್ವರಯ್ಯ ಅವರು ಶಿವಮೊಗ್ಗ ಜಿಲ್ಲೆಯಲ್ಲಿ 1950 ರಲ್ಲಿ ಜನಿಸಿದವರಾಗಿದ್ದಾರೆ. ಇವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿದ್ದರು. ಇವರು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯಲ್ಲಿ (ಸಿಐಐಎಲ್) ಹಿರಿಯ ಫೆಲೋ ಮತ್ತು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಇವರು ಮೈಸೂರಿನ ಸಿಐಐಎಲ್‌ನಲ್ಲಿ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ (ಸೆಸ್ಕ್) ನಿರ್ದೇಶಕರಾಗಿ, ಡೀನ್ (ಕಲಾ ಬೋಧಕವರ್ಗ), ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಡಾ. ಆರ್.ಸಿ. ಹಿರೇಮಠ್ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೂ ಆಗಿದ್ದರು. ಸಿಂಡಿಕೇಟ್, ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯತ್ವದಂಥಹ ಆಡಳಿತಾತ್ಮಕ ಪಾತ್ರಗಳ ಜೊತೆಗೆ ಉಸ್ತುವಾರಿ ಉಪಕುಲಪತಿ ಮತ್ತು ರಿಜಿಸ್ಟ್ರಾರ್– ಆಗಿ ಸೇವೆ ಸಲ್ಲಿಸಿದ್ದರು.

ಕೆ.ವಿ.ಆರ್. ಠ್ಯಾಗೂರ್ (12.05.2021)



ದಕ್ಷ ಐಪಿಎಸ್ ಅಧಿಕಾರಿ, ಸಾಹಿತ್ಯ ಪ್ರೇಮಿ, ಕೆ.ವಿ.ಆರ್. ಟ್ಯಾಗೂರ್ ಅವರು ಕೊರೋನಾ ಸೋಂಕಿಗೆ ಒಳಗಾಗಿ ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದಾರೆ. ಇವರು ಕರ್ನಾಟಕ ರಾಜ್ಯ ಪೊಲೀಸ್ ಡಿಜಿಪಿ ಹಾಗೂ ವಾರ್ತಾ ಇಲಾಖೆಯ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. 2006ರಲ್ಲಿ ಶ್ರವಣಬೆಳಗೊಳದ ಬಾಹುಬಲಿ ಮಹಾಮಸ್ತಕಾಭಿಷೇಕ ಪ್ರಚಾರದ ಉಸ್ತುವಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದರು.

ಪ್ರೊ. ವಸಂತ ಕುಷ್ಟಗಿ (04.6.2021)



ಕನ್ನಡದ ಹಿರಿಯ ಬರಹಗಾರ, ಕವಿ, ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕಾವ್ಯ ಪ್ರತಿಭೆಯಿಂದ ಮಹತ್ವದ ಕೊಡುಗೆ ನೀಡಿದ ಲೇಖಕರಲ್ಲಿ ಪ್ರೊಫೆಸರ್ ವಸಂತ ಕುಷ್ಟಗಿ ಅವರಾಗಿದ್ದಾರೆ.. ಕಲ್ಬುರ್ಗಿ ಮೂಲದ ಪ್ರೊಫೆಸರ್ ಅವರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಎಂ. ಎ. ಪದವಿ ಪಡೆದು ಉಪನ್ಯಾಸಕರಾಗಿ ವಿವಿಧ ಕಾಲೇಜುಗಳಲ್ಲಿ ಅನೇಕ ಹುದ್ದೆಗಳನ್ನು ನಿರ್ವಹಿಸಿದ್ದರು. ಅವರು ರಚಿಸಿದ ಭಕ್ತಿ ಗೋಪುರ, ಹೊಸ ಹೆಜ್ಜೆ, ಗಾಂಧಾರಿಯ ಕರುಣೆ, ಬೆತ್ತಲೆಯ ಬಾನು, ಚಂದ್ರಲಾ, ಮಾನ್ಯಖೇಟ ಮತ್ತು ಇತ್ತೀಚೆಗಿನ ಅಪ್ಸ್ ಅಂಡ್ ಡೌನ್, ಋತುಚಕ್ರ, ಮುಂತಾದ ಕೃತಿಗಳು ಬಹು ಜನಪ್ರಿಯವಾಗಿವೆ. ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಶಸ್ತಿ, ಸರ್ ಎಂ.ವಿ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಜರಗನಹಳ್ಳಿ ಶಿವಶಂಕರ್ (5.5.2021)




1949ರಲ್ಲಿ ಜರಗನಹಳ್ಳಿಯಲ್ಲಿ ಜನಿಸಿದ ಶಿವಶಂಕರ್ ಅವರು ವಾಣಿಜ್ಯ ಪದವೀಧರರಾಗಿ ಬ್ಯಾಂಕ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು ಹಾಗೂ ಸಾಹಿತ್ಯ ಕೃಷಿಯಲ್ಲಿ ಸಕ್ರಿಯರಾಗಿದ್ದರು. ಸಾವಿರಕ್ಕೂ ಮಿಕ್ಕಿ ಹನಿಗವನಗಳನ್ನು ಬರೆದು ಪ್ರಕಟಿಸಿದ ಹೆಮ್ಮೆ ಇವರದು. 'ಮಳೆ', 'ಆಲಿಕಲ್ಲು', 'ದೇವರ ನೆರಳು' ಮುಂತಾದ ಕವನ ಸಂಕಲನಗಳು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಗಳಾಗಿವೆ. ಇವರ 'ಝರಿ' ಹನಿಗವನ ಸಂಕಲನವು ಅನೇಕ ಭಾಷೆಗಳಲ್ಲಿ ಅನುವಾದಗೊಂಡಿವೆ. ಇವರ ಹನಿಗವನಗಳು ತುಮಕೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪಠ್ಯದಲ್ಲಿ ಸೇರಿವೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ಸುವರ್ಣ ಕರ್ನಾಟಕ ಭೂಷಣ ಇನ್ನೂ ಹತ್ತಾರು ಪ್ರಶಸ್ತಿಗಳು ಸಂದಿವೆ.

ಕೊ.ವೆಂ. ರಾಮಕೃಷ್ಣೇಗೌಡ (03.05.2021)



ಕನ್ನಡ ಪ್ರಾಧ್ಯಾಪಕ, ಗಾಯಕ ಮತ್ತು ಕನ್ನಡ ಸಂಸ್ಕೃತಿ ಚಿಂತಕರಾಗಿ ನಿರಂತರ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡಿದ್ದವರು ಲೇಖಕ ಡಾ. ಕೋ.ವೆಂ ರಾಮಕೃಷ್ಣೇಗೌಡ ಅವರು. ಡಾ. ವಿಜಯಾ (ವ್ಯಕ್ತಿಚಿತ್ರಣ), ಹಾಗೂ ಚಿಗುಳಿ (ಅಂಕಣಗಳ ಬರಹ) ಸೇರಿದಂತೆ ಸುಮಾರು 16 ಕೃತಿಗಳನ್ನು ರಚಿಸಿದ್ದಾರೆ. 40ಕ್ಕೂ ಅಧಿಕ ಸಾಹಿತ್ಯ ಕೃತಿಗಳನ್ನೂ ಹಾಗೂ ಬಸವ ಕಾವ್ಯ ಸಂಪುಟವನ್ನೂ ಪ್ರಕಟಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಾಗೂ ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕಸಾಪ ಆಡಳಿತ ಮಂಡಳಿಯ ಅವಧಿ 5 ವರ್ಷಕ್ಕೆ ವಿಸ್ತರಣೆಯಾಗುವುದನ್ನು ವಿರೋಧಿಸಿ ಅವರು ನ್ಯಾಯಾಲಯದಲ್ಲಿ ನಿರಂತರ ಹೋರಾಟ ಮಾಡಿದ್ದರು. ಇವರಿಗೆ ಕೆಂಪೇಗೌಡ ಪ್ರಶಸ್ತಿ, ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ಉತ್ತಮ ಉಪನ್ಯಾಸಕ ಪ್ರಶಸ್ತಿ, ಕನ್ನಡ ಭೂಷಣ ಹೀಗೆ ಹಲವಾರು ಪ್ರಶಸ್ತಿಗಳು ಸಂದಿವೆ.

ದಿಲೀಪ್ ಕುಮಾರ್ (1922 – 2021)



ಹಿಂದಿ ಚಲನ ಚಿತ್ರರಂಗದ ಪ್ರಖ್ಯಾತ ಕಲಾವಿದರಾದ ದಿಲೀಪ್‌ಕುಮಾರ್ ಇಂದಿನ ಪಾಕಿಸ್ತಾನದ ಪೇಶಾವರದ ಕಿಸ್ಸಾಖ್ವಾನಿ ಬಜಾರಿನ ಮೊಹಲ್ಲಾದಲ್ಲಿ 1922ರ ಜುಲೈ 6 ರಂದು ಜನಿಸಿದರು. ಸುಮಾರು 62 ಚಿತ್ರಗಳಲ್ಲಿ ಅಭಿನಯಿಸಿದ್ದ ಇವರು ಪ್ರೇಮರಸ ಮತ್ತು ಶೋಕರಸ ಪ್ರಧಾನ ಭೂಮಿಕೆಗಳಲ್ಲಿ ಪ್ರಸಿದ್ಧರಾದ ಕಾರಣ ಅವರನ್ನು ರೊಮ್ಯಾಂಟಿಕ್ ಹೀರೋ ಮತ್ತು ದುರಂತ ನಾಯಕನೆಂದೂ ಕರೆಯುತ್ತಾರೆ. ಅನೇಕ ಪ್ರಶಸ್ತಿಗಳಿಂದ ಸನ್ಮಾನಿತರಾದ ಇವರು, ಭಾರತೀಯ ಚಲನಚಿತ್ರ ರಂಗದ ಸರ್ವೋಚ್ಚ ಸನ್ಮಾನವಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಇವರು ರಾಜ್ಯಸಭೆಯ ಸದಸ್ಯರಾಗಿದ್ದರು. ಪ್ರಖ್ಯಾತ ನಿರ್ಮಾಪಕರು, ಬಾಂಬೇ ಟಾಕೀಸ್ ಸ್ಟುಡಿಯೊ ಮಾಲೀಕರಾಗಿದ್ದ ಹಿಮಾಂಶು ರಾಯ್ ಅವರ ಪತ್ನಿ ದೇವಿಕಾ ರಾಣಿಯವರು ಯೂಸೂಫ್ ಆಲಂ ಖಾನ್‌ನೆಂಬ ಸುಂದರ ಪುರುಷನನ್ನು ಹಿಂದಿ ಚಿತ್ರರಂಗಕ್ಕೆ ಕರೆತಂದು, ದಿಲೀಪ್‌ಕುಮಾರ್ ಎಂದು ಹೆಸರಿಟ್ಟು 'ಜ್ವಾರ್ ಬಾಟ' (1944) ಚಿತ್ರದ ಮೂಲಕ ನಾಯಕ ನಟನನ್ನಾಗಿಸಿದರು. ಇವರ 'ಮುಘಲ್ ಎ ಆಜಮ್' ಆಗಿನ ಕಾಲದ ಶ್ರೀಮಂತ ಚಿತ್ರವಾಗಿದ್ದು, ಅಪಾರ ಜನಮನ್ನಣೆ ಗಳಿಸಿತ್ತು. ದಿಲೀಪ್ ಕುಮಾರ್ ಸುಸಂಸ್ಕೃತ ವ್ಯಕ್ತಿ, ಎಲ್ಲರೊಡನೆಯೂ ಅತ್ಯಂತ ಗೌರವದಿಂದ ವರ್ತಿಸುವ ಗುಣವುಳ್ಳವರಾಗಿದ್ದರು. ಅವರ ಅಭಿನಯಕ್ಕೆ ಎಂಟು ಬಾರಿ ಫಿಲ್ಮ್ ಫೇರ್ ಪ್ರಶಸ್ತಿ, ಫಿಲ್ಮ್ ಫೇರ್ ಲೈಫ್ ಟೈಮ್ ಅಚೀವ್‌ಮೆಂಟ್ ಪ್ರಶಸ್ತಿ, ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿಗಳು ಸಂದಿವೆ. ಭಾರತೀಯ ಚಿತ್ರರಂಗದ ಶ್ರೇಷ್ಠ ನಿರ್ದೇಶಕರಾದ ಸತ್ಯಜಿತ್ ರೇ ಅವರು "ವೈಧಾನಿಕ ನಟನೆಯ ಮೇರು ಶಿಖರ ತಲುಪಿದ ಏಕೈಕ ವ್ಯಕ್ತಿ ದಿಲೀಪ್ ಕುಮಾರ್" ಎಂದಿದ್ದಾರೆ. ಇವರು 'ಗಂಗಾ ಜಮುನ', 'ಹಾಥಿ ಮೇರಾ ಸಾಥಿ', 'ರಾಮ್ ಔರ್ ಶ್ಯಾಮ್', 'ಕ್ರಾಂತಿ', 'ಶೋಲೆ', 'ಸೌಧಾಗರ್' ಇನ್ನೂ ಅನೇಕ ಅತ್ಯುತ್ತಮ ಚಿತ್ರಗಳಲ್ಲಿ ಅಪೂರ್ವ ಅಭಿನಯದಿಂದ ಪ್ರೇಕ್ಷಕರ ಮನದಾಳದಲ್ಲಿ ನೆಲೆಸಿದ್ದಾರೆ.

ರಾಮು (26.04.2021)



ಕನ್ನಡ ಚಲನಚಿತ್ರರಂಗದಲ್ಲಿ ಕೋಟಿ ನಿರ್ಮಾಪಕರೆಂದೇ ಖ್ಯಾತರಾಗಿದ್ದ ರಾಮು ಅವರು ಕೊರೋನ ಸೋಂಕಿಗೆ ಒಳಗಾಗಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಸುಮಾರು 3 ದಶಕಗಳಿಂದ ಸಿನಿಮಾ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಅವರು 30ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದಾರೆ. ರಾಮು ಅವರು 1993 ರಲ್ಲಿ 'ಗೋಲಿಬಾರ್' ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರ ಸಂಸ್ಥೆಯಡಿಯಲ್ಲಿ ಎಕೆ 47, ಚಾಮುಂಡಿ, ಕಿಚ್ಚಾ, ಕಲಾಸಿಪಾಳ್ಯ ಇನ್ನು ಮುಂತಾದ ಯಶಸ್ವಿ ಚಿತ್ರಗಳನ್ನು ನೀಡಿದ್ದಾರೆ. ಕನ್ನಡ ಚಲನಚಿತ್ರೋದ್ಯಮದಲ್ಲಿ ಸರಳ ಮತ್ತು ಮೃದು ಭಾಷಿಗಳಲ್ಲಿ ಇವರು ಒಬ್ಬರಾಗಿದ್ದರು.

ಸಂಚಾರಿ ವಿಜಯ್ (15.06.2021)



ಕನ್ನಡ ಚಲನಚಿತ್ರ ಮತ್ತು ರಂಗಭೂಮಿಯಲ್ಲಿ'ಸಂಚಾರಿ ವಿಜಯ್' ಎಂದೇ ಪ್ರಖ್ಯಾತರಾಗಿರುವ ವಿಜಯ್ 'ಸಂಚಾರಿ' ಹೆಸರಿನ ನಾಟಕ ತಂಡದ ಸದಸ್ಯರಲ್ಲೊಬ್ಬರು. ಚಿಕ್ಕಮಗಳೂರಿನ ಕಲಾವಿದರ ಕುಟುಂಬದ ಕೂಸು ಇವರು. ಬಾಲ್ಯದಿಂದಲೇ ರಂಗಭೂಮಿ ಹಾಗೂ ಚಿತ್ರಕಲೆಯಲ್ಲಿ ತೊಡಗಿಸಿಕೊಂಡಿದ್ದರು. ಬೆಂಗಳೂರಿನ ಬಿಎಂಎಸ್ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ಪದವಿ ನಂತರ ಕೆಲಕಾಲ ಕೆಐಇಟಿ ಶಿಕ್ಷಣ ಸಂಸ್ಥೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಇವರ ರಂಗಭೂಮಿ ಆಶಯದಿಂದ ಕೆಲಸಕ್ಕೆ ವಿದಾಯ ಹೇಳಿ ಸಂಪೂರ್ಣವಾಗಿ ರಂಗ ಕಲಾವಿದರಾದರು. ಹತ್ತು ವರ್ಷಗಳ ಕಾಲ ಸಂಚಾರಿ ಥಿಯೇಟರ್ ರಂಗತಂಡದ ನಾಟಕಗಳಲ್ಲಿ ಅಭಿನಯಿಸುವುದರ ಜೊತೆಗೆ ಕನ್ನಡದ ಹಲವಾರು ರಂಗತಂಡಗಳಲ್ಲಿಯೂ ನಟಿಸಿದ್ದಾರೆ. ರಂಗಭೂಮಿ ಕಲಾವಿದರು ಮಾತ್ರವಾಗಿರದೆ ನಾಟಕಗಳನ್ನೂ ನಿರ್ದೇಶಿಸಿದ್ದಾರೆ. ಇವರು ನಟಿಸಿದ "ನಾನು ಅವನಲ್ಲ...ಅವಳು" ಚಿತ್ರಕ್ಕೆ ಅತ್ಯುತ್ತಮ ನಟ ಪ್ರಶಸ್ತಿಯು 62ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಪ್ರಧಾನ ಮಾಡಲಾಗಿದೆ.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

All remaining materials and equipment used in the live Lassa virus research were incinerated or thoroughly sterilized. Any worker in any part of the laboratory was to report the first sign of any illness, regardless of how minor or trivial. Bulletins were sent from the labora tory to medical and public health Medicals throughout the world. No new specimens that were suspected of harbouring Lassa virus would be accepted at Yale.

A SLIPPED SCALPEL : ON Christmas Day, the Christians in the village of Bassa, 32 km from Jos, prepared a parade featuring drums and chanting. Tamalama Sale looked forward to seeing it, but that morning she was burning with a fever and had to remain in bed. Soon she was very ill, and on December 30 her family took her to the hospital at Jos, with her infant son and three-year-old daughter. Her brother registered her under a fictitious name and village, for it is a long-standing superstition among the plateau tribes that the evil spirits of disease cannot then follow the cured patient home and plague him again. Tamalama Sale remained in the hospital for ten days. There were times when it seemed as if she would not survive, but eventually she pulled through and returned to Bassa. Within three days, her mother and both her children came down with a searing fever. The mother and the baby boy gradually recovered. Her three-year-old daughter died.

Shortly after Tamalama was dismissed from the hospital, two other Nigerian women developed symptoms similar to hers. Within four days, one of them was dead. Then three more patients were admitted with high fevers. Dr Jeanette and Hal White, the calm, quiet doctor who headed the medical assistants' school affiliated with the hospital, hesitated to discuss their fears. They simply could not believe that Lassa fever had returned. Yet the new cases could not be diagnosed as yellow fever, or any of the conventional diseases, and the symptoms were strikingly like those that had afflicted the three mission nurses almost exactly a year before. Leaving nothing to chance, they drew serum specimens to send to the University of Ibadan for analysis.

Several more Nigerians were in hospital There had now accumulated, with alarming suddenness, a total of 12 suspicious cases; four of them were members of the hospital staff. On Sunday, January 25, two of the staff members died. The news of the second death was announced during the middle of a Bible-study meeting. For a moment there was a stunned silence. Then Dr Jeanette, whose composure in crisis after crisis during the terrible yellow fever epidemic had been so constant, burst into tears and wept openly. Later, she performed the autopsy on the body of Maigari, who had been a male scrub nurse.

To be continued...

ರುಕ್ಮಿಣಿದೇವಿ ಅರುಂಡೇಲ್ : (29.02.1904–24.02.1986)

ಪ್ರೊ. ಲೀಲಾ ವಾಸುದೇವ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಮೊರಾರ್ಜಿ ದೇಸಾಯಿ ಅವರು 1977ರಲ್ಲಿ ರುಕ್ಮಿಣಿ ದೇವಿ ಅರುಂಡೇಲ್ ಅವರನ್ನು ಭಾರತದ ರಾಷ್ಟ್ರಪತಿ ಸ್ಥಾನಕ್ಕೆ ನಾಮಕರಣ ಮಾಡಲು ಅನುವಾದರು. ಆದರೆ ತಮ್ಮ ಸರ್ವಸ್ವವನ್ನು ಧಾರೆ ಎರೆದು ಸ್ಥಾಪನೆ ಮಾಡಿರುವ ಕಲಾಕ್ಷೇತ್ರವೇ ಅವರಿಗೆ ಮುಖ್ಯವಾಗಿದ್ದರಿಂದ. ಭರತನಾಟ್ಯದ ಪುನರುದ್ಧಾರಕ್ಕಾಗಿ ಪಣತೊಟ್ಟ ರುಕ್ಮಿಣೀದೇವಿ ಅವರು ರಾಷ್ಟ್ರಪತಿ ಸ್ಥಾನವನ್ನು ನಿರಾಕರಿಸಿದರು. 1986ರಲ್ಲಿ ಫೆಬ್ರವರಿ 24ರಂದು ವಯೋವೃದ್ಧರಾದ ರುಕ್ಮಿಣಿದೇವಿ ಅವರು ಕೀರ್ತಿ ಶೇಷರಾದರು. 1987ರಲ್ಲಿ ಅವರ ಕುರಿತಾಗಿ 60 ಪೈಸೆಯ ಅಂಚೆ ಚೀಟಿ ಬಿಡುಗಡೆ ಆಯಿತು.

ಸಂಘ ಸಂಸ್ಥೆ, ಸಮಿತಿಗಳ ಕಾರ್ಯಗಳು

ಭಾರತ ಸಂಸತ್ತಿನ ರಾಜ್ಯಗಳ ಸಮಿತಿಯ ಸದಸ್ಯರಾಗಿದ್ದರು.

1952 ರಿಂದ 1956 ರವರೆಗೆ ರಾಜ್ಯಸಭೆಗೆ ನಾಮನಿರ್ದೇಶಿತ ಸದಸ್ಯರಾಗಿದ್ದರು.

1960ರಲ್ಲಿ ಪ್ರಾಣಿಗಳ ಮೇಲೆ ಕ್ರೌರ್ಯ ಪ್ರತಿಬಂಧಕ ಕಾಯಿದೆ ಜಾರಿಗೆ ಕಾರಣಕರ್ತರಾದರು.

1962ರಲ್ಲಿ ಪ್ರಾಣಿಗಳ ಸಂರಕ್ಷಣ ಮಂಡಳಿಯನ್ನು ಸ್ಥಾಪಿಸಿದರು.

1978 ರಲ್ಲಿ ಭಾರತೀಯ ಕರಕುಶಲತೆಯ 'ಕುಲಾಂತರಿ ಕೇಂದ್ರ' ಎಂದು (ಬಟ್ಟೆಯ ಮೇಲಿನ ಮುದ್ರಣವನ್ನು) ಪ್ರಾರಂಭಿಸಿದರು.

1986ರವರೆಗೆ ಪ್ರಾಣಿಗಳ ಸಂರಕ್ಷಣಾ ಮಂಡಳಿಯ ಅಧ್ಯಕ್ಷೆ

1955 ರಿಂದ 1986ರವರೆಗೆ 31 ವರ್ಷಗಳು ಅಂತರರಾಷ್ಟ್ರೀಯ ಸಸ್ಯಾಹಾರಿಗಳ ಒಕ್ಕೂಟದ ಉಪಾಧ್ಯಕ್ಷರಾಗಿ ಸೇವೆ.

ಪ್ರಧಾನ ಮಾಡಲಾದ ಪ್ರಶಸ್ತಿಗಳು ಮತ್ತು ಗೌರವಗಳು

1956 ಪದ್ಮಭೂಷಣ

1957 ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ

1967 ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್

1968 ಪ್ರಾಣಿ ಮಿತ್ರ, (Animal Welfare Board of India)
ರಾಣಿ ವಿಕ್ಟೋರಿಯ ಬೆಳ್ಳಿ ಪದಕ (Royal Society, London)

1972 ದೇಶಿಕೊತ್ರಮ ಪ್ರಶಸ್ತಿ (Viswabharathi University)

1984 ಮಧ್ಯಪ್ರದೇಶ ಸರ್ಕಾರದ ಕಾಳಿದಾಸ ಸಮ್ಮಾನ್
ಹೇಗ್ ಗೌರವ ಪ್ರಶಸ್ತಿ – ಅಮೇರಿಕಾದಿಂದ
ಗೌರವ ಡಾಕ್ಟರೇಟ್ – ಲಾಸ್ ಏಂಜಲೀಸ್‌ನಿಂದ ಸ್ಕೂಲ್ ಆಫ್ ಆನರ್ಸ್

Chronology of events of personal & Public life of Kasturba Gandhi

(year wise - from 1869)

1869-Kasturba Kapadia was born in April at Porbandar

1876-Married to Mohandas Karamchand Gandhi

1888- Gandhi leaves to England to study law, Kasturba agrees to mortgage her jewellery unhesitatingly

1896- December, Kasturba Gandhi leaves for South Africa along with family.

1897-Mohandas Gandhi is attacked by a mob. Kasturba realises how prominent her husband has become in South Africa.

1904 March, Outbreak of bubonic plague in the Indian settlement of Johannesburg. Kasturba joins the relief works.

1909- March 11, Kasturba Gandhi sent a message to Indian women's meeting Johanesburg: "Had I wings I would fly to the meeting." A letter is published in the press signed by Kasturba and four other women.

1915-May 25, Gandhi's ashram in Kochrab, Gujarat with Kasturba.

1916-M.K. Gandhi starts travelling throughout India and Kasturba travels along with him whenever possible.

1917-Kasturba joins M.K. Gandhi in Champaranya and works with farmers' wives and daughters. She is involved in a district-wide sanitation campaign.

1920-Kasturba taken in charge of the Sabarmati ashram and learns spinning and weaving.

1921-M.K Gandhi presides over a bonfire of foreign cloth in Bombay. willingly burns her favourite sari, made of foreign cloth.

To be continued...


Collection by : Akila Vidyasandra

ಪುಸ್ತಕ ಪರಿಚಯ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ),

ಸತ್ಯಾಗ್ರಹಿ ದಂಪತಿಗಳು

ಕೃತಿಕಾರರು : ಹಾ.ವೀ. ಮಂಜುಳಾ ಶಿವಾನಂದ



ಪ್ರಸ್ತುತ ಪರಿಚಯಿಸುತ್ತಿರುವುದು 'ಸತ್ಯಾಗ್ರಹಿ ದಂಪತಿಗಳು' ಕೃತಿಯನ್ನು. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡು ಅಪೂರ್ವ ದಂಪತಿಗಳಾದ ಶ್ರೀ ಕೆ.ಎ. ವೆಂಕಟರಾಮಯ್ಯ ಮತ್ತು ಅವರ ಪತ್ನಿ ಶ್ರೀಮತಿ ಗೌರಮ್ಮ ಅವರ ಜೀವನಗಾಥೆಯನ್ನು ಪರಿಚಯಿಸುವುದೇ ಆಗಿದೆ. ಹಾ.ವಿ. ಮಂಜುಳಾ ಶಿವಾನಂದ ಅವರುಹತ್ತಾರು ಕೃತಿಗಳನ್ನು ಅಧ್ಯಯನ ಮಾಡಿ, ಅಂದಿನ ಘಟನೆಗಳನ್ನು ಸಂಬಂಧಪಟ್ಟವರಿಂದ ಕೇಳಿ, ಅತ್ಯಂತ ಆಪ್ತವಾಗಿ ಈ ಮಹಾನ್ ವ್ಯಕ್ತಿಗಳನ್ನು ವರ್ತಮಾನಕ್ಕೆ ತಲುಪಿಸಿದ್ದಾರೆ. ಮರೆತೇ ಹೋಗಿರುವ ದೇಶಭಕ್ತರೊಬ್ಬರನ್ನು ನೆನಪು ಮಾಡಿಕೊಡುವ ಪ್ರಯತ್ನದಲ್ಲಿ ಮಂಜುಳಾ ಅವರು ಯಶಸ್ವಿಯಾಗಿದ್ದಾರೆ.

ಸ್ವಾತಂತ್ರ್ಯವು ಇಂದು ಸ್ವೇಚ್ಛಾಚಾರವಾಗಿರುವ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿ ಅವರ ಕರೆಗೆ ಓಗೊಟ್ಟು ದೇಶಭಕ್ತಿ, ದೇಶಾಭಿಮಾನದಿಂದ ಸ್ವದೇಶೀ ಚಳವಳಿಯಲ್ಲಿ ಭಾಗವಹಿಸಿ ತಮ್ಮ ಇಡೀ ಕುಟುಂಬ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡ ಪರಿ ಅಸಾಧಾರಣವಾದದ್ದು. ಗಾಯಕರಾಗಿ, ಹಿರಿಯ ಲೇಖಕಿಯಾಗಿ ಗಾಂಧೀನಗರ ವಿಧಾನಸಭಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಕ್ರಿಯಾಶೀಲರಾಗಿರುವ ಶ್ರೀಮತಿ ಹಾ.ವೀ. ಮಂಜುಳ ಶಿವಾನಂದ ಅವರು ಮಹನೀಯ ಚಾರಿತ್ರಿಕರಾದ ದಾಖಲಾರ್ಹ ಕೃತಿಯನ್ನು ಸಾರಸ್ವತ ಲೋಕಕ್ಕೆ ಕರೋನಾ ಸಂದರ್ಭದಲ್ಲಿ ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು. ಕೃತಿಗೆ ಗಾಂಧಿ ಭವನದ ಅಧ್ಯಕ್ಷರೂ, ಸಂಸ್ಕೃತಿ ಚಿಂತಕರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಸುಂದರ ಮುನ್ನುಡಿ ಈ ಕೃತಿಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಕಲಾವಿದ ಪುಂಡಲೀಕ ಕಲ್ಲಿಗನೂರರ ಸುಂದರ ಮುಖಪುಟ ಮತ್ತು ಕೃತಿಯ ಲೇಖನಕ್ಕೆ ಪೂರಕವಾದ ಚಿತ್ರಗಳ ನೀಡಿರುವುದು ಗ್ರಂಥದ ಮೌಲ್ಯ ಮತ್ತಷ್ಟು ಹೆಚ್ಚಾಗಿದೆ. ಸಾಹಿತಿಗಳು, ಪ್ರಕಾಶಕರಾದ ಶ್ರೀಮತಿ ಮಂಜುಳಾ ಶಿವಾನಂದ್ ಅವರಿಗೆ ಧನ್ಯವಾದಗಳು.

ಕೋವಿಡ್ ವೀರಬಾಹು

– ಅಖಿಲಾ ವಿದ್ಯಾಸಂದ್ರ



ಕೋವಿಡ್–19ರ ಕಾರಣದಿಂದ ನಿಧನರಾಗಿ ಅನಾಥರಾದವರ ಅಂತ್ಯಸಂಸ್ಕಾರಕ್ಕೆ ಕುಟುಂಬಸ್ಥರು ಹಿಂಜರಿದಾಗ ಬಂಧು ಮಿತ್ರನಂತೆ ಅಂತಿಮ ವಿಧಿವಿಧಾನಗಳನ್ನು ನಡೆಸಿದ ಸಂಸ್ಕಾರವಂಥನೇ ಮೈಸೂರಿನ ಅಯೂಬ್ ಅಹ್ಮದ್ ಅವರಾಗಿದ್ದಾರೆ. ಕೊರೋನಾದಿಂದ ಅನಾಥವಾದ 10 ಸಾವಿರ ಶವಗಳನ್ನು ಸಾಗಿಸಿರುವ ಅಯೂಬ್, ಕೆರೆ ಕಟ್ಟೆ ಕಾಲುವೆಗಳಲ್ಲಿ ಬಿದ್ದು ಕೊಳೆತು ನಾರುತ್ತಿರುವ ಅಪರಿಚಿತ ಹೆಣ, ಅಪಘಾತದಿಂದ ಸತ್ತವರು ವಾರಸುದಾರರಿಲ್ಲದ ವ್ಯಕ್ತಿಗಳ ರಕ್ತಸಿಕ್ತ ದೇಹಗಳನ್ನು, ಬೀದಿಯಲ್ಲಿ ಬಿದ್ದು ಶವವಾಗುವ ಅನಾಥರನ್ನು, ಸಾಗಿಸಿ ಅಂತ್ಯಸಂಸ್ಕಾರ ಮಾಡುತ್ತಿರುವ ಅಹ್ಮದ್ ಅವರು ವೀರಭಾಹುವನ್ನು ನೆನಪಿಸುತ್ತಿದ್ದಾರೆ. ಕೋವಿಡ್ ನಿಂದ ಮೃತರಾದವರ ಮುಖ ನೋಡಲು ನೀಚ ಬಂಧುಗಳೇ ಅಂತ್ಯ ಸಂಸ್ಕಾರ ಸ್ಥಳಕ್ಕೆ ಬರಲು ಹಿಂಜರಿದಾಗ ಮಾನವೀಯತೆಯ ಪರಮ ನಿದರ್ಶನರಾಗಿದ್ದಾರೆ. ಹೆಣ ಎತ್ತಿ ಅಂತ್ಯ ಸಂಸ್ಕಾರ ಮಾಡಿ ಮಾನವೀಯತೆ ಮೆರೆದಿದ್ದಾರೆ. 21 ವರ್ಷಗಳಿಂದ ತನ್ನದೇ ಕರ್ತವ್ಯೆಂಬಂತೆ ಪರಿಗಣಿಸಿ ಶವ ಸಂಸ್ಕಾರ ಕಾರ್ಯದಲ್ಲಿ ತೊಡಗಿರುವ ಇವರಿಗೆ ಮೈಸೂರು ಜಿಲ್ಲಾಡಳಿತವು 2020ರ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಗೌರವಿಸಿದೆ.



ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಏಪ್ರಿಲ್ ತಿಂಗಳ ಬಾಪು ಪ್ರಪಂಚ ಒಂದು ಪರಿಪೂರ್ಣ ಸಂಚಿಕೆಯಾಗಿ, ವಿಶಿಷ್ಟ ವಸ್ತು–ವಿಷಯಗಳೊಂದಿಗೆ, ಮಹಾನ್ ವ್ಯಕ್ತಿಗಳ ಪರಿಚಯ, ಅವರ ತತ್ವ, ಸಿದ್ದಾಂತಗಳು, ಅವರು ನಡೆದು ಬಂದ ಹಾದಿಯ ಕುರಿತಾದ ಲೇಖನಗಳು ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶಕವಾಗಿದೆ. ಈ ಪ್ರಕಟಣೆಯಿಂದಾಗಿ ಓದಿನ ಹಸಿವು ಹೆಚ್ಚಾಗುವುದೆಂದು ನನ್ನ ಅನಿಸಿಕೆ, ಧನ್ಯವಾದಗಳು.

ಡಾ. ವಿ.ಎಸ್. ಪಾರ್ವತಿ

ಗಾಂಧಿ ಭವನದ ಬಾಪು ಪ್ರಪಂಚ ಪತ್ರಿಕೆಯಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಎಂಬ ಶೀರ್ಷಿಕೆಯಲ್ಲಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರು ಡಾ. ಲಕ್ಷ್ಮೀದೇವಿ, ಪದ್ಮಾವತಿಬಾಯಿ, ಸುಂದರಮ್ಮ ವನಜಾಬಾಯಿ ಹೀಗೆ ಮುಖ್ಯ ವಾಹಿನಿಯಲ್ಲಿ ತಿಳಿಯದ ಅನೇಕ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಚಯ ಮಾಡಿಕೊಟ್ಟಿರುವುದಕ್ಕೆ ಅಭಿನಂದನೆಗಳು.

ಸಿ. ಹೇಮಾವತಿ, ಖಾಜನೆ ಇಲಾಖೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಪ್ರಕಟಗೊಳ್ಳುತ್ತಿರುವ 'ಬಾಪು ಪ್ರಪಂಚ' ಮಾಸಿಕ ಪತ್ರಿಕೆಯು ಕರೋನ ಸಂಕಟದಲ್ಲಿಯೂ ಬಹು ಸುಂದರವಾಗಿ ಹತ್ತು ಹಲವು ವೈವಿಧ್ಯಗಳನ್ನು ಹೊತ್ತು ಬಂದಿದೆ. ಆಕಾಶವಾಣಿಯ ಅಧಿಕಾರಿಗಳಾಗಿರುವ ಸುಮಂಗಲ ಎಸ್. ಮುಮ್ಮಿಗಟ್ಟಿ ಅವರ 'ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು' ಉಪನ್ಯಾಸ ಮಾಲಿಕೆಯ ವೈಜ್ಞಾನಿಕ ಚಿಂತನಾ ಕ್ರಮವನ್ನು ಬಿಂಬಿಸುತ್ತದೆ. ಗಾಂಧಿ ಶಾಂತಿ ಪ್ರತಿಷ್ಠಾನದ ದತ್ತಿ ಉಪನ್ಯಾಸ ಮಾಡಿದ್ದನ್ನು ಪತ್ರಿಕೆಯ ಓದುಗರಿಗೆ ಬರಹ ರೂಪದಲ್ಲಿ ಪ್ರಕಟಿಸಿದ್ದು ಶ್ಲಾಘನೀಯ ಸಂಗತಿಯಾಗಿದೆ. ಇದಕ್ಕಾಗಿ ಲೇಖಕರಿಗೆ ಹಾಗೂ ಗಾಂಧಿ ಭವನದವರಿಗೆ ವಂದನೆಗಳು.

ಉಷಾ. ವಿ. ಗೌಡ, ಚಲ್ಲಹಳ್ಳಿ

ಏಪ್ರಿಲ್‌ನ ಬಾಪು ಪ್ರಪಂಚ ಸಂಚಿಕೆ ಸಮಾಜ – ಸಾಹಿತ್ಯ – ಸಿನಿಮಾ – ವಿಜ್ಞಾನಕ್ಕೆ ಸೇವೆ ಸಲ್ಲಿಸಿರುವ ಪುಣ್ಯಪುರುಷರುಗಳಾದ ಡಾ. ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನರಾಂ, ಗೋಪಾಲಕೃಷ್ಣ ಅಡಿಗರು, ಡಾ. ರಾಜಕುಮಾರ್, ಅವರ ಬಗೆಗಿನ ಮುಖಪುಟ ಶುಭಾಶಯಗಳು.

ವಸಂತಕುಮಾರ್, ಚನ್ನಪಟ್ಟಣ

ಸಮಾಜವಾದದ ಚಿಂತನೆಯಲ್ಲಿ ಗಾಂಧೀ ದೃಷ್ಟಿಕೋನವನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ತಮ್ಮ ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆಯಿಂದ ಆಯ್ದ ಭಾಗಗಳನ್ನು ಪ್ರಕಟಿಸಿ ಸಹೃದಯರಿಗೆ ಉಣಬಡಿಸುತ್ತಿರುವ ಸಂಪಾದಕೀಯ ಬಳಗಕ್ಕೆ ವಂದನೆಗಳು.

ಡಾ. ಚೌಡಪ್ಪ, ಉಪನ್ಯಾಸಕರು

ಪಂಡಿತ್ ರವಿಶಂಕರ್ ಅವರ ಬಗ್ಗೆ ಡಾ. ಗಣನಾಥ ಶೆಟ್ಟಿ ಎಕ್ಕಾರು ಅವರ ಲೇಖನ ಸಂಗತಿ ವಿದ್ವಾನ್ ರವಿಶಂಕರ್ ಅವರ ಭಾರತ, ಕೆನಡಾ, ಯೂರೋಪ್, ಅಮೇರಿಕಾ ದೇಶಗಳಲ್ಲಿ ನಾಟಕ ಸಿನಿಮಾಗಳಿಗೆ ಸಂಗೀತ ಸಂಯೋಜನೆ ಮಾಡಿ ಜಗತ್ತಿಗೆ ಪರಿಚಿತರಾದ ಬಗ್ಗೆ ತುಂಬಾ ಒಳ್ಳೆಯ ಮಾಹಿತಿ ನೀಡಿದ್ದಕ್ಕೆ ಹಾಗೂ ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ ಪತ್ರಿಕಾ ರಂಗದ ಒಳ–ಹೊರಗಿನ ವಿಶ್ಲೇಷಣೆ ಸಾಧಕರನ್ನು ಪರಿಚಯಿಸುವ ರೀತಿ ಬಹಳ ಇಷ್ಟವಾಗುವ ಲೇಖಕರಾದ ಶ್ರೀ ಯು.ರು. ಪಾಟೀಲರಿಗೆ ಅಭಿನಂದನೆಗಳು.

ಕು. ವಿನೋದ ನಾಗೇಂದ್ರ, ಕನಕಪುರ

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಗಾಂಧಿ ದೃಷ್ಟಿಕೋನದ ಲೇಖನಗಳು ನನಗೆ ಬಹಳ ಇಷ್ಟವಾಯಿತು. ಮಹಾತ್ಮರ ಆದರ್ಶದ ತತ್ವ ಪದಗಳನ್ನು ತಿಳಿಸಿಕೊಡುವ ಇಂತಹ ಲೇಖನಗಳನ್ನು ಹೆಚ್ಚುಹೆಚ್ಚಾಗಿ ಪ್ರಕಟಿಸಿ.

ಶ್ರೀನಾಥ್, ಪ್ರಾಂಶುಪಾಲರು

ಬಾಪು ಪ್ರಪಂಚ ಪತ್ರಿಕೆಯು ಸಂಕಷ್ಟ ಕಾಲದಲ್ಲಿ ಸಾಧಕರನ್ನು ಪರಿಚಯಿಸುತ್ತಿರುವುದು, ಕರೋನಾ ವಾರಿಯರ್ಸ್‌ಗಳಿಗೆ ಗೌರವಿಸುವುದು ಕರೋನಾಕ್ಕೆ ತುತ್ತಾದವರ ಸ್ಮರಣೆ, ಮಹೇಶ್ ಅವರ ಹೆಮ್ಮೆಯ ಕನ್ನಡಿಗ, ಕಸ್ತೂರ್‌ಬಾ ಗಾಂಧಿ – ಸರಳಾದೇವಿ ಅವರ ಬಗ್ಗೆ ಎ.ಎನ್. ತಿಪ್ಪನಗೌಡ ಅವರ ಜೀವನ ಚಿತ್ರಣ, ವೇಮಗಲ್ ಸೋಮಶೇಖರ್ ಅವರ ಲೇಖನ ಇನ್ನೂ ಮುಂತಾದವು ಓದುಗರ ಮನಸೂರೆಗೊಳ್ಳುತ್ತವೆ.

ಸುನೀತಾ ಪ್ರಸಾದ್, ಹೊಸಕೋಟೆ

ಬಾಪು ಪ್ರಪಂಚ ಕನ್ನಡ ಮಾಸಪತ್ರಿಕೆಯಲ್ಲಿ ಏಪ್ರಿಲ್ ಸಂಚಿಕೆಯಲ್ಲಿ ಸಂಪಾದಕರಾದ ಇಂದಿರಾ ಕೃಷ್ಣಪ್ಪರವರು ಬರೆದಿರುವ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಯ ಬೆಳಕಿನಲ್ಲಿ ಮಹಿಳಾ ಚಳುವಳಿ ಹಾಗೂ ನವಭಾರತ ನಿರ್ಮಾಪಕರು : ಲೋಕ ಮಾನ್ಯರು ಶತದಿನ ಸಂಸ್ಮರಣೆ ಲೇಖನಗಳು ಮುಂದುವರಿಯುತ್ತ ಬಂದಿರುವುದು ಬಹಳ ಅರ್ಥಪೂರ್ಣವಾಗಿದೆ. ಸ್ವಾತಂತ್ರಹೋರಾಟಗಾರರ ಹಾಗೂ ರಾಷ್ಟ್ರೀಯ ನಾಯಕರ ಜೀವನ ಮಾರ್ಗದರ್ಶನದ ಲೇಖನಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಕಟಿಸುವುದು.

ಎ.ಎಂ.ಮರಿಯಪ್ಪ

Chronology of events of personal & Public life of Mahatma Gandhi
(year wise - from 1869)

August 17. Lett Rajkot for Bombay.
August 19. Met Ranade, Badruddin Tyabji and Pherozeshah Mehta, in Bombay.
September 14. Reuter's cable from London to Durban released misleading report about the contents of the Green Pamphlet.
September 16. Europeans of Durban formed a European Protection Association, incited by the summary of Reuter's cable in the Natal papers.
September 26. Addressed public meeting, presided over by Pherozeshah Mehta,in Bombay.
September 29. Bombay meeting protested against ill-treatment of Indians in South Africa and decided to petition the Secretary of State for India for redress.
October 11. Left Bombay for Madras via Poona.
October 12. Stayed for the day in Poona; met Gokhale, Lokamanya Tilak and Dr Bhandarkar.
October 14. Arrived at Madras.
October 26. Addressed public meeting at Pachhiyappa College Hall, Madras.
October 31. Reached Calcutta via Nagpur. Met Surendranath Banerjea and other leaders.
November 12. Received cable from Dada Abdulla from Durban, asking him to return to Natal as Volksraad had recommended that Indians should be forced to reside in Locations.
November 13. Addressed letter to The Englishman South Africa.on the problem of Indians in
November 16. At Poona, addressed public meeting under the auspices of the Sarvajanik Sabha.
November 26. Mass meeting of Durban Europeans under the Mayor's chairmanship condemned Asiatic immigration. Audience hissed at mention of Gandhi's name. Colonial Patriotic Union set up.


To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.


ಗಾಂಧಿ ಭವನದ ಕಾರ್ಯಕ್ರಮಗಳು



ಡಾ. ಎಚ್.ಎಸ್. ದೊರೆಸ್ವಾಮಿ ಅವರ 104ನೇ ಜನ್ಮದಿನಾಚರಣೆ ದಿ. 14.06.2021ರಂದು ಅವರ ಮನೆಯಲ್ಲೇ ಗಾಂಧಿ ಭವನದಿಂದ ಗೌರವ ಸಮರ್ಪಣೆ ಮಾಡಿದಾಗ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ. ರಾಮಲಿಂಗೇಶ್ವರ, ಚಂದ್ರಪ್ಪ ಹಾಗೂ ಮಹಬೂಬ್



ಗಾಂಧಿ ಭವನದಲ್ಲಿ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಅರ್ಪಿಸಿದ ಸಂದರ್ಭದಲ್ಲಿ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ. ರಾಮಲಿಂಗೇಶ್ವರ, ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಭವನದ ಸಿಬ್ಬಂದಿವರ್ಗ ಮತ್ತು ಆರೋಗ್ಯಧಾಮ ಸಿಬ್ಬಂದಿ ಅವರಿದ್ದರು.



ಕರ್ನಾಟಕ ಸಾಹಿತ್ಯ – ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ದಿ. 10.04.2021ರಂದು ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಬೈರಮಂಗಲ ರಾಮೇಗೌಡ, ಬಿ.ಕೆ. ಶಿವರಾಂ ಅವರಿಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಚಿತ್ರದಲ್ಲಿ ಎ.ಸಿ. ಅಮ್ಮಿ ಚಂದ್ರಕುಮಾರ್, ಸಾ.ರಾ.ಗೋವಿಂದು, ಬಿ.ಆರ್. ರವಿಕಾಂತೇಗೌಡ, ಡಾ. ಸಿ. ಸೋಮಶೇಖರ್, ಎಂ. ತಿಮ್ಮಯ್ಯ ಭಾಗವಹಿಸಿದ್ದರು.



ದಿ.06.04.2021 ರಂದು ಅಲಮಟ್ಟಿಯಲ್ಲಿ ನಡೆದ 91ನೇ ಉಪ್ಪಿನ ಸತ್ಯಾಗ್ರಹ ದಿನಾಚರಣೆಯಲ್ಲಿ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ನೇತಾಜಿ ಗಾಂಧಿ, ಸಂತೋಷ್ ರೆಡ್ಡಿ, ಮಲ್ಲಿಕಾರ್ಜುನ ಬೃಂಗೀ ಮಠ ಭಾಗವಹಿಸಿದ್ದರು.



ವಿಜಯಪುರ ಶ್ರೀ ಬಸವ ಕಲ್ಯಾಣ ಮಠದಲ್ಲಿ ದಿ.24/06/20210ರಂದು ಶತಾಯುಷಿ, ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಹೆಚ್.ಎಸ್. ದೊರೆಸ್ವಾಮಿ ಹಾಗೂ ಸೂ.ರಂ. ರಾಮಯ್ಯ ಸ್ಮರಣಾಂಜಲಿ ಮತ್ತು ಕರೋನಾ ವಾರಿಯರ್ಸ್‌ಗೆ ಪ್ರಶಸ್ತಿ ವಿತರಣಾ ಸಭೆಯನ್ನು ಶ್ರೀ ಬಸವ ಕಲ್ಯಾಣಮಠ ಹಾಗೂ ಕ.ಗಾಂ.ಸ್ಮಾ.ನಿಧಿ ವತಿಯಿಂದ ಆಯೋಜಿಸಲಾಗಿತ್ತು. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಸೂ.ರಂ. ರಾಮಯ್ಯನವರ ಮಗ ಎಸ್. ಆರ್ .ರಂಗನಾಥ್, ಮಂಜುಳಾ ಮುನಿರಾಜು, ಹೆಚ್.ಎಸ್. ರುದ್ರೇಶ್ ಮೂರ್ತಿ, ರಾ.ಯು.ಯೋ. ರಾಜ್ಯ ಸಂಯೋಜಕ ಡಾ.ವಿ. ಪ್ರಶಾಂತ ಮತ್ತು ಕರೋನಾ ವಾರಿಯರ್ಸ್ ಹಾಗೂ ಅಧ್ಯಾಪಕರು ಇದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು



ಪ್ರಸಿದ್ಧ ಚಲನಚಿತ್ರ ನಿರ್ದೇಶಕರಾದ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ನಿರ್ಮಿಸುತ್ತಿರುವ ಗಾಂಧಿ ಚಿತ್ರದಲ್ಲಿ, ಕಸ್ತೂರ್‌ಬಾ ಅವರಿಗೆ ನೂಲುವುದನ್ನು ಕಲಿಸುವ ಸೇವಾಕರ್ತೆಯ ಪಾತ್ರದಲ್ಲಿ ಶ್ರೀಮತಿ ಗಿರಿಜಾ ಹೆಗ್ಡೆ, ವಲ್ಲಭ ನಿಕೇತನ ಇವರು ಅಭಿನಯಿಸಿದ್ದಕ್ಕಾಗಿ ಗೌರವಾರ್ಪಣೆ, ಚಿತ್ರದಲ್ಲಿ ಸನ್ಮಾನಿಸುತ್ತಿರವವರು ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು, ಜೀರಿಗೇ ಲೋಕೇಶ್ ಮತ್ತು ಸಿಬ್ಬಂದಿ ವರ್ಗ



ರಾ.ಯು.ಯೋ. ಕರ್ನಾಟಕ ವಲಯ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರು ದಿ. 23/05/2021ರಂದು ಕೋರಮಂಗಲ ಗ್ರಾಮದಲ್ಲಿ ಕರೋನ ಸಾಂಕ್ರಾಮಿಕ ಸೋಂಕಿನ ಬಗ್ಗೆ ಆರೋಗ್ಯ ಜಾಗೃತಿ ಮತ್ತು ಔಷಧಿ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಚಿತ್ರದಲ್ಲಿ: ರಾ.ಯು.ಯೋಜನೆಯ ರಾಜ್ಯ ಸಂಯೋಜಕ ಡಾ.ವಿ. ಪ್ರಶಾಂತ, ಎನ್.ಎಸ್.ಎಸ್ ಸ್ವಯಂ ಸೇವಕರಾದ ಹೆಚ್.ಎಸ್. ಸಾಗರ್ ಹಾಗೂ ಲಿಖಿತ್ ಗೌಡ ಇದ್ದಾರೆ.



ನೆಹರು ಯುವ ಕೇಂದ್ರ, ಕ.ಗಾಂ.ಸ್ಮಾ. ನಿಧಿ ಹಾಗೂ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಇವರು ದಿ.05.06.2021ರಂದು ಅಯ್ಯಪ್ಪ ನಗರದ ಕೆರೆಯ ಬಳಿ ಸಸಿ ನೆಡುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ರಾ.ಯು.ಯೋ.ನ ಡಾ. ವಿ. ಪ್ರಶಾಂತ, ಗುರುಸ್ವಾಮಿ, ಜೆ.ವಿ. ಮುನಿರಾಜು, ಎಂ. ಯೂಸೂಫ್, ನಿಜಾಮುದ್ದೀನ್, ಅಬ್ಬಾಸ್ ಇದ್ದಾರೆ.



ಕ.ಗಾಂ.ಸ್ಮಾ. ನಿಧಿ ಹಾಗೂ ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ರಾ.ಸೇ.ಯೋ. ದಂಡಿಗಾನಹಳ್ಳಿ ಗ್ರಾಮದಲ್ಲಿ ದಿ.30/05/2021ರಂದು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಆಹಾರ ಮತ್ತು ಮೆಡಿಕಲ್ ಕಿಟ್‌ಗಳನ್ನು ವಿತರಿಸಲಾಯಿತು. ಚಿತ್ರದಲ್ಲಿ: ಎನ್.ನಾರಾಯಣಸ್ವಾಮಿ, ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಕೆ.ಎಸ್. ನವೀನ್ ಕುಮಾರ್, ರಾ.ಯು.ಯೋಜನೆಯ ಡಾ.ವಿ. ಪ್ರಶಾಂತ, ಗಂಗಾಧರ್, ರತ್ನಮ್ಮ ಹಾಗೂ ಎಂ. ಸವಿತಾ,ಸಿ.ಮಾಲ,ಮಮತ, ನಿಜಾಮುದ್ದೀನ್ ಇದ್ದಾರೆ.



ಲಯನ್ಸ್ ಕ್ಲಬ್ ವತಿಯಿಂದ ದಿ. 28.03.2021ರಂದು ನಡೆದ ರೀಜನ್‌ಲ್ ಮೀಟ್ ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರನ್ನು ಸನ್ಮಾನಿಸಲಾಯಿತು.



ವಿಜಯಪುರದ ಸ್ವಾಮಿ ವಿವೇಕಾನಂದ ಐ.ಟಿ.ಐ ಕಾಲೇಜಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ದಿ. 30/062021ರಂದು 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ, ಶಾಲೆ ಮತ್ತು ಕಾಲೇಜು ಸಿಬ್ಬಂದಿಗಳಿಗೆ ಕೂವಿಶೀಲ್ಡ್ ಲಸಿಕೆ ಅಭಿಯಾನ ಆಯೋಜಿಸಲಾಗಿತ್ತು. ಚಿತ್ರದಲ್ಲಿ: ಶ್ರೀನಾಥ್, ರಾ.ಯು.ಯೋಯ ಡಾ.ವಿ. ಪ್ರಶಾಂತ, ಕುಮಾರಿ, ಮಮತಾ, ರೀಜ್ವಾನ, ಪವಿತ್ರ, ಎಂ.ಶಂಕರ್, ಮೊಹಮ್ಮದ್ ಅಬ್ಜಲ್, ಹರಿಣಿ, ಮಂಜುಳಾ, ಅಭಿಲಾಶ್, ವಿ.ಎಂ. ಕಿಶೋರ್ ಕುಮಾರ್, ಬಿ.ಉಮೇಶ್ ಮತ್ತು ಎನ್. ಸುದರ್ಶನ್ ಇದ್ದಾರೆ.

UDAYAKALA
Saturday, June 26, 2021

ಇತರರಿಗಾಗಿ ಬದುಕುವುದು ಸಮರ್ಥ ಜೀವನ: ಇಂದಿರಾ ಕೃಷ್ಣಪ್ಪ

ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಸೂ.ರಂ ರಾಮಯ್ಯ, ಡಾ. ಸಿದ್ದಲಿಂಗಯ್ಯ ಸ್ಮರಣಾಂಜಲಿ ಕಾರ್ಯಕ್ರಮ



ಪ್ರಜಾ ಪ್ರಗತಿ

ನಾಡಿನ ಸಾಕ್ಷಿಪ್ರಜ್ಞೆಯಾಗಿದ್ದರು

ಗಾಂಧಿ ಪರಿವಾರಕ್ಕೆ ನಮ್ಮ ನಾಡಿಗೆ ವಿಶೇಷವಾಗಿ ಸ್ವಾತಂತ್ರ್ಯ ಹೋರಾಟಗಾರರ ಸಮೂಹಕ್ಕೆ ಡಾ.ಎಚ್.ಎಸ್ ದೊರೆಸ್ವಾಮಿ ಅವರ ನಿಧನ ದುಃಖಕರ ಸಂಗತಿಯಾಗಿದೆ. ನಾಡಿನ ಸಾಕ್ಷಿ ಪ್ರಜ್ಞೆಯಂತಿದ್ದ ಅವರು ಗಾಂಧೀಜಿ ಅವರ ಸರಳ ... ಸಮಾಜದ ಅನ್ಯಾಯ, ಅಸಮಾನತೆ, ಶೋಷಣೆ ವಿರುದ್ಧ ನಿರಂತರ ಹೋರಾಟ ನಡೆಸಿದವರು. ... ವರ್ಷಗಳ ಹಿಂದಿನಿಂದಲೂ ಗಾಂಧಿ ಮಾರ್ಗವನ್ನು ಅನುಸರಿಸುತ್ತಾ ಯುವಪೀಳಿಗೆಗೆ ಗಾಂಧಿ ಬದುಕನ್ನು ತೋರಿದ ... ದೊರೆಸ್ವಾಮಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸುವೆ.

■ ವೂಡೆ.ಪಿ.ಕೃಷ್ಣ, ಅಧ್ಯಕ್ಷರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು.

ಕ್ರಾಂತಿ ದೀಪ
KRANTHI DEEPA REGIONAL KANNADA DAILY

ಮೇ 26ರಂದು ನಿನ್ನೆ ನಮ್ಮನ್ನೆಲ್ಲಾ ಅಗಲಿದ ಹಿರಿಯ ಚೇತನ ದೊರೆಸ್ವಾಮಿ ಅಯ್ಯಂಗಾರ್ ಅವರಿಗೂ ಶಿವಮೊಗ್ಗಕ್ಕೂ ಅಪಾರ ನಂಟಿತ್ತು. ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಜೊತೆ ಅವರಿಗೆ ಸಂಬಂಧವಿತ್ತು. ಗಾಂಧಿ ಬಸಪ್ಪ ಅವರ ಕುಟುಂಬದ ಗಾಂಧಿ ಜಯಂತಿಗೆ ಮೂರು ಬಾರಿ ಆಗಮಿಸಿದ್ದರು. ಆಗ ಅವರೊಡನೆ ಒಡನಾಡಿದ ಸವಿನೆನಪುಗಳನ್ನು ಗಾಂಧಿಬಸಪ್ಪನವರ ಪುತ್ರ, ನಿವೃತ್ತ ಉಪನ್ಯಾಸಕ ಎಸ್. ಬಿ. ಅಶೋಕಕುಮಾರ್ ಇಲ್ಲಿ ಹಂಚಿಕೊಂಡಿದ್ದಾರೆ.

ಸರಳ, ನೇರ ನುಡಿಯ ಹಿರಿಯ ಚೇತನ



ದೊರೆಸ್ವಾಮಿಯವರಿಗೊಂದು ನುಡಿನಮನ

ಪ್ರಜಾವಾಣಿ

ಗಾಂಧಿ ವಿಚಾರಗಳ ಪ್ರಸ್ತುತತೆ ಕಾರ್ಯಕ್ರಮ

March 14 2021

ಗಾಂಧಿ ಮನಸ್ಸು ಬೆಳೆಸಿಕೊಳ್ಳಿ

ಕುಣಿಗಲ್: ಪ್ರಸ್ತುತ ಸಮಾಜದಲ್ಲಿ ಯುವಜನತೆ ಗಾಂಧಿವಾದಿಗಳಾಗುವುದಕ್ಕಿಂತ ಗಾಂಧಿ ಮನಸ್ಸುಳ್ಳವರಾಗಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೋಡೇ ಪಿ. ಕೃಷ್ಣ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಸ್ಮಾರಕ ನಿಧಿ ಮತ್ತು ಕಾಡಶೆಟ್ಟಿಹಳ್ಳಿ ದ್ಯೆತ್ಯ ಮಾರಮ್ಮ ದೇವಾಲಯ ಚಾರಿಟಬಲ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವ್ಯಸನಮುಕ್ತಾ ಸಮಾಜಕ್ಕಾಗಿ ಯುವ...



ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ ಗೋವಿಂದರಾಯ ಬರೆದಿರುವ 'ಗಾಂಧಿ ಎಂಬ ಕೌತುಕ' ಪುಸ್ತಕವನ್ನು ತುಮಕೂರು ವಿವಿಯ ಕುಲಪತಿ ಡಾ. ವೈಎಸ್ ಸಿದ್ದೇಗೌಡ ಬಿಡುಗಡೆ ಮಾಡಿದರು

ಕೋಮು ಸೌಹಾರ್ದತೆ, ಮದ್ಯಮುಕ್ತಾ ಮತ್ತು ಅಸ್ಪೃಶ್ಯತೆ ನಿರ್ಮೂಲನೆಯಾಗದ ಹೊರತು ಉತ್ತಮ ಸಮಾಜ ನಿರ್ಮಾಣವಾಗುವುದಿಲ್ಲ. ಯುವಜನತೆ ಹಲವಾರು ಸಂದಿಗ್ಧಗಳಿಗೆ ಬಲಿಯಾಗಿ ದುಶ್ಚಟಕ್ಕೆ ಬಲಿಯಾಗದೆ ಗಾಂಧೀಜೀಯ ಸರಳತೆ, ಸತ್ಯ ಮತ್ತು ಅಹಿಂಸಾ ತತ್ವಗಳನ್ನು ಅಳವಡಿಸಿಕೊಂಡು ಮೌಲ್ಯಯುತ ಜೀವನಕ್ಕೆ ... ಸಮಾಜಕ್ಕೆ ... ಎಂದರು.

ವಿಜಯವಾಣಿ

Apr 6, 2021


ಡಾ.ವೂಡೇ ಪಿ.ಕೃಷ್ಣ ಅಭಿಮತ | ಡಾ.ಕೆ.ಪಿ. ಪುತ್ತೂರಾಯರ ಜೀವನ ದರ್ಪಣ ಕೃತಿ ಬಿಡುಗಡೆ

ಪರಸ್ಪರ ಪ್ರೀತಿಯಿಂದ ನೈತಿಕತೆ ಮರುಸ್ಥಾಪನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪ್ರಸ್ತುತ ಕಾಲಘಟ್ಟದಲ್ಲಿ ನೈತಿಕತೆಯ ಮರುಸ್ಥಾಪನೆಗಾಗಿ ಪರಸ್ಪರ ಪ್ರೀತಿಯಿಂದ ಮನಸ್ಸುಗಳನ್ನು ಕಟ್ಟುವ ಕೆಲಸವಾಗಬೇಕಿದೆ ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಹೇಳಿದ್ದಾರೆ.

» ಎಲ್ಲ ಕ್ಷೇತ್ರದವರು ಸಾಹಿತ್ಯ ರಚಿಸಲಿ



'ಜೀವನ ದರ್ಪಣ' ಪುಸ್ತಕವನ್ನು ಡಾ.ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು. ಡಾ.ಕೆ.ಪಿ. ಪುತ್ತೂರಾಯ, ಬಿ.ಕೆ. ಪೂರ್ಣಿಮಾ, ಟ್ರಸ್ಟಿನ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ ಮತ್ತಿತರಿದ್ದರು.

'ಜೀವನ ದರ್ಪಣ' ಪುಸ್ತಕದಲ್ಲಿ ಸಮಾಜಮುಖಿ ಸಂದೇಶ ಮತ್ತು ಉಪದೇಶಗಳಿವೆ. ಸಂತೋಷ ಹಾಗೂ ಸಾರ್ಥಕ ಜೀವನ ನಡೆಸಲು ಅಗತ್ಯ ಸಲಹೆಗಳಿವೆ. ವೈಚಾರಿಕ, ಶೈಕ್ಷಣಿಕ, ಸಾಂಸಾರಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಉಪಯುಕ್ತ ವಿಷಯಗಳ ಮೇಲೆ ಚಿಂತನ ಮಂಥನವಿದೆ.

| ಡಾ.ಕೆ.ಪಿ. ಪುತ್ತೂರಾಯ ಸಾಹಿತಿ

ಹಾವೇರಿ

ಮೈಲಾರ ಮಹದೇವಪ್ಪ ಜೀವನ ಚರಿತ್ರೆ ತಿಳಿಸಿ

ಹುತಾತ್ಮ ದಿನಾಚರಣೆಯಲ್ಲಿ ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ.ವಿ.ಮುರಿಗೆಪ್ಪ ಸಲಹೆ

ಸ್ಮಾರಕ ಅಭಿವೃದ್ಧಿಗೆ 5 ಕೋಟಿ ... ಪ್ರಸ್ತಾವನೆ




ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ಅಗತ್ಯ

ಸ್ಮಾರಕ ಅಭಿವೃದ್ಧಿ: ₹5 ಕೋಟಿಗೆ ಪ್ರಸ್ತಾವ

'ಆದರ್ಶ ಅಮರಕರಣೀಯ'





ಗಾಂಧಿ ಪರಿವಾರಕ್ಕೆ ನಮ್ಮ ನಾಡಿಗೆ ವಿಶೇಷವಾಗಿ ಸ್ವಾತಂತ್ರ್ಯ ಹೋರಾಟಗಾರರ ಸಮೂಹಕ್ಕೆ ಡಾ.ಹೆಚ್.ಎಸ್ ... ನಿಧನ ದುಃಖಕರವಾದ ಸಂಗತಿಯಾಗಿದೆ ಎಂದು ತಿಳಿಸಲು ವಿಷಾಧಿಸುತ್ತೇನೆ ... ಅಪ್ಪಿಕೊಂಡು ಬದುಕಿ ನಮಗೆಲ್ಲಾ ... ಷಣೆ ವಿರುದ್ಧ ನಿರಂತರ ಹೋರಾಡಿದ ... ನಂತೆ ಸರಳ ವಿವಾಹವಾಗಿ ಖಾದೀ ... ಶ್ರೀ ಸಿದ್ಧವನಹಳ್ಳಿ ಕೃಷ್ಣ ಶರ್ಮರ ... ದ ಹಿರಿಯರೊಡನೆ ಸ್ವಾತಂತ್ರ್ಯದ ... ಡಿದ್ದೇವೆ. ಗಾಂಧೀಜಿಯವರ ವ್ಯಕ್ತಿ, ... ಗಾಂಧೀ ಬದುನ್ನು ತೋರಿ ಹೋಗಿದ್ದಾರೆ. ... ದ ಛಾಪು ಮೂಡಿಸಿದ ... ರ್ನಾಟಕ ಗಾಂಧೀ ಸ್ಮಾರಕ ನಿಧಿ ಪರಿವಾರದ ... ನೆ.

... ಧೀ ಸ್ಮಾರಕ ನಿಧಿ, ಬೆಂಗಳೂರು.



ಕರ್ನಾಟಕ ಸಾಹಿತ್ಯ - ಸಾಂಸ್ಕೃತಿ ಪ್ರತಿಷ್ಠಾನ ವತಿಯಿಂದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ವಿ.ಸಿ. ಅಮ್ಮ ಚಂದ್ರಕುಮಾರ ಅವರ ಅಧ್ಯಕ್ಷ ... ಸಂಕಲನ ... ಪ್ರಯೋಜನ ಕವನ ಸಂಕಲನವನ್ನು ... ಸಾ.ರಾ.ಗೋವಿಂದು, ಸಿ. ಸೋಮಶೇಖರ್, ವೂಡೇ ಪಿ.ಕೃಷ್ಣ ... ಎಂ. ತಿಮ್ಮಯ್ಯ ಮತ್ತಿತರರು ಜತೆಗಿದ್ದರು.



ಸ್ವಾತಂತ್ರ್ಯ ಹೋರಾಟಗಾರರು ನಮ್ಮ ಕನ್ನಡಿಗರು : ಇಂದಿರಾ ಕೃಷ್ಣಪ್ಪ

ಪತ್ರಿಕಾ ವರದಿಗಳು

ಲಸಿಕೆ ಪಡೆದು ಆರೋಗ್ಯದಿಂದಿರಿ: ಶ್ರೀನಾಥ್

ಮನೆಗಳಲ್ಲೇ ಆಕ್ಸಿಮೀಟರ್ ಬಳಸಿ

ಪರಿಸರ ಉಳಿವಿಗೆ ಗಿಡಮರ ಬೆಳೆಸಿ

ಯೋಗಕ್ಕೆ ಜಗತ್ತಿನಲ್ಲಿ ಉತ್ತಮ ಸ್ಥಾನಮಾನ: ಡಾ.ಪ್ರಶಾಂತ

ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

Bell remained tight-lipped for days afterwards. But one morning in March 1770, she came rushing out to the garden filled with excitement. "Sheriff jes' rid off! He tol' massa been some big fightin' up north, somewhere called Boston! Massa sho' upset." Later Luther, the buggy driver, brought more information. "Dem Boston peoples got so mad at dat king 'crost the big water, dey marched on his soldiers. Dem soldiers start shootin', an' first one kilt was a nigger name of Crispus Attucks! Dey callin' it de 'Boston Massacre." From then on Luther brought regular news from slaves, stable hands and other drivers he talked to about the trouble with England. And scarcely a day passed when the field hands did not hear from an adjoining plantation, or a slave passing on a mule, a rising, lingering, sing song, "Yoo-hoo-ah-hoo! Don't you hear me callin' you?" Then the nearest field hand would go running to pick up the latest report and rush back to tell the others. News of what was happening "up north" continued to come in fragments across the changing seasons. As Kunta dropped pebble after pebble into his gourd calendar, he tried to understand it all. It became increasingly clear to him that the toubob folks were moving towards a crisis with the toubob king. Kunta was especially interested in the thing called "freedom." As far as he could find out from the fiddler, it meant having no massa, doing as one wanted and going where one pleased. But why would the white folks have to talk about freedom, he wondered. The biggest excitement came with the news late in 1775 that Lord Dun more, the Royal Governor of Virginia, had proclaimed freedom for slaves who would serve in his fleet of ships and help the toubob king. Not long afterwards, Massa Waller called Bell to the living-room, Twice he read slowly an item in the Virginia Gazette. He then ordered Bell to "read" it to the slaves, telling them what it meant. It said that the Virginia House of Burgesses had de creed "... death without benefit of clergy for all Negro or other slaves conspiring to rebel." "What does it mean?" a field hand asked. "It means," the fiddler said drily, "uprise, an' white folks won't call no preacher when they kill you."

To be continued...



ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಸತ್ಯಜಿತ್ ರೇ (ಮೇ 2, 1921 – ಏಪ್ರಿಲ್ 23, 1992)

ವಿಶ್ವ ಚಲನಚಿತ್ರರಂಗದ ಪ್ರಸಿದ್ಧ ನಿರ್ದೇಶಕ, ನಿರ್ಮಾಪಕ, ಚಿತ್ರಕಥೆಗಾರ, ಸಂಗೀತ ಸಂಯೋಜಕ ಮತ್ತು ಕಲಾ ವಿನ್ಯಾಸಕ ಎಲ್ಲವೂ ಸಾಮರಸ್ಯಗೊಂಡ ಅತ್ಯದ್ಭುತ ಪ್ರತಿಭೆ ಸತ್ಯಜಿತ್ ರೇ ಅವರು, ಕಲ್ಕತ್ತೆಯಲ್ಲಿ ಜನಿಸಿದರು. ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿ ಕಲೆಯನ್ನು ಅಭ್ಯಸಿಸಿದ ಸತ್ಯಜಿತ್ ರೇ ಅವರಿಗೆ ಚಿಕ್ಕಂದಿನಿಂದಲೂ ಚಲನಚಿತ್ರ ಮತ್ತು ವಿಶ್ವಪ್ರಸಿದ್ಧ ಸಂಗೀತ ಕೇಳುವುದರಲ್ಲಿ ಆಸಕ್ತಿ 1947ರಲ್ಲಿ ಕಲ್ಕತ್ತೆಯಲ್ಲಿ ಪ್ರಥಮವಾಗಿ ಚಲನಚಿತ್ರ ಸೊಸೈಟಿಯನ್ನು ಪ್ರಾರಂಭಿಸಿದರು. ಅವರು 1955ರಲ್ಲಿ ನಿರ್ಮಿಸಿದ 'ಪಥೇರ್ ಪಂಚಾಲಿ' ಅಪಾರ ಯಶಸ್ಸಿನ ಜೊತೆಗೆ ಕೇನ್ಸ್ ಅಂತರರಾಷ್ಟ್ರೀಯ ಉತ್ಸವದಲ್ಲಿ, ಪ್ರತಿಷ್ಠಿತ 'ಗ್ರಾಂಡ್ ಪ್ರಿಕ್ಸ್' ಗೌರವಕ್ಕೆ ಪಾತ್ರವಾಯಿತು. ಇದರೊಂದಿಗೆ ಅಪರಾಜಿತೋ ಮತ್ತು ಅಪೂರ್ ಸಂಸಾರ್ ಚಿತ್ರಗಳನ್ನು ಅಕಿರಾ ಕುರೋಸಾವಾ, ಸ್ಟೀವನ್ ಸ್ಪೀಲ್‌ಬರ್ಗ್, ಮಾರ್ಟಿನ್ ಸೋರ್ಸೆಸಿ ಮೊದಲಾದ ಅನೇಕ ಹೆಸರಾಂತ ನಿರ್ದೇಶಕರ ಪ್ರಶಂಸೆಗೆ ಪಾತ್ರವಾಯಿತು. ಅವರ ಚಿತ್ರಗಳು ಭಾಷೆಗೆ ಮಿಗಿಲಾದ ಮನುಷ್ಯರ ಜೀವನ, ಮಾನವ ಸಂಬಂಧಗಳು, ಬದುಕಿನ ಹೋರಾಟಗಳು, ಸಂತಸ ಮತ್ತು ದುಃಖಗಳನ್ನು ಸಮಗ್ರವಾಗಿ ಕಟ್ಟಿಕೊಡುವಂತಹವಾಗಿದ್ದವು. ತಂತ್ರಜ್ಞಾನವು ದಾರಿಯನ್ನು ಕ್ರಮಿಸಲಿಕ್ಕೆ ಬೇಕಿರುವ ಸಾಧನವಷ್ಟೆ. ಅಂತಃಸತ್ವವಿಲ್ಲದ ವಿನ್ಯಾಸ ಅದ್ದೂರಿ ಚಿತ್ರ ನಿರ್ಮಾಣ ಮಾಡುವುದರ ಬಗ್ಗೆ ಅವರಿಗೆ ಆಸಕ್ತಿಯಿರಲಿಲ್ಲ. ಬರ್ಲಿನ್ ಚಿತ್ರೋತ್ಸವದಲ್ಲಿ ಸತ್ಯಜಿತ್‌ರೇ ಅವರನ್ನು ವಿಶ್ವದ ಮೂವರು ಶ್ರೇಷ್ಠ ನಿರ್ದೇಶಕರಲ್ಲೊಬ್ಬರು ಎಂದು ಕೊಂಡಾಡಲಾಗಿತ್ತು. 1992ರಲ್ಲಿ ಅವರಿಗೆ ಆಸ್ಕರ್ ಪ್ರಶಸ್ತಿ ಜೀವಮಾನದ ಸಾಧನೆಯ ಗೌರವ, ಫ್ರಾನ್ಸ್ ದೇಶದ ಪ್ರತಿಷ್ಠಿತ 'ಲೆಜಿನ್ ಡಿ ಹಾನರ್', ರಾಮನ್ ಮೆಗ್ಸಾಸೆ ಪ್ರಶಸ್ತಿ ಹಗೂ ಭಾರತ ಸರ್ಕಾರದ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ' ಮತ್ತು 'ಭಾರತರತ್ನ' ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗಿತ್ತು.


ರಾಚೆಲ್ ಲೂಯಿಸ್ ಕಾರ್ಸನ್ (ಮೇ 27,1907 – ಏಪ್ರಿಲ್ 14,1964)



ಅಮೇರಿಕಾದ ಜೀವಶಾಸ್ತ್ರಜ್ಞೆ, ಪರಿಸರ ಪ್ರೇಮಿ, ಲೇಖಕಿ ರಾಚೆಲ್ ಲೂಯಿಸ್ ಕಾರ್ಸನ್ ಅವರು ಪೆನ್ಸಿಲ್ವೇನಿಯಾದ ಸ್ಪ್ರಿಂಗ್ಡೇಲ್ ನಲ್ಲಿ ಜನಿಸಿದರು. ಇವರು ಎಂಟನೇ ವಯಸ್ಸಿನಲ್ಲಿಯೇ ಪ್ರಾಣಿಗಳ ಕಥೆಗಳನ್ನು ಬರೆಯಲಾರಂಭಿಸಿದರು. ಇವರಿಗೆ ನಿಸರ್ಗ ವಿಶೇಷವಾಗಿ "ಸಾಗರ" ನೆಚ್ಚಿನ ಸಾಹಿತ್ಯ ವಸ್ತುವಾಗಿತ್ತು. ಇವರು ಸಾಗರ ಮತ್ತು ಸಾಗರ ಜೀವಿಗಳ ಸಂಶೋಧನೆ ಮತ್ತು ಸಮಾಲೋಚನೆಗಳ ಜೊತೆಗೆ, ದಿ ಬಾಲ್ಟಿಮೋರ್ ಸನ್ ಮತ್ತು ಇತರ ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆಯಲಾರಂಭಿಸಿದರು. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ 1951ರಲ್ಲಿ "ದ ಸೀ ಅರೌಂಡ್ ಅಸ್" ಎಂಬ ಕೃತಿಯನ್ನು ಪ್ರಕಟಿಸಲು ಉತ್ಸುಕವಾಗಿತ್ತು. ಈ ಕೃತಿಗೆ ಯು.ಎಸ್.ನ್ಯಾಷನಲ್ ಬುಕ್ ಪ್ರಶಸ್ತಿಯನ್ನು ಪಡೆದರು. ಇವರ "ದಿ ಎಡ್ಜ್ ಆಫ್ ದ ಸೀ" ಮೊದಲ ಕೃತಿಯಾಗಿದೆ. "ಅಂಡರ್ ದ ಸೀ" ಎಂಬ ಪ್ರಬಂಧವು ಸಾಗರ ಕುರಿತಾಗಿದೆ. "ಹೆಲ್ಪ್ ಯುವರ್ ಚೈಲ್ಡ್ ಟು ವಂಡರ್"(1956)ಮತ್ತು "ಅವರ್ ಎವರ್ ಚೇಂಜಿಗ್ ಶೋರ್"(1957),ಇವರ ಪರಿಸರ ವಿಜ್ಞಾನದ ಬಗೆಗಿನ ಪುಸ್ತಕವಾಗಿದೆ. ಅಲ್ಲದೆ ಸಾಗರ ಜೀವನ ಎಂಬ ಅದ್ಭುತ ಪ್ರಪಂಚ ಮತ್ತು ಸೌಂದರ್ಯದ ಬಗ್ಗೆ ಹಲವಾರು ಲೇಖನಗಳನ್ನು ಇವರು ಬರೆದಿದ್ದಾರೆ. 1980ರ ಜೂನ್ 9ರಂದು ಕಾರ್ಸನ್ ಅವರಿಗೆ ಅಮೇರಿಕದ ಅತ್ಯುನ್ನತ ನಾಗರೀಕ ಗೌರವವಾದ ಅಧ್ಯಕ್ಷೀಯ ಪದಕವನ್ನು ಪ್ರಧಾನ ಮಾಡಲಾಗಿತ್ತು.

ಜುಬಿನ್ ಮೆಹ್ತಾ (ಏಪ್ರಿಲ್ 29, 1936)

ಪಾಶ್ಚಾತ್ಯ ಸಂಗೀತ ಸಾಧಕರಲ್ಲಿ ಭಾರತೀಯರಾದ ಜುಬಿನ್ ಮೆಹ್ತಾ ಅವರು ಪ್ರಮುಖರಾಗಿದ್ದಾರೆ. ಇವರು ಏಪ್ರಿಲ್ 29, 1936ರಂದು ಮುಂಬಯಿನ ಪಾರ್ಸಿ ಕುಟುಂಬದಲ್ಲಿ ಜನಿಸಿದರು. ಬೃಹತ್ ವಾದ್ಯಗೋಷ್ಠಿಗಳ ನಿರ್ವಹಣೆ, ಸಂಗೀತ ಸಂಯೋಜನೆಗಳಲ್ಲಿ ಇವರು



ವಿಶ್ವಮಾನ್ಯರಾಗಿದ್ದಾರೆ. ಅಮೆರಿಕದಲ್ಲಿ ನೆಲೆಸಿದ್ದರೂ, ಭಾರತೀಯ ಪೌರತ್ವವನ್ನು ಉಳಿಸಿಕೊಂಡಿದ್ದಾರೆ. ಲಿವರ್ ಪೂಲ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಂಗೀತ ನಿರ್ವಹಣಾ ಸ್ಪರ್ಧೆಯಲ್ಲಿ ಜಯಶೀಲರಾಗಿ ರಾಯಲ್ ಲಿವರ್ ಪೂಲ್ ಫಿಲ್ ಹಾರ್ಮೋನಿಕ್ ತಂಡದ ಸಹ ನಿರ್ವಾಹಕರಾಗಿ, ನ್ಯೂಯಾರ್ಕ್ ಫಿಲ್ ಹಾರ್ಮೋನಿಕ್ ಸಮೂಹದ ಸಂಗೀತ ನಿರ್ದೇಶಕ ಮತ್ತು ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಫಿಯೋರೆನ್ಟಿಯೋದ ಪ್ರಧಾನ ನಿರ್ವಾಹಕ, ಮ್ಯೂನಿಚ್ ಬವೇರಿಯನ್ ಸ್ಟೇಟ್ ಒಪೇರಾದ ಸಂಗೀತ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಮೆಹ್ತಾರವರು ವಿಯೆನ್ನಾದಲ್ಲಿ ಜರುಗುವ ಪ್ರತಿಷ್ಠಿತ ಹೊಸವರ್ಷದ ಸಂಗೀತ ಕಚೇರಿಗಳನ್ನು ಅನೇಕ ಬಾರಿ ನಡೆಸಿಕೊಟ್ಟಿದ್ದಾರೆ. ಇವರು ರೋಮ್ ನಗರದಲ್ಲಿ ನಡೆದ ಡೆಲ್ ಮ್ಯಾಗಿಯೋ ಮ್ಯೂಸಿಕಲ್ ಫಿಯೋರೆನ್ಟಿನೋ ಸಂಗೀತ ಗೋಷ್ಠಿ ಮತ್ತು ಟಿಯೇಟ್ರೋ ಡೆಲ್ ಒಪೇರಾ ಡಿ ರೋಮಾ ವಾದ್ಯಗೋಷ್ಠಿಗಳನ್ನು ನಿರ್ವಹಿಸಿದ್ದರು. ಇವರ ಕಚೇರಿಗಳಲ್ಲಿ ಖ್ಯಾತ ಕಲಾವಿದರಾದ ಕ್ಯಾಥೆರಿನ್ ಮಾಲ್ಫಿಟಾಂಗೋ, ಪ್ಲಾಸಿಡೋ ಡೊಮಿಂಗೋ, ರುಗ್ಗೆರೋ ರೈಮೊಂಡಿ ಭಾಗವಹಿಸಿದ್ದಾರೆ. ಯುಗೋಸ್ಲಾವಿಯಾದ ಯುದ್ಧಗಳಲ್ಲಿ ಸಂತ್ರಸ್ತರಾದವರ ನೆರವಿಗಾಗಿ ಸರ್ಜೇವೋ ಸಿಂಫೋನಿ ಆರ್ಕೆಸ್ಟ್ರಾ ಜೊತೆಗೂಡಿ 'ಮೊಜರತ್ ರೆಖೀಮ್' ಪ್ರದರ್ಶನವನ್ನು ನಡೆಸಿದ್ದರು. ಹಿಂದೂ ಮಹಾಸಾಗರದ ಸುನಾಮಿ ಸಂತ್ರಸ್ತರ ನೆರವಿಗಾಗಿ ಕಾರ್ಯಕ್ರಮ ನಡೆಸಿದ್ದರು. ಇವರಿಗೆ ವಿಶ್ವದ ನೂರಾರು ಪ್ರತಿಷ್ಠಿತ ಗೌರವಗಳು ಭಾರತ ಸರ್ಕಾರದ ಪದ್ಮಭೂಷಣ, ಪದ್ಮವಿಭೂಷಣ ಗೌರವಗಳು ಸಂದಿವೆ.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049